ಪೌಲನು ಬಳಸಿದ ನಿದ್ರೆ ಬಗೆಗಿನ ರೂಪಕ ಅಲಂಕಾರವು ಮರಣದ ವಿಚಾರವನ್ನು ತಿಳಿಗೊಳಿಸುತ್ತದೆ. ಪ್ಲೇಟೋನಿಕ ಮತ್ತು ಸ್ಟೋಯಿಕ್ ತತ್ವಜ್ಞಾನಿಗಳ ನಿರಾಶಾವಾದದ ದೃಷ್ಟಿಯು ಪೌಲನು ಜೀವಿಸಿದ್ದ ಗ್ರೀಕೋ ರೋಮನ ಜಗತ್ತಿನಲ್ಲಿ ಇರುವಂಥದ್ದಾಗಿತ್ತು. ತಲೆಬುರುಡೆಯ ಆಕಾರದ ಬಟ್ಟಲುಗಳು; ಗರ್ಭಪಾತ, ವೇಶ್ಯಾವಾಟಿಕೆ, ಮತ್ತು ಮಕ್ಕಳನ್ನು ಸಾಮಾನ್ಯ ಚಟುವಟಿಕೆಗಳು ಪ್ರಚಲಿತವಾಗಿದ್ದವು. ಸಮಾಧಿಗಳಲ್ಲಿ ಅನೇಕವು “N F F N S N C” ಎಂಬ ಅಕ್ಷರಗಳಿಂದ ಕೆತ್ತಲ್ಪಟ್ಟಿದ್ದು, ಲ್ಯಾಟಿನ ಚಿಕ್ಕ ವಿವರಣೆಯ *non fui, fui, non sum, non curo*, “ನಾನು ಆಗಿರಲಿಲ್ಲ, ನಾನು ಆಗಿದ್ದೆನು, ನಾನು ಆಗಿಲ್ಲ, ನಾನು ಅಲಕ್ಷಿಸುತ್ತೇನೆ” ಎಂಬ ಅರ್ಥವನ್ನು ಕೊಡುತ್ತಿದ್ದವು.[13] “ಸ್ಟಾಯಿಕ್ ಮೂಲ ಪದವು ತತ್ವಗಳು ಆಸಕ್ತಿರಹಿತ ಆಗಿವೆ”; ಈ ತತ್ವದ ಪ್ರಕಾರ, “ಅವನಿಗೆ ಅಥವಾ ಅವಳಿಗೆ ಯಾವ ಹಣೆಬರಹ ಕಳಿಸಲ್ಪಡುತ್ತದೆಂಬುದನ್ನು ತಪ್ಪಿಸಿಕೊಳ್ಳುವುದಕ್ಕೆ ಏನೂ ಮಾಡಲಿಕ್ಕಾಗದು ಎಂದು ಒಳ್ಳೆಯ ವ್ಯಕ್ತಿ ಗುರುತಿಸುತ್ತಾನೆ.”[14] ಯೇಸುವಿನ ದೇಹಸಹಿತವಾದ ಪುನರುತ್ಥಾನವನ್ನು ಅಂಗೀಕರಿಸಿದಾಗ, ಈ ಭಾವನೆಯ ಹಿಡಿತವನ್ನು ಕಡಿದುಹಾಕಬಹುದು.

**ವಚನ 19.** ಪುನರುತ್ಥಾನದಲ್ಲಿ ನಂಬಿಕೆಯಿಲ್ಲದವರು,ಮರಣಿಸಿದವರು ಶಾಶ್ವತವಾಗಿ ನಾಶವನ್ನು ಹೊಂದುವರು ಎಂಬುದಾಗಿ ಯೋಚಿಸುವವರು ನಿರೀಕ್ಷೆಯನ್ನು ಸಂಪೂರ್ಣವಾಗಿ ಕಳೆದು ಕೊಂಡವರಾಗಿರುತ್ತಾರೆ. ಕ್ರಿಸ್ತನ ಪುನರುತ್ಥಾನದ ಸಂದೇಶಕ್ಕಿಂತಲೂ ಯಾವುದೇ ನಿರೀಕ್ಷೆಯ ಸಂದೇಶವೂ ಮನುಕುಲಕ್ಕಿಲ್ಲ ಎಂದು ಪೌಲನು ತಿಳಿದಿದ್ದಾನೆ. ಸುವಾರ್ತೆ ಸಂದೇಶವು ಯೇಸು ಎದ್ದಿದ್ದಾನೆ ಎಂಬ ಮೂಲದ ಮೇಲೆ ಕಟ್ಟಲ್ಪಟ್ಟಿದೆ. ಆ ಸಂದೇಶವು ಸುಳ್ಳಾದದ್ದಾರೆ, ಇದರ ಅರ್ಥ ಯಾವುದೇ ನಿರೀಕ್ಷೆಯು ಅಸ್ತಿತ್ವದಲ್ಲಿ ಇಲ್ಲ. ಕ್ರೈಸ್ತರು **ನಿರ್ಭಾಗ್ಯರೇ ಸರಿ.** ಕ್ರಿಸ್ತನಲ್ಲಿಯ ನಿರೀಕ್ಷೆಯು ಮನುಕುಲಕ್ಕೆ ಇರುವ ಒಂದೇ ನಿರೀಕ್ಷೆಯು ಆಗಿದೆ.

ಒಬ್ಬ ವ್ಯಕ್ತಿಯು ಮರಣದ ನಿದ್ರೆಗೆ ಜಾರಿದಾಗ ಮತ್ತು ಕರ್ತನು ಮರಳಿ ಬಂದು ಸತ್ತವರನ್ನು ಎಬ್ಬಿಸಿದಾಗಿನ ಸಮಯ ಇವುಗಳ ಮಧ್ಯದ ಸಂಭವಿಸುವ ಆವಸ್ಥೆಯನ್ನು ಅಪೊಸ್ತಲನು ನೋಡಲು ಹೋಗುವುದಿಲ್ಲ. ಪುನರುತ್ಥಾನಿತ ದೇಹದಲ್ಲಿ ಜೀವವು ಮರಣದಲ್ಲಿ ಆರಂಭವಾಗುತ್ತದೆಯೋ ಅಥವಾ ಕರ್ತನು ಮರಳಿದಾಗ ಆರಂಭವಾಗುತ್ತದೆಯೋ? ಪೌಲನು ಏನನ್ನು ಹೇಳುವುದಿಲ್ಲ. ನಿತ್ಯಜೀವವು ದೇಹಸಹಿತವಾಗಿರುತ್ತದೆ ಎಂಬುದು ನಿಶ್ಚಿತವಾದದ್ದು ಆಗಿದೆ. ಭೌತಿಕ ದೇಹ ಮತ್ತು ಭೌತಿಕ ಸಂಗತಿಗಳು ಸ್ವಭಾವತಃ ಕೆಟ್ಟವುಗಳು ಆಗಿರುವುದಿಲ್ಲ. ಕೆಟ್ಟತನ ಮತ್ತು ಪಾಪ ಜನರು ಮಾಡುವ ನೈತಿಕ ಆಯ್ಕೆಯ ಮೇಲಿನ ಪರಿಣಾಮವಾಗಿದೆಯೇ ಹೊರತು, ದೇಹವು ಒಳಗೊಂಡ ಅಂಶಗಳ ಮೇಲೆ ಅಲ್ಲ.

## ಯಾವ ತರದ ದೇಹ? (15:20-28)

**[20]ಆದರೆ ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದೇ ಇದ್ದಾನೆ; ನಿದ್ರೆ ಹೋದವರಲ್ಲಿ ಪ್ರಥಮಫಲವಾದನು, [21]ಮನುಷ್ಯನ ಮೂಲಕ ಮರಣವು ಉಂಟಾದ ಕಾರಣ ಮನುಷ್ಯನ ಮೂಲಕ ಸತ್ತವರಿಗೆ ಪುನರುತ್ಥಾನವುಂಟಾಗುವದು. [22]ಯಾವ ಪ್ರಕಾರ ಆದಾಮನ ಸಂಬಂಧದಿಂದ ಎಲ್ಲರೂ ಸಾಯುವವರಾದರೋ ಅದೇ ಪ್ರಕಾರ ಕ್ರಿಸ್ತನ ಸಂಬಂಧದಿಂದ ಎಲ್ಲರೂ ಜೀವಿತರಾಗುವರು. [23]ಆದರೆ ಪ್ರತಿಯೊಬ್ಬನೂ ತನ್ನ ತನ್ನ ತರಗತಿಯಲ್ಲಿರುವನು.**

**ಕ್ರಿಸ್ತನು ಪ್ರಥಮ ಫಲ; ತರುವಾಯ ಕ್ರಿಸ್ತನ ಪ್ರತ್ಯಕ್ಷತೆಯಲ್ಲಿ ಆತನವರು ಎದ್ದು ಬರುವರು. [24]ಆಮೇಲೆ ಆತನು ಎಲ್ಲಾ ಧೊರೆತನವನ್ನೂ ಎಲ್ಲಾ ಅಧಿಕಾರವನ್ನೂ ಬಲವನನ್ನೂ ನಿವೃತ್ತಿ ಮಾಡಿತಂದೆಯಾಗಿರುವ ದೇವರಿಗೆ ರಾಜ್ಯವನ್ನು ಒಪ್ಪಿಸಿ ಕೊಡುವಾಗ ಸಮಾಪ್ತಿ. [25]ಯಾಕೆಂದರೆ ತಾನು ಎಲ್ಲಾ ವಿರೋಧಿಗಳನ್ನು ತನ್ನ ಪಾದದ ಕೆಳಗೆ ಹಾಕಿಕೊಳ್ಳುವ ತನಕ ರಾಜ್ಯವನ್ನಾಳುವದು ಅವಶ್ಯ. [26]ಮರಣವು ಕಡೇ ಶತ್ರುವಾಗಿ ನಿವೃತ್ತಿಯಾಗುವದು, [27]ದೇವರು ಸಮಸ್ತವನ್ನೂ ಆತನ ಪಾದಗಳ ಕೆಳಗೆ ಹಾಕಿ ಆತನಿಗೆ ಆಧೀನ ಮಾಡಿದ್ದಾನೆಂಬುದಾಗಿ ಹೇಳಿದೆಯಲ್ಲಾ. ಸಮಸ್ತವೂ ಆತನಿಗೆ ಆಧೀನ ಮಾಡಿದ್ದಾನೆಂಬುದಾಗಿ ಹೇಳುವಾಗ ಸಮಸ್ತವನ್ನು ಆಧೀನಮಾಡಿ ಕೊಟ್ಟಾತನು ಅದರಲ್ಲಿ ಸೇರಿಲ್ಲವೆಂಬುದು ಸ್ಪಷ್ಟವಾಗಿದೆ. [28]ಸಮಸ್ತವೂ ಆತನಿಗೆ ಆಧೀನವಾದ ಮೇಲೆ ಮಗನು ತನಗೆ ಆಧೀನಮಾಡಿಕೊಟ್ಟಾತನಿಗೆ ತಾನೇ ಆಧೀನನಾಗುವನು ದೇವರು ಸಮಸ್ತರಲ್ಲಿ ಸಮಸ್ತವೂ ಆಗುವನು.**

ಅನೇಕ ವರ್ಷಗಳ ಹಿಂದೆ, ಪಂಡಿತರ ಸಮುದಾಯವು ಆ ಸಮಯದಲ್ಲಿ ಶಿಷ್ಯತ್ವವನ್ನು ಹೆಚ್ಚೂಕಡಿಮೆ ತ್ಯಜಿಸಿದಂತಹದರ ಮೇಲೆ Alexander Balmain Bruce ಕ್ರಿಸ್ತೀಯ ಪ್ರತಿಪಾದಕರ ಮೇಲೆ ಒಂದು ಪುಸ್ತಕವನ್ನು ಬರೆದನು. ಇತರ ಸಂಗತಿಗಳಲ್ಲಿ ಭವಿಷ್ಯದಲ್ಲಿ ನೈತಿಕ ನಡತೆಯು ನಿರೀಕ್ಷಾರಹಿತದೊಡನೆ ಹೊಂದಿಕೊಂಡು ನೀತಿಯತ್ತ ಮರಳುವ ಪ್ರವಾದನೆಯನ್ನು ಬೇಡಿಕೆಯನ್ನು ಬ್ರೂಸ್ ಪ್ರತಿಬಿಂಬಿಸಿದರು:

> *ನೀತಿವಂತಿಕೆಗೋಸ್ಕರದ ತವಕ ಮತ್ತು ನಿರೀಕ್ಷಗಾಗಿ ತವಕ ಸಾಮಾನ್ಯವಾಗಿರುವುದಕ್ಕೆ ಬಲು ದೂರವಾಗಿವೆ,* ಅವುಗಳು ಯಾರಲ್ಲಿ ಉನ್ನತವಾಗಿ ಕಂಡುಬರುತ್ತವೆಯೋ ಜನಗತ್ತಿನ ಗುರುತರ ವ್ಯಕ್ತಿಗಳಲ್ಲಿ ಎಂದಿಗೂ ಶ್ರೇಣಿಯಲ್ಲಿ ಕಂಡುಬರುತ್ತದೆ. ಆದರೆ ಎರಡರ ಹೊಂದಾಣಿಕೆಯಾಗಿದ್ದು ಇದು ಇಬ್ರೀಯ ಪ್ರವಾದಿಯ ಅನನ್ಯ ವಾದ ಆಂಶವನ್ನು ಮಾಡುವುದಾಗಿದೆ.[15] (ಒತ್ತಿ ಹೇಳಿದ್ದು ನನ್ನದು.)

ನಜರೇತಿನ ಯೇಸು ಮತ್ತು ಆತನನ್ನು ಹಿಂಬಾಲಿಸುವ ಅಪೊಸ್ತಲರು, ಪ್ರವಾದಿಗಳಿಗಿಂತಲೂ ಮುಂದೆ ಹೋದರು. ಅವರು (1) ದೈವೀಯ ಜೀವಿತಕ್ಕೋಸ್ಕರ ದೃಢನಿಲುವಿನ ಬೇಡಿಕೆಯ ಜೊತೆ (2) ಕರ್ತನು ತಿರುಗಿ ಬರುವನು ಎಂಬ ನಿರೀಕ್ಷಾಪೂರಿತ ಎದುರು ನೋಡುವಿಕೆಯನ್ನು ಜೋಡಿಸಿದರು. ಹೊಸ ಒಡಂಬಡಿಕೆಯಲ್ಲಿರುವ ಪ್ರಕಟಣೆಗಳು ಕಡೆಯ ಸಂಗತಿಗಳಿಗೆ ಸಂಬಂಧಿಸಿದ್ದು ಅದು ನೀತಿವಂತ ಜೀವಿತಕ್ಕಾಗಿನ ಕರೆಯು ಸ್ವಾಭಾವಿಕವಾದದ್ದು ಮತ್ತು ಯಾವಾಗಲೂ ಸತ್ಯವಾದದ್ದು ಆಗಿರುತ್ತದೆ ಎಂದು ಸೇರಿಸಿದರು (1 ಕೊರಿಂಥ 15:34; 2 ಕೊರಿಂಥ 5:10; 2 ಪೇತ್ರ 3:11). ಕರ್ತನ ಮರಳುವಿಕೆ ಅಂದರೆ ದೇಹಸಹಿತವಾಗಿ ಏಳುವದು, ನ್ಯಾಯತೀರ್ಪು, ಮತ್ತು ನಿತ್ಯ ಜೀವ ಎಂಬರ್ಥ. ಕರ್ತನಲ್ಲಿನ ನಿರೀಕ್ಷೆಯನ್ನು ಪ್ರವಾದಿಗಳು ಮುನ್ನುಡಿದಿದ್ದಾರೆ. ಅವರ ಬಗ್ಗೆ ಬ್ರೂಸ್ ಹೀಗೆ ಹೇಳುತ್ತಾ ಹೋಗುತ್ತಾರೆ,

> ಮೊಬ್ಬಾದ ಮತ್ತು ನಿರಾಶವಾದಿಯಾಗಿರುವ ನೈತಿಕ ಟೀಕೆಗೆ ಇದು ಸಹಜವಾಗಿ ಬರುತ್ತಿದ್ದು ಈ ಜನರನ್ನು [ಇಸ್ರಾಯೇಲರ ಪ್ರವಾದಿಗಳು] ನಾವು ಗಮನಿಸುವಾಗ ತಮ್ಮ

ಸಮಕಾಲೀನರಲ್ಲಿ ಹೆಚ್ಚು ಕುತೂಹಲಕಾರಿಯಾದ ಬೇಡಿಕೆಗಳನ್ನು ಮಾಡಿದಂಥ ಮತ್ತು ತಮ್ಮೊಡನೆ ಒಪ್ಪಿಕೊಳ್ಳುವಲ್ಲಿ ವಿಫಲರಾಗಿರುವವರ ಮೇಲೆ ಕನಿಕರವಿಲ್ಲದ ನಿಂದನೆಯನ್ನು ಉಚ್ಛರಿಸುವದು, ಹೆಚ್ಚು ಹೊಳೆಯುವುದನ್ನು ಕೊಡುವದು, ಒಳ್ಳೆತನಕ್ಕೆ ಮತ್ತು ಸಂತಸಕ್ಕೆ ದುರಹಂಕಾರದ ವಿಚಾರಗಳು ಇದ್ದಾಗ ಜಗತ್ತಿನ ಸುವರ್ಣಕಾಲದ ಸಾಹಿತ್ಯಗಳೊಡನೆ ನೋಡಿದ ಉತ್ಸಾಹಪೂರ್ವಕ ಚಿತ್ರಗಳು ಸಂಪೂರ್ಣವಾಗಿ ಇವರಲ್ಲಿ ಪ್ರಕಟವಾಗುತ್ತವೆ.[16]

ಪುನರುತ್ಥಾನದ ಬಗ್ಗೆ ಪೌಲನು ಕೊರಿಂಥದವರಿಗೆ ಬರೆದಾಗ, ಆತನು ನೀತಿವಂತಿಕೆತನ ಮತ್ತು ನಿರೀಕ್ಷೆಗಳ ವಿಷಯವನ್ನು ಸೇರಿಸಿದನು. ಯೇಸು, ಮುಂದಿನ ಪುನರುತ್ಥಾನ, ಮತ್ತು ನಿರೀಕ್ಷೆಗಳು ಬರಲಿರುವ ಕಾಲದ ಅಪೊಸ್ತಲನ ಕಾರ್ಯಗಳಲ್ಲಿ ಸೇರಿಸಲ್ಪಟ್ಟಿದೆ. ಯೇಸುವು ಸತ್ತನು ಮತ್ತು ಅದೇರೀತಿಯಲ್ಲಿ ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿನು ಎಂಬ ಯೋಗ್ಯವಾದ ಸಾಕ್ಷಿಯಿಂದ ನಿರೀಕ್ಷೆಯ ಸಂದೇಶವು ಐತಿಹಾಸಿಕ ಆಧಾರದಿಂದ ಆರಂಭಗೊಳ್ಳುತ್ತದೆ. ಯೇಸುವೇ ಕ್ರಿಸ್ತನೆಂದು ಮತ್ತು ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿ ಆತನನ್ನು ಕ್ರಿಸ್ತನೆಂದು ಘೋಷಿಸಿದನೆಂದು ಅರಿಕೆ ಮಾಡುವದರಲ್ಲಿ ಕ್ರೈಸ್ತರ ನಿರೀಕ್ಷೆಯು ಹರಿಯುವುದಾಗಿದೆ ಮತ್ತು ಇರಿಸುವುದಾಗಿದೆ.

**ವಚನ 20.** 15:13-19ರಲ್ಲಿನ ಪುನರುತ್ಥಾನದ ನಿರೀಕ್ಷೆಯಿಲ್ಲದಿರುವಿಕೆಯು ಕಳೆಗುಂದಿದ ದೃಷ್ಯದ ಬಣ್ಣದಂತಿದ್ದು, ಮುಂದೆ ಪೌಲನು ಯೇಸುವಿನ ಪುನರುತ್ಥಾನವನ್ನು ಮತ್ತು ಸೂಚಿತವಾದ ಎಲ್ಲವನ್ನೂ ಧೃಢೀಕರಿಸುವವನಾಗಿದ್ದಾನೆ. ವಾಸ್ತವವಾಗಿ. ಯೇಸು ಆದರೆ **ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದೇ ಇದ್ದಾನೆ, ಆದುದರಿಂದ ಆತನು ನಿದ್ರೆ ಹೋದವರಲ್ಲಿ ಪ್ರಥಮಫಲವಾದನು.** ತಿರುಗಿ ಮರಣಕ್ಕೆ ನಿದ್ರೆಯು ರೂಪಕವಾಗಿದೆ (ನೋಡಿರಿ 15:18). ಅಪೊಸ್ತಲನು ಇಸ್ರಾಯೇಲರ ಇತಿಹಾಸದಲ್ಲಿನ ಆಳವಾದ ಬೇರೂರಿದ ಪರಿಕಲ್ಪನೆಯ ಮೇಲೆ ಎಳೆಯುವವನಾಗಿದ್ದಾನೆ. ಜನರು ತಮ್ಮ ಭೂಮಿಯ ಪ್ರಥಮಫಲಗಳನ್ನು ಸ್ತುತಿಯ ಕಾರ್ಯದ ಹಾಗೆ ದೇವರಿಗೆ ಕೊಡುವವರಾಗಿದ್ದರು (ಧರ್ಮೋಪದೇಶಕಾಂಡ 26:1, 2). ಪ್ರಥಮ ಫಲಗಳು, ಅಂದರೆ, ಮುನ್ಸೂಚನೆಗಳು ಹೆಚ್ಚಾಗಿದ್ದು; ಆದರೆ ಅವುಗಳು ಸಹ ಸುಗ್ಗಿಯ ಆರಂಭಗಳು ಆಗಿರುತ್ತಿದ್ದವು. ಇನ್ನೊಂದು ಸ್ಥಳದಲ್ಲಿ, ದೇವರು ವಿಶ್ವಾಸಿಗಳಿಗೆ ಅವರು ಬಹುದಿನದಿಂದ ಕಾಯುತ್ತಿರುವಂತಹ "ದೇವಪುತ್ರರ ಪದವಿಯನ್ನೂ ಅಂದರೆ ದೇಹಕ್ಕೆ ಬರಬೇಕಾದ ವಿಮೋಚನೆಯನ್ನೂ" (ರೋಮಾ 8:23) ಅವರಲ್ಲಿ ವಾಸಿಸುವಂಥ ಆತ್ಮನನ್ನು ಕೊಡಮಾಡಿದನ್ನು ಅಪೊಸ್ತಲನು "ಪ್ರಥಮ ಫಲ" ಎಂದು ರೂಪಕವಾಗಿ ಬಳಸಿದ್ದಾನೆ.

ಯೇಸುವಿನ ಪುನರುತ್ಥಾನವು ದೇವರ ಶಕ್ತಿಯನ್ನು ಪ್ರಾಯೋಗಿಸುವಂತದ್ದಾಗಿದೆ. ಆತನು ಮರಣದಿಂದ ಎಬ್ಬಿಸಲು ಶಕ್ತನು ಮತ್ತು ತನ್ನ ಜನರನ್ನು ಆತ್ಮ ವಾಸಿಸುವಿಕೆಯ ಮೂಲಕ ಶಕ್ತಗೊಳಿಸುವವನು ಆಗಿದ್ದಾನೆ, ಆದರೆ ಅಲ್ಲಿ ಹೆಚ್ಚಿನದು ಇದೆ. ವಾಗ್ದಾನ ಮಾಡಿದ ಪ್ರಥಮಫಲವು ಕ್ರೈಸ್ತ ಕುಟುಂಬದ ಪುನರುತ್ಥಾನದಿಂದ ಬರುವುದಾಗಿತ್ತು. ಯೇಸುವಿನ ಪುನರುತ್ಥಾನವು ಹಿಂದಿನದಕ್ಕಿಂತಲೂ ಐತಿಹಾಸಿಕ ಅಂಶದ ಐತಿಹ್ಯವಾಗಿದೆ; *ಸುಗ್ಗಿಯು ಆರಂಭವಾಯಿತು ಎನ್ನುವುದಕ್ಕೆ ಆತನು ಪ್ರಥಮ ಫಲವಾಗಿ ಸೂಚಿತನಾಗಿದ್ದಾನೆ.* ಆತನು ಸತ್ತವರೊಳಗಿಂದ ಎದ್ದು ಬಂದನು ಎಂಬುದರ ಪರಿಣಾಮವು ದೇವರ

ಶಕ್ತಿ ಮತ್ತು ಖಾಲಿ ಸಮಾಧಿ, ಅದಕ್ಕಿಂತಲೂ ಹೆಚ್ಚಾಗಿ ಒಳಗಿರುವ ಆತ್ಮನ ಬಗ್ಗೆ ದೃಢವಾದ ನಂಬಿಕೆಗಿಂತಲೂ ಹೆಚ್ಚಾದದ್ದು ಆಗಿದೆ. ಯೇಸುವು "ನಿಜವಾದ ಸುಗ್ಗಿಯ ಆರಂಭವಾಗಿದ್ದಾನೆ."[17] ಯೇಸುವಿನಲ್ಲಿ ನಿತ್ಯಜೀವದ ಪುನರುತ್ಥಾನವು ಈಗಾಗಲೇ ಮಾನವನ ಇತಿಹಾಸವನ್ನು ಮುರುದುಬಿಟ್ಟಿದೆ. "ಯೇಸುವಿನ ಪುನರುತ್ಥಾನದ ಅರ್ಥವು ನಿತ್ಯತ್ವದ ರೀತಿಯಲ್ಲಿ ಇರುವಂಥ ಕೆಲ ಐತಿಹಾಸಿಕ ದೃಷ್ಯಗಳ ಕಾಣಿಸಿಕೊಳ್ಳುವಿಕೆಗಿಂತ ಕಡಿಮೆಯಾದ್ದೇನೂ ಅಲ್ಲ."[18]

**ವಚನ 21.** ಯೇಸುವನ್ನು ಆದಾಮನೊಡನೆ ಹೋಲಿಸುವುದರ ಮೂಲಕ ಅವತರಿಸುವಿಕೆಯ ಮತ್ತು ನಿತ್ಯತ್ವದ ಪರಿಣಾಮದ ಮುನ್ನೋಟ ಪೌಲನು ಎತ್ತಿ ತೋರಿಸಿದ್ದಾನೆ. ಆದಾಮನ ಮತ್ತು ಹವ್ವರು ಪಾಪದ ಮೂಲಕ ಜಗತ್ತಿನೊಳಗೆ ತಂದಂಥ ತಲುಪಲಾರದ ಪ್ರಭಾವವನ್ನು ಅಪೊಸ್ತಲನು ಎತ್ತಿ ತೋರಿಸಿದ್ದಾನೆ, ಆದರೆ ಆ ಪ್ರಭಾವವು ಕ್ರಿಸ್ತನ ಬರೋಣದ ಮೂಲಕ ಹತ್ತಿಕ್ಕಲಾಯಿತು. ಆತನು ನಂತರ ರೋಮಾ 5:12-17ರಲ್ಲಿನ ಆ ವಿಷಯವನ್ನು ಪ್ರತಿಪಾದಿಸಿದ್ದಾನೆ ಮತ್ತು 1 ಕೊರಿಂಥ 15:45-50ರಲ್ಲಿ ಅದರ ಹೋಲಿಕೆಯನ್ನು ಮುಂದುವರೆಸಿದ್ದಾನೆ. ಆದಾಮನ ತಿರುಗಿ ಬೀಳುವಿಕೆಯು **ಮರಣವನ್ನು** - ದೈಹಿಕ ಮತ್ತು ಆತ್ಮೀಕ ಎರಡೂ ಮರಣವನ್ನು ತಂದಿತು. ಮಾನವನ ಜನಾಂಗವನ್ನು ಲಕ್ಷೀಕರಿಸುವ ಪಾಪಕ್ಕೋಸ್ಕರ ಆತನು ಉದಾಹರಣೆಯಾದನು. "ಎಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ" ಎಂದು ಪೌಲನು ರೋಮಾಪುರದವರ 3:23ರ ಪತ್ರಿಕೆಯಲ್ಲಿ ಬರೆಯುತ್ತಾನೆ. ಸಾರ್ವತ್ರಿಕ ಪಾಪ ಮತ್ತು ಆದಾಮ ಮತ್ತು ಹವ್ವರ ಪಾಪ ಇವೆರಡೂ ಸಂಬಂಧವಿರದವುಗಳು, ಆದರೆ ದೈವಜ್ಞಾನಿಗಳು ನೋಡುವಂಥ ಪೌಲನು ಆದಾಮ ಮತ್ತು ಕ್ರಿಸ್ತನ ಮಧ್ಯ ಎಳೆದ ಸಮಾನತೆಯು ಅಪೊಸ್ತಲನ ಮನದಿಂದ ದೂರವಾಗಿದ್ದ ದೈವಶಾಸ್ತ್ರೀಯ ಪ್ರಶ್ನೆಗಳಿಗೆ ಉತ್ತರಿಸುವುದಾಗಿದೆ. ಆದಾಮನ ತರುವಾಯ ಪಾಪ ಮತ್ತು ಮರಣವು ಮಕ್ಕಳಿಗೆ ಅವರ ಮೂಲಕ ಆತನ ಸಂತತಿಯವರಿಗೆ ಸಾಗಿತು ಎಂಬುದು ಪೌಲನ ಮಾತುಗಳಲ್ಲಿ ಸೂಚಿತವಾಗಿದೆ. ಮೂಲ ಪಾಪದ ವಿಷಯವು ಆದಾಮನ ಉಲ್ಲಂಘನೆಯಿಂದಲೂ ಅಥವಾ ಯೇಸುವಿನ ಪುನರುತ್ಥಾನದಲ್ಲೋ ಸಿಕ್ಕಲಿಲ್ಲ.

ಅಗಸ್ಟಿಯನ್ನನ ವ್ಯಾಖ್ಯಾನದ ಪ್ರಕಾರ ಕೆಲ ಧಾರ್ಮಿಕ ಗುಂಪಿನಲ್ಲಿ ಈಗಾಗಲೇ ಬಳಕೆಯಲ್ಲಿರುವ ಸಿದ್ಧಾಂತವಾಗಿದ್ದು, ಅದು ಆದಾಮನಲ್ಲಿಯ ಪಾಪವಾಗಿದ್ದು, ಮನುಕುಲವೆಲ್ಲಾ ಪಾಪದಲ್ಲಿರುವುದಾಗಿದೆ. ಸ್ತ್ರೀಯು ಪಾಪದ ಮೂಲ ಎಂದು ಕರೆಯಲ್ಪಟ್ಟಿದ್ದು ಲಿಂಗವು ಇಲ್ಲಿ ಆಪಾದಿತ ಎಂದು ಬಿಂಬಿತವಾಗಿದೆ." "ಪಾಪಕ್ಕಿಂತ ಮೊದಲು ಆತನಿಂದಲೇ ಉಂಟುಮಾಡಲ್ಪಟ್ಟ ಸ್ತ್ರೀಯ ಮೂಲಕ ಪಾಪದಲ್ಲಿ ಬಿದ್ದಂತ . . . ಆ ಒಬ್ಬ ಮನುಷ್ಯನಲ್ಲಿ [ಆದಾಮ] ನಾವೆಲ್ಲರೂ ಇರುವರಾಗಿದ್ದೇವೆ," ಅಗಸ್ಟಿಯನ್ ಬರೆಯುತ್ತಾನೆ.[19] ಪಾಪವು ಆನುವಂಶಿಕವಾದದ್ದು ಎಂದು ವಾದವು ಮುಂದುವರೆಯುತ್ತಾ, ಹೀಗೆ ಒಂದು ಮಗುವು ಹುಟ್ಟಿನಲ್ಲಿಯೇ ಪಾಪದ ದೋಷವನ್ನು ಹೊಂದಿರುತ್ತಾನೆ. ಮೂಲ ಪಾಪದ ನಂತರ ಮಾನವ ಕುಲವು ಭ್ರಷ್ಟರು ಮತ್ತು ದೋಷಪೂರಿತ ಜನವು[20] ಆಯಿತು ಎಂದು ಅಗಸ್ಟಿಯನ್ ಹೇಳುತ್ತಾನೆ. ಆತನ ಯೋಚನೆಯ ಪ್ರಕಾರ ಪಾಪವು ದೇವರನ್ನು ಮತ್ತು ಮಾನವರನ್ನು ಬೇರೆ ಮಾಡುವ ಆತ್ಮೀಕ ಸ್ಥಿತಿಯಾಗಿದೆಯೇ ಹೊರತು ದೇಹದ ಆಕರ್ಷಣೆಯಿಂದ ಜನರನ್ನು ಹಿಂಬಾಲಿಸುವಂತೆ ಮಾಡುವ ಆಯ್ಕೆಗಳಿಂದ ಅಲ್ಲ, ಮಾನವ

ಜೀವಿಯು ದೋಷದಿಂದ ಹುಟ್ಟಿದ್ದಕ್ಕಾಗಿ ಮತ್ತು ಅದರ ಪ್ರಭುತ್ವದಡಿಯಲ್ಲಿಯೇ ಇರುವುದರಿಂದ ಅವರು ಯಾವ ಒಳ್ಳೆಯದನ್ನು ಮಾಡರು. ಈ ವಿಚಾರದ ಪ್ರಕ್ರಿಯೆಯ ಸಮಾರೋಪವು ಆಗಿದೆ.

ತಕ್ಷಣದ ಸ್ಥಿತಿಯ ಬಗೆಗೆ ಮಾತನಾಡಬೇಕು ಹೊರತಾಗಿ ನಂತರದ ಸಂತತಿಯ ದೈವಿಕ ವಾದಕ್ಕಾಗಿ ಅಲ್ಲ ಎಂದು ಪೌಲನು ವಾದಮಾಡುತ್ತಿದ್ದಾನೆ. ದೇವರ ಸಾರ್ವಭೌಮತ್ವ ಮತ್ತು ಮಾನವನ ಸ್ವಾತಂತ್ರ್ಯ - ಅಗಸ್ಟೈನನು[21] ಪ್ರಶ್ನೆಗಾಗಿ ಪರಿಗಣಿಸಿದಂತಹ ತನ್ನ ಯೌವನಪೂರಕ ಅಭ್ಯಾಸವನ್ನು ಜೊತೆಗಿನ ದೊಡ್ಡ ಪ್ರಶ್ನೆಗಳ ಬಗ್ಗೆ ಆತನು ಅಲ್ಪ ಕಾಳಜಿಯುಳ್ಳವನಾಗಿದ್ದಾನೆ. ಪಾಪ ಮತ್ತು ಮರಣ ಆದಾಮನಿಂದ ಬಂದಿದ್ದಾದರೆ, ಕ್ಷಮೆ ಮತ್ತು ನಿರೀಕ್ಷೆಯು **(ಸತ್ತವರಿಗೆ ಪುನರುತ್ಥಾನ)** ಯೇಸುವಿನ ಮೂಲಕ ಎರಡನೆಯ ಆದಾಮನ, ದೈಕತೆಯನ್ನು ಹೊಂದಿದ ಮನುಷ್ಯನೂ ಅದರೆ ಸಂಪೂರ್ಣ ಮನುಷ್ಯನೂ ಅದಾಮನ ಮೂಲಕ ಬಂದವು ಪೌಲನು ವಾದಮಾಡುತ್ತಿದ್ದಾನೆ. ಅಪೊಸ್ತಲನ ವಿವರಣಾ ಕಾರ್ಯಕ್ಕೋಸ್ಕರ “ಒಬ್ಬ ಮನುಷ್ಯನಿಂದಲೂ ಸಹ ಮರಣದಿಂದ ಪುನರುತ್ಥಾನವು ಬರುವದು ಆಗಿದೆ” ಎಂಬ ಸಾಕ್ಷಿಯನ್ನು ಒಬ್ಬನು ಒಪ್ಪಿಕೊಳ್ಳಲೇಬೇಕು. ವಿಮೋಚಿಸಲ್ಪಟ್ಟ ಎಲ್ಲವೂ ನಿತ್ಯತ್ವಕ್ಕಾಗಿ ಏರಿಸಲ್ಪಟ್ಟಿತು ಯೇಸು ಯಾಕೆ ಪುನರುತ್ಥಾನವನ್ನು ಸೂಚಿಸಿದನು ತನ್ನ ಓದುಗರು ತಿಳಿದುಕೊಳ್ಳಬೇಕೆಂದು ಪೌಲನು ಬಯಸಿದ್ದನು.

**ವಚನ 22.** ಎರಡರ ಮಧ್ಯ ಖಚಿತಚಾದ ಸಮಾನತೆ ಇಲ್ಲದಿದ್ದಾಗಲೂ ಕೂಡ ಕ್ರಿಸ್ತನಲ್ಲಿನ ದೇವರ ಕಾರ್ಯವನ್ನು ತನ್ನ ಓದುಗರು ಅರಿತುಕೊಳ್ಳಲು ಸಹಾಯ ಮಾಡುವುದಕ್ಕಾಗಿ ಆದಾಮನನ್ನು ಉದಾಹಣೆಯಾಗಿ ಪೌಲನು ಬಳಿಸಿದ್ದಾನೆ. ಪ್ರಥಮ ಪುರುಷನು ಪಾಪದ ಬಲಯುತವಾದ ಆಕರ್ಷಣೆಯ ಶಕ್ತಿಯನ್ನು ಪ್ರಾಯೋಗಿಸಿದನು. ಆದಾಮನ ತಿರುಗಿಬೀಳುವಿಕೆಯ ಮನುಷ್ಯರ ವರ್ತಿಸುವಂತಹ ಮನುಷ್ಯತನವೇ ಆಗಿತ್ತು. ಆತನು ಮತ್ತು ಆತನ ಸಂತತಿಯವರು ಪಾಪವನ್ನು ಆರಿಸಿಕೊಂಡರು. ಪಾಪದ ಮೂಲಕ, ಆದಾಮನಲ್ಲಿ ಮೊದಲು ತೋರಿಬಂದಂದ್ದು, **ಎಲ್ಲರೂ ಸಾಯುವವರಾದರು**. ಸಾರ್ವತ್ರಿಕವಾಗಿ ಆದಾಮನು ಮಾನವ ಜನಾಂಗದಲ್ಲಿ ತೋರಿಬಂದಂತೆ ಇದ್ದಾನೆ. ಇದು ಪ್ರಥಮಪಿತೃಗಳು ಹಾಕಿದಂತಹ ಮಾದರಿಯನ್ನು ಅನುಸರಿಸುತ್ತದೆ, ಮನುಕುಲವು ದೇವರ ಜೊತೆ ತಮ್ಮ ವೈರತ್ವವನ್ನು ಸಿದ್ಧಮಾಡಿದರು.

ಆದಾಮನಂತೆ ಯೇಸುವು ಮಾನವ ಕುಟುಂಬದ ಬಗ್ಗೆ ಸಾರ್ವತ್ರಿಕ ಸತ್ಯವನ್ನು ಪ್ರಾಯೋಗಿಸಿದನು: ಒಳ್ಳೆತನ ಮತ್ತು ಕೆಟ್ಟತನ ಹೀಗೆ ಜನರು ಮಾಡುವ ಆಯ್ಕೆಗಳು ತಮ್ಮದೇ ಅನ್ವಯವನ್ನು ಹೊಂದಿವೆ. ಕ್ರಿಸ್ತನ ಸಂಬಂಧದಿಂದ ಎಲ್ಲರೂ ಜೀವಿತರಾಗುವರು, ಮರಣದ ಕಡಗೆ ತಿರುಗಿಕೊಂಡವರು ಬಿಡುಗಡೆಯನ್ನು ಹೊಂದುವರು ಮತ್ತು ಆತನಲ್ಲಿ ಸಾರಸ್ಯವನ್ನು ಹೊಂದುವರು. ಆದಾಮನ ಮತ್ತು ಕ್ರಿಸ್ತನ ನಡತೆಯಿಂದ ಆದ ಪರಿಣಾಮಗಳು ನಿರ್ದಿಷ್ಟವಾಗಿ ಸಮಾನವಾದವುಗಳು, ಸಾರ್ವತ್ರಿಕ ಮರಣವು ಆದಾಮನೊಡನೆ ಆರಂಭವಾಗಿ ಕ್ರಿಸ್ತನಲ್ಲಿ ಸಾರ್ವತ್ರಿಕ ರಕ್ಷಣೆಯಲ್ಲಿ ಕೊನೆಗೊಳ್ಳುವುದಾಗಿದೆ. ಹೇಗೋ, ಕೆಲವರು ಕ್ರಿಸ್ತನನ್ನು ಅಂಗೀಕರಿಸಿಲ್ಲ ಎಂದು ಪೌಲನು ತಿಳಿದಿದ್ದನು. ಮೆಸ್ಸೀಯನು, ಕ್ರಿಸ್ತನು ಸಾರ್ವತ್ರಿಕ ಕೊಡುಗಯನ್ನು ನೋಡಿದ್ದಾನೆ; ಆತನು

ಸಾರ್ವತ್ರಿಕ ಆಯ್ಕೆಯನ್ನು ಕೊಟ್ಟಿದ್ದಾನೆ. ಅದರ ಮೂಲಕ ಅನ್ಯಜನರು ಮತ್ತು ಯೆಹೂದ್ಯರು ಇಬ್ಬರೂ ಕ್ರಿಸ್ತನೆಡೆಗೆ ಯಾವದೇ ಪಕ್ಷಪಾತವಿಲ್ಲದೇ ತಿರುಗಿಕೊಳ್ಳಬಹುದಿತ್ತು. ಆತನನ್ನು ಆರಿಸಿಕೊಳ್ಳುವವರಿಗೆ, ಕರ್ತನು ಕ್ಷಮೆಯನ್ನು ಒದಗಿಸುವನು; ಅತನಲ್ಲಿ ಇವವರೆಲ್ಲರೂ "ಜೀವಿತರಾಗುವರು." ಕ್ರಿಸ್ತನಿಂದ ಸಿಕ್ಕುವ ಮರಣ ಮತ್ತು ಪುನರುತ್ಥಾನಗಳು (ರೋಮಾ 2:6-8) ಅಥವಾ ಆದಾಮ ಪಾಪವು ಪ್ರತಿ ಶಿಶುವನ್ನು ಅದರ ಅರಂಭದ ಕ್ಷಣದಲ್ಲಿ ವಿಧಿಲಿಖಿತದಂತೆ ಮುಟ್ಟುವದು ಎಂದು ಪ್ರತಿ ವ್ಯಕಿಯ ತಿಳುಕೊಳ್ಳುವವು ಆಗಿವೆ ಎಂದು ಪೌಲನು ಸೂಚಿಸುವವನಾಗಿದ್ದಾನೆ. ಆದಾಮನು ಪಾಪ ಮತ್ತು ಮರಣದ ಜನಾಂಗದ ಮಾರ್ಗವನ್ನು ಹಾಕಿಬಿಟ್ಟಿದ್ದಾನೆ. ಇನ್ನೂ ಸಾರ್ವತ್ರಿಕ ರೀತಿಯಂತೆ ಮಾನವ ಕುಲವು ಬಿಡುಗಡೆ ಮತ್ತು ಜೀವಿತದ ಪರಿಣಾಮಕ್ಕಾಗಿ ಬೇಡಿಕೆಯನ್ನು ಮತ್ತು ಆಯ್ಕೆಯನ್ನೂ ಎದುರಿಸುವುದಾಗಿದೆ. ಆತನು ಸಾರ್ವತ್ರಿಕ ರಕ್ಷಕನಾಗಿದ್ದಾನೆ.

**ವಚನ 23.** ಪೌಲನು ಯೇಸು ಮೊದಲು ಎಬ್ಬಿಸಲ್ಪಟ್ಟನು ಎಂದು ಹೇಳುವ ಮೂಲಕ ಸತ್ತವರ ಪುನರುತ್ಥಾನದ ವಿಷಯವನ್ನು ಮುಂದುವರೆಸಿದನು. ಆತನು ಎರಡನೆಯ ಸಾರಿ ಕಾಣಿಸಿಕೊಂಡಾಗ, ಕ್ರಿಸ್ತನಲ್ಲಿ ಇರುವವರರೆಲ್ಲ ಪುನರುತ್ಥಾನವನ್ನು ಹಂಚಿಕೊಳ್ಳುವರು. ಪ್ರತಿಯೊಬ್ಬರ ಪುನರುತ್ಥಾನವು ತನ್ನ ತನ್ನ ತರಗತಿಯಲ್ಲಿ **ಇರುವದು** ಎಂದು ಪೌಲನು ಒತ್ತಿ ಹೇಳುತ್ತಾನೆ. ಆತನು ಪ್ರತ್ಯಕ್ಷತೆಯಲ್ಲಿ *παρουσία, parousia* ಎಂಬ ಪದವನ್ನು ಬಳಸಿದ್ದು ತಾಂತ್ರಿಕಾರ್ಥದಲ್ಲಿ, ಇದರದ ಅರ್ಥವು ಕಾಲದ ಅಂತ್ಯದ ದಿನಗಳಲ್ಲಿ ಕರ್ತನ ಮರಳಿ ಬರೋಣವು ಆಗಿದ್ದು, ಇದು ಕೇವಲ ಥೆಸಲೋನಿಕದವರ ಪತ್ರಿಕೆಯಲ್ಲಿ ಮಾತ್ರ ಒಂದೇ ಸಾರಿ ಸಿಕ್ಕುವುದಾಗಿದೆ (1 ಥೆಸಲೋನಿಕ 2:19; 3:13; 4:15; 2 ಥೆಸಲೋನಿಕ 2:1, 8). ತನ್ನ ಸ್ವಂತದ ಯೋಜಿತ ಕಾಣಿಸಿಕೊಳ್ಳುವಿಕೆ ಅಥವಾ ತನ್ನಜೊತೆ ಕೆಲಸಗಾರರ ತಲುಪುವಿಕೆಯನ್ನು ಅನೇಕ ಸಾರಿ ಪೌಲನು ಸೂಚಿಸುವವನಾಗಿದ್ದಾನೆ. 1 ಕೊರಿಂಥದಲ್ಲಿ ಇತರ ನಾಲ್ಕು ಬಾರಿ ಅಪೊಸ್ತಲನು ಕರ್ತನ ಬರೋಣವನ್ನು ಸ್ಪಷ್ಟವಾಗಿ ಸೂಚಿಸುವವನಾಗಿದ್ದಾನೆ (1:7, 8; 4:5; 11:26; ನೋಡಿರಿ 16:22). ಹೇಗೋ ಕ್ರಿಸ್ತನ ಬರೊಣವು ಕೊರಿಂಥದ ಪತ್ರಿಕೆಗಳಲ್ಲಿ ಅಥವಾ ಪೌಲನ ಬರಹಗಳಲ್ಲಿ ಅತಿಯಾದ ಉತ್ಸಾಹವನ್ನು ಪರಿಗಣಿಸಲಿಲ್ಲ. ಅಪೊಸ್ತಲನು ಕ್ರಿಸ್ತನು ಜೀವಿಸಿದರ ಸಮಯದ ಮಧ್ಯ ಮೊದಲನೆಯ ಮತ್ತು ಎರಡನೆಯ ಬರೋಣದಕ್ಕಿಂತಲೂ ಕೊನೆಯ ತುತ್ತೂರಿಯ ಶಬ್ದ ಕೆಳಿದಾಗ ಸಂಭವಿಸುವ ಘಟನೆಗಳ ಸರಣಿಯನ್ನು ಹಾಕುವಲ್ಲಿ ಹೆಚ್ಚು ಕಾಳಜಿಯುಳ್ಳವನಾಗಿದ್ದನು.

ಕ್ರಿಸ್ತನಲ್ಲಿರುವವರು ಆತನ ಮಹಿಮೆಯನ್ನು ಹಂಚಿಕೊಳ್ಳುವರು. ಮೂರು ಅಂಶಗಳ ಅಂತರ್ ಸಂಬಂಧಗಳು - ಮರಣದಿಂದ ಪುನರುತ್ಥಾನ, ಎರಡನೆಯ ಬರೋಣ, ಮತ್ತು ಅಂತಿಮವಾದ ನ್ಯಾಯತೀರ್ಪು - ಇವು ವಾದ ಮಾಡುವುದಕ್ಕಿಂತಲೂ ಹೆಚ್ಚಾಗಿ ಪೌಲನಿಂದ ಯಥಾಸ್ಥಿತಿಯಲ್ಲಿ ತೆಗೆದುಕೊಳ್ಳಲ್ಪಟ್ಟಿವೆ. ಕರ್ತನ ಮರಳುವಿಕೆಗಿಂತ ಮುಂಚೆ, ಈಗಲೂ ಕೂಡಾ ಕ್ರಿಸ್ತನು ಪುನರುತ್ಥಾನದ **ಪ್ರಥಮ ಫಲವಾಗಿದ್ದಾನೆ**. ಸತ್ತವರಿಗೆ ಪುನರುತ್ಥಾನವು ಆತನಲ್ಲಿ ಈಗಾಗಲೇ ಆರಂಭವಾಗಿದೆ. ಈ ಯುಗದ ಪರಿಪೂರ್ಣತೆಯ ಮೊದಲೇ ಆಗಿದ್ದು, ಕ್ರೈಸ್ತರು ಪ್ರಥಮಫಲವಾಗಿರುವ ಪವಿತ್ರಾತ್ಮವರವನ್ನು ಹೊಂದಿದ . . .

ದೇವರ ಪುತ್ರರ ಪದವಿಯನ್ನು . . . ಎದುರು ನೋಡು"ವುದಕ್ಕೆ ಅನುಗ್ರಹಿಸಲ್ಪಟ್ಟಿದ್ದಾರೆ (ರೋಮ 8:23). ಅಲ್ಲಿ ಭವಿಷ್ಯದಲ್ಲಿ ಇನ್ನೂ ಕೆಲವು ಇವೆ. ಯೇಸು ಎಬ್ಬಿಸಲ್ಪಟ್ಟಿದ್ದಾನೆ, ಆದರೆ ಆತನ ಹಿಂಬಾಲಕರು ಪುನರುತ್ಥಾನವು ತಿರುಗಿ ಬರುವತನಕ ಎಂದು ತಿಳಿಯಲಾರರು.

ಒಂದು ಕ್ಷಣ ಪೌಲನ ಉದ್ದೇಶದಿಂದ ಹೊರಗೆ ಇದ್ದು ಕ್ರಿಸ್ತನ ಬಗ್ಗೆ ತಿಳಿಯದವರಿಗೆ ಪುನರುತ್ಥಾನದ ಬಗ್ಗೆ ಏನದರೂ ಹೇಳುವುದು ಇದಾಗಿದೆ; ಈ ಅಧ್ಯಾಯದಲ್ಲಿ ಸಾರ್ವತ್ರಿಕ ಪುನರುತ್ಥಾನವು ಇಲ್ಲ ಎಂದು ಅಪೊಸ್ತಲನು ಸೂಚಿಸುವವನಾಗಿದ್ದಾನೆ. ಇತರ ಸ್ಥಳಗಳಲ್ಲಿ, ಆತನು ಹಾಗೆ ಮಾಡಿದ್ದಾನೆ. 1 ಥೆಸಲೋನಿಕ 4:15-18ರಲ್ಲಿ, ಪೌಲನು ಕ್ರಿಸ್ತನಲ್ಲಿ ಜೀವಂತವಾಗಿರುವವರು ಯೇಸುವಿನೊಡನೆ ಹಿಡಿದುಕೊಳ್ಳಲ್ಪಟ್ಟು ಆತನು ಮರಳಿ ಹೋಗುವಾಗ ಆತನೊಡನೆ ಸಾಗುತ್ತಾರೆ ಎಂದು ಪೌಲನು ಸೇರಿಸುವವನಾಗಿದ್ದಾನೆ. ತನ್ನ ಜನರನ್ನು ಹಿಂಸಿಸುವವರನ್ನು ದೇವರು ದಂಡಿಸುವುದಾಗಿ 2 ಥೆಸಲೋನಿಕ 1:6-10ರಲ್ಲಿ ಅಪೊಸ್ತಲನು ಇದನ್ನು ಸ್ಪಷ್ಟಪಡಿಸಿದ್ದಾನೆ (ನೋಡಿರಿ 2 ಕೊರಿಂಥ 5:10). ಆಗಲೂ ಕೂಡಾ, ದೇವರನ್ನು ತಿರಸ್ಕರಿಸದವರ ಪುನರುತ್ಥಾನಿತ ದೇಹದ ಬಗ್ಗೆ ಆತನು ಏನನ್ನೂ ಹೇಳಿಲ್ಲ. ಹೊಸ ಒಡಂಬಡಿಕೆಯಲ್ಲಿ ದೇಹದ ಪುನರುತ್ಥಾನವು ಬಿಡುಗಡೆ ಹೊಂದಿದವರ ವಿಮೋಚನೆಗಾಗಿ ಮುಂದೆ ಇರಿಸಿದೆ. ಅದಕ್ಕಿಂತಲೂ "ನಿತ್ಯನಾಶನ" ದಲ್ಲಿ ಇರುವದು (2 ಥೆಸಲೋನಿಕ 1:9), ಅದು ನಿತ್ಯತ್ವದಲ್ಲಿ ಕ್ರಿಸ್ತನಿಗೆ ತಮ್ಮ ಬೆನ್ನು ತಿರುಗಿಸಿದವರು ಯಾವ ತರದ ಅಸ್ತಿತ್ವವನ್ನು ಹೊಂದಿರುತ್ತಾರೋ ಅದು ಹೊಸ ಒಡಂಬಡಿಕೆಯಲ್ಲಿ ನಿಜವಾಗಿಯೂ ಚರ್ಚಿತವಾಗುವುದಿಲ್ಲ.

**ವಚನ 24.** ಕರ್ತನ ಬರೋಣವು, ಆತನ *parousia* ಮತ್ತು ಪ್ರಸ್ತುತ ಕಾಲದ ಸಮಾಪ್ತಿ ಇವುಗಳು ಒಂದೇ ಸಮಯದಲ್ಲಿ ಸಂಭವಿಸುವವು ಆಗಿವೆ. ಈ ಕಾಲದ ಅಥವಾ ಬರಲಿರುವ ಕಾಲದ ಕ್ರಿಸ್ತನ ಆಳ್ವಿಕೆ ಮತ್ತು ದೇವರ ಆಳ್ವಿಕೆ ಮಧ್ಯ ಸಂಬಂಧದ ಬಗೆಗಿನ ಊಹಿಸುವಿಕೆಯು ನಿರಾಕ್ಷಾರಹಿತವಾದ್ದು ಆಗಿದೆ. ಒಂದರ್ಥದಲ್ಲಿ ಯೇಸು ದಿವಾರೋಹಣವಾದ ಮೇಲೆ ಆತನ ಆಳ್ವಿಕೆಯು ಆರಂಭವಾಯಿತು ಮತ್ತು ಆತನು ನ್ಯಾಧೀಶನಾಗಿ ಮತ್ತು ಕರ್ತನಾಗಿ ಮರಳಿ ಬರುವ ತನಕ ಇದು ಮುಂದುವರೆಯುವದು (ಅ.ಕೃ. 1:9-11). ಯೇಸುವಿನ ಮೊದಲು ಮತ್ತು ಎರಡನೆಯ ಕಾಣಿಸಿಕೊಳ್ಳುವಿಕೆಯು ಸಹ ಬಲು ಹತ್ತಿರವಾಗಿ ಸಂಬಂಧಿತವಾದದ್ದು ಆಗಿದ್ದು ಇತರವುಗಳನ್ನು ಪರಿಗಣಿಸದೇ ಒಂದರ ಬಗೆಗೆ ಮಾತನಾಡವದು ಅಸಾಧ್ಯವಾದದ್ದು ಆಗಿದೆ. ಮೊದಲ ಕಾಣಿಸಿಕೊಳ್ಳುವಿಕೆಯು ಎರಡನೆಯದಕ್ಕೆ ಖಚಿತತೆಯನ್ನು ತರುವುದಾಗಿದೆ. ಯೇಸು ದೇವರ ಬಲಗಡೆಯಿಂದ ತನ್ನ ಸಭೆಯನ್ನು ಆಳುವವನಾಗಿದ್ದಾನೆ ಎಂದು ಪೌಲನು ನಿರಂತರವಾಗಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತಾನೆ (ರೋಮಾ. 8:34; ಎಫೆಸ 1:20; ಕೊಲಸ್ಸೆ 3:1). ಅಂತ್ಯವು ಬಂದಾಗ, **ಆತನು ತಂದೆಯಾಗಿರುವ ದೇವರಿಗೆ ರಾಜ್ಯವನ್ನು ಒಪ್ಪಿಸಿಕೊಡುತ್ತಾನೆ.**

ಕರ್ತನು ಮರಳಿ ಬರುವಾಗ ಮತ್ತು ಸಭೆಯು ಇಹಲೋಕಕ್ಕೆ ಸೀಮಿತವಾದ ರಾಜ್ಯದಲ್ಲಿ ಇರದಿರುವಾಗ, ಕ್ರಿಸ್ತನ ವಿಮೋಚನಾ ಕಾರ್ಯವು ಸಂಪೂರ್ಣವಾಗುವದು. ಸತ್ಯವಾಗಿರುವುದರ ಮೂಲಕ ದೇವರು "ಸಮಸ್ತರಲ್ಲಿ ಸಮಸ್ತನೂ" ಆಗಿದ್ದಾನೆ (15:28). ಆತನು (ಕ್ರಿಸ್ತನು) **ಎಲ್ಲ ದೊರೆತನವನ್ನೂ ಎಲ್ಲಾ ಅಧಿಕಾರವನ್ನೂ ಬಲವನ್ನೂನಿವೃತ್ತಿ ಮಾಡಿ**

ತಂದೆಗೆ ಮರಳಿ ಒಪ್ಪಿಸಿಕೊಡುತ್ತಾನೆ. ಪರಲೋಕ ರಾಜ್ಯದಲ್ಲಿ ಯಾವುದೇ ವಿರೋಧೀ ಶಕ್ತಿ ಇರಲಿ (ಕೊಲೊ. 1:16) ಅಥವಾ ಇಂದಿನ ಪ್ರಸ್ತುತ ದಿನಗಳಲ್ಲಿನ ಕ್ರಿಸ್ತನ ರಾಜ್ಯಕ್ಕೆ ಇರುವ ಸವಾಲುಗಳಾಗಲೀ, ಕರ್ತನಾದ ಯೇಸುವಿನ ಆಡಳಿತ ಅಡಿಯಲ್ಲಿ ಬರುವವು ಆಗಿವೆ. ಎಲ್ಲ ದೊರೆತನ ಎಲ್ಲಾ ಅಧಿಕಾರ ಬಲಗಳಿಗೆ ಇನ್ನು ಮುಂದೆ ಅನರ್ಹನು ಎಂದು ಪೌಲನು ಸೂಚಿಸುತ್ತಿಲ್ಲ. ಬದಲಾಗಿ, ದೇವರ ಮನುಕುಲದ ವಿಮೋಚನೆಗಾಗಿನ ಎಲ್ಲ ಸುತ್ತುವರೆಯಲ್ಪಟ್ಟವುಗಳೀಂದ ಮಾಡಲ್ಪಟ್ಟವುಗಳು ಸಂಪೂರ್ಣಗೊಂಡಿವೆ ಎಂದು ಅತನು ನಿಶ್ಚಯಪೂರಕವಾಗಿ ಹೇಳುತ್ತಾನೆ. ದೇವರ ಆಳ್ವಿಕೆಯಲ್ಲಿ ನಾವು ಇಡುವ ವಿಶ್ವಾಸ ಮತ್ತು ದೇವರಿಂದ ಕ್ರಿಸ್ತನಿಗೆ ಬಲದ ವರ್ಗಾವಣೆಗಳ ಯೋಚನೆಯ ಇಲ್ಲದಿರುವದು ವಿವೇಕಕ್ಕೆ ಅವಶ್ಯವಾಗಿದೆ. ಭೂಮಿಯ ಮೇಲೆ ಕ್ರಿಸ್ತನ ಒಂದು ಸಾವಿರ ವರ್ಷಗಳ ಆಳ್ವಿಕೆಯ ಮಧ್ಯ ಆತನ ಮಹಿಮಾಪೂರಕ ಕಾಣಿಸಿಕೊಳ್ಳುವಿಕೆ ಮತ್ತು ಎಲ್ಲ ಸಂಗತಿಗಳನ್ನು ನೆರವೇರಿಸಲು ಯಾವದೂ ಮಧ್ಯವರ್ತಿಯಾಗಿ ವ್ಯವಹರಿಸದು ಎಂದು ಪೌಲನು ಹೇಳುತ್ತಾನೆ. ಅಂಥ ಯಾವುದೇ ಸಿದ್ಧಾಂತಗಳು ಮಾನವ ನಿರ್ಮಿತವಾದವುಗಳು ಆಗಿವೆ.

**ವಚನ 25.** ಯೇಸುವು ತನ್ನ ಸಭೆಯ **ರಾಜ್ಯವನ್ನಾಳುವನು**. ಆತನು ಜನರ ಅರಸನು (ಮತ್ತಾಯ 2:2; 27:11; ಲೂಕ 19:38; ಕೊಲಸ್ಸೆ 1:13) ಮತ್ತು ಚೊಚ್ಚಲ ಮಕ್ಕಳ ಸಭೆಗೂ ಆತನೇ ಮುಖ್ಯಸ್ಥನು (ಇಬ್ರೀಯ 12:23). ಸಭೆ ಮತ್ತು ದೇವರ ರಾಜ್ಯಗಳ ಮಧ್ಯದ ಚಿಕ್ಕ ಭಿನ್ನತೆಗಳು ಮುಂದಿನ ಕಾಲಕ್ಕೆ ಇದ್ದು; ಹೊಸ ಒಡಂಬಡಿಕೆಯಲ್ಲಿ, ಇಂಥ ಭಿನ್ನತೆಗಳು ಪ್ರಭಾವ ಬೀರಿವೆ. ಕ್ರಿಸ್ತನ ಎಲ್ಲ ದೊರೆತನವನ್ನು, ಎಲ್ಲಾ ಅಧಿಕಾರವನ್ನೂ ನಾಶಮಾಡುವಂಥದ್ದು ಆತನ ವೈರಿಗಳ ಮೇಲೆ ದೊರೆತನವನ್ನು ಮಾಡುವದು ಎಂದು ಹಿಂದಿನ ವಚನದಲ್ಲಿ, ಪೌಲನು ಹೇಳಿದ್ದಾನೆ (1 ಕೊರಿಂಥ 15:24). ಹೇಗೋ, ಈ ವಾಕ್ಯದಲ್ಲಿ **ತಾನು ಎಲ್ಲಾ ವಿರೋಧಿಗಳನ್ನು ತನ್ನ ಪಾದಗಳ ಕೆಳಗೆ ಹಾಕಿಕೊಳ್ಳುವ ತನಕ** ಎಂದಿದ್ದು ಮೊದಲಿನ ಸರ್ವನಾಮವು ಅನಿಶ್ಚಿತವಾಗಿದೆ. ಎಲ್ಲ ಸಂಗತಿಗಳನ್ನು ದೇವರು ಕ್ರಿಸ್ತನ ಪಾದದ ಕೆಳಗೆ ಹಾಕಿದನೋ ಅಥವಾ ಇತರ ಎಲ್ಲ ಬಲಗಳಿಗೆ ಕ್ರಿಸ್ತನು ತಾನೇ ವಸ್ತುವಾದನೇ? ಯಾಕೆಂದರೆ ಎಂಬ ಸಮುಚ್ಚಯವು 15:25 ಯೇಸುವಿನ ಬಗೆಗೆ ಮಾತನಾಡುವ ಹಿಂದಿನ ವಚನದ ವಿಚಾರಕ್ಕೆ ಸೇರಿಸುವುದಾಗಿದೆ; ಆದರೆ 15:27ರಲ್ಲಿ ಉಲ್ಲೇಖಿತವಾದ ಕೀರ್ತನೆ 8:6ರಲ್ಲಿ ದೇವರು ಆ ವಿಷಯವಾಗಿ ಸ್ಪಷ್ಟವಾಗಿದ್ದಾನೆ. ಪ್ರತ್ಯಕ್ಷವಾಗಿ, 15:25ರಲ್ಲಿ ದೇವರೂ ಕೂಡ ವಿಷಯವಾಗಿದ್ದಾನೆ. ದೇವರು ಎಲ್ಲಾ ವಿರೋಧಿಗಳನ್ನು "ಆತನ ಪಾದಗಳ ಕೆಳಗೆ ಹಾಕು"ವನು. "ಪಾದಗಳ ಕೆಳಗೆ" ಎಂಬ ಪದವು ಕೀರ್ತನೆ 8:6 ಮತ್ತು 110:1ರಲ್ಲಿ ಸಿಕ್ಕುವ ಅದೇ ವಿಚಾರವನ್ನು ಪ್ರತಿಧ್ವನಿಸುವುದಾಗಿದೆ. "ದೇವರು ಬಲದ ನಿಯೋಗವೂ ಮತ್ತು ಮೂಲವೂ ಆಗಿದ್ದಾನೆ ಮತ್ತು ಕ್ರಿಸ್ತನು ಎಲ್ಲ ವಿಷಯಗಳಿಗೆ ವಸ್ತುವಾಗಿದ್ದಾನೆ."[22]

ಪಾಪದಿಂದ ಸ್ತ್ರೀ ಮತ್ತು ಪುರುಷನನ್ನು ಕೊಂಡುಕೊಂಡವನು ತಾತ್ಕಾಲಿಕವಾಗಿ ಆಳುವುದರ ಮಧ್ಯ, ಯುಗದ ಅಂತ್ಯದಲ್ಲಿ ಆತನ ಆತನ ದಿವಾರೋಹಣ ಮತ್ತು *parousia* ಗಳು ಕ್ರಿಸ್ತನ ಅವತರಿಸುವಿಕೆಯು ಆಗಿದೆ, ತಂದೆಯ ಆಳ್ವಿಕೆ ಮತ್ತು ಮಗನ ಆಳ್ವಿಕೆ ಮಧ್ಯ ಯಾವುದೇ ಭಿನ್ನತೆಯ ಮಾಡಲ್ಪಟ್ಟರೂ ಮುಚ್ಚಿಡಲ್ಪಟ್ಟದ್ದು ದೇವರೆಡಯಲ್ಲಿ ಇದೆ. ಪೌಲನು ಕ್ವಚಿತ್ತಾಗಿ ಈ ಭಿನತೆಗಳನ್ನು ಸೂಚಿಸುವವನಾಗಿದ್ದಾನೆ. ತಂದೆಯನ್ನು ಒಪ್ಪಿಕೊಳ್ಳುವವರು

ಮಗನನ್ನು ಅಂಗೀಕರಿಸುವ ಮೂಲಕ ಹಾಗೆ ಮಾಡಬಹುದು. ಕ್ರಿಸ್ತನ ಮೂಲಕ ಆತನು ಮರಳಿಬರುವವಾಗ ಆತನ ವಿಜಯವನ್ನು ಹಂಚಿಕೊಳ್ಳುವವರಾಗಿದ್ದಾರೆ (ನೋಡಿರಿ ರೋಮಾ 14:9). ಕೆಡುಕನ ಯಾವದೇ ಪ್ರಸ್ತುತ ತಾತ್ಕಾಲಿಕ ವಿಜಯವು ಏನೂ ಮಾಡದು. ಕ್ರಿಸ್ತನ ಪುನರುತ್ಥಾನವು ಅಂತಿಮವಾದ ವಿಜಯದ ಭರವಸೆಯು ಅಗಿದೆ.

**ವಚನ 26.** ಆರಂಭದಿಂದಲೂ, ಭೌತಿಕ ರೂಪದಲ್ಲಿ, ಮರಣವು ಉಸಿರಿನ ಕೊನೆ, ಎಚ್ಚರದಿಂದ ಇರುವಿಕೆಯ ಕೊನೆ ಎಂಬರ್ಥವನ್ನು ಕೊಡುತ್ತದೆ ಆದರೆ ಮರಣ ಮತ್ತು ಮರಣಿಸುವಿಕೆಯ ಮೊದಲ ಪ್ರಸ್ತಾವನೆ ಕೂಡ (ಆದಿ. 2:17), ಭೌತಿಕದ ಆಚೆಯೂ ವ್ಯಾಪ್ತಿಯು ಇದೆ ಎಂದು ದೇವರು ಸುಳಿಹು ಕೊಡುತ್ತಾನೆ. Grim Reaperರ ಹೋಲಿಕೆಯ ಪ್ರಕಾರ, ಮರಣವು ಜೀವನದ ಪ್ರತಿರೋಧವು ಮರಣವು **ಕೊನೆಯ ವೈರಿಯೂ** ಆಗಿದೆ. ಜೀವಿತವು ಸಂತೋಷದ, ಚಿನ್ಹೆ, ಒಬ್ಬನ ಸ್ಥಳವನ್ನು ಹುಡುಕುವದು, ಪ್ರೀತಿ, ಕುಟುಂಬ, ಸಂತಸ ಮತ್ತು ಸಂತೃಪ್ತಿ ಆಗಿದೆ; ಮರಣವು ಅದಕ್ಕೆ ತದ್ವಿರುದ್ಧವಾದ್ದು. ಯೇಸುವು ಮರಣದ ಕೊಂಡಿಯನ್ನು ತೆಗೆದುಬಿಟ್ಟಿದ್ದಾನೆ (15:55, 56). ಜನರು ಸಾಧ್ಯವಾದಷ್ಟು ಉತ್ತಮ ಜೀವಿತವನ್ನು ಹೊಂದಲೆಂದು ಆತನು ಬಂದನು (ಯೋಹಾನ 5:24; 10:10).

ಪ್ರಥಮ ಫಲವಾದ. ಯೇಸುವಿನ ಪುನರುತ್ಥಾನದ ಮೂಲಕ ವಿಶ್ವಾಸಿಗಳಿಗೆ ದೇಹಸಹಿತವಾದ ಕೇವಲ ಪುನರುತ್ಥಾನದ ಖಚಿತತೆ ಮಾತ್ರ ಆಗಿರಲಿಲ್ಲ ಆದರೆ ಯೇಸುವಿನ ಪುನರುತ್ಥಾನವು ವೈರಿಗಳ ಮೇಲೆ ಎಲ್ಲ, “ಮರಣ”ದ ಮೇಲೆಯೂ ಸಹ ಅಂತಿಮ ವಿಜಯವನ್ನು ಖಚಿತಪಡಿಸುವುದಾಗಿದೆ. ಕ್ರಿಸ್ತನು ಬರುವ ತನಕ, ಪಾಪ ಮತ್ತು “ಮರಣ” ಮನುಷ್ಯರ ಜಗತ್ತಿನಲ್ಲಿ ಬಲವನ್ನು ಪಡೆದಿವೆ; ಆದರೆ ಕೊನೆಯಲ್ಲಿ, ಅದೂ ಕೂಡಾ ನಾಶವಾಗುತ್ತದೆ. ಮರಣವು ಪಾಪದಿಂದ ಬರುತ್ತದೆ; ಜೀವವು ಮರಣದಿಂದ ಎದ್ದವನ ಮೂಲಕ ಬರುವುದಾಗಿದೆ. ಆತನ ವಿಜಯದ ಸಂಪೂರ್ಣವಾದ ನಂತರ ಮರಣವು ಇರುವುದೇ ಇಲ್ಲ.

ಪೌಲನ ಉಲ್ಲೇಖಿಸಿದ ಮಾತುಗಳಲ್ಲಿ ಕೀರ್ತನೆ 8:6ರ ಹಿನ್ನಲೆಯಲ್ಲಿ ಸಾಮಾನ್ಯ ಅನ್ವಯಗಳಿವೆ. “[ವರ್ಗೀಕೃತ] ಮನುಷ್ಯನು ಎಷ್ಟು ಮಾತ್ರದವನು” “ಅವನಲ್ಲಿ ಯಾಕೆ ಲಕ್ಷವಿಡಬೇಕು?” ಎಂದು ಕೀರ್ತನೆಗಾರನು ಕೇಳುತ್ತಾನೆ (ಕೀರ್ತನೆ 8:4). ನಜರೇತಿನ ಯೇಸುವಿಗಾಗಿ ನಿರ್ಧಿಷ್ಟವಾದ ಪದಗಳನ್ನು ಪೌಲನು ಅನ್ವಯಿಸಿದನು (ನೋಡಿರಿ ಇಬ್ರೀಯ 2:5-8). “ನಿನ್ನ ಕೈಯ ಕೆಲಸದ ಮೇಲೆ ಆಳುವವನಾಗಿರು; ಎಲ್ಲ ಸಂಗತಿಗಳನ್ನು ನಿನ್ನ ಪಾದಗಳ ಕೆಳಗೆ ಇಟ್ಟುಕೋ” ಎಂದು ದೇವರು ಮಾನವನನ್ನು ಮಾಡಿದನು ಎಂದು ಕೀರ್ತನೆಗಾರನು ಒತ್ತಿಹೇಳುತ್ತಾನೆ. ಅಂತಿಮವಾದ ಮನುಷ್ಯ ಕ್ರಿಸ್ತನಿಂದ ಅವಿರ್ಭವಿಸುವ ಮಾತುಗಳನ್ನು ಪೌಲನು ವಿಶಿಷ್ಟವಾದ ಅನ್ವಯವನ್ನು ಮಾಡಿದ್ದಾನೆ. ಅವಿರ್ಭವಿಸುವಿಕೆಯ ಕಾರಣದಿಂದ ಮತ್ತು ಮಗನ ಮರಣ ಹಾಗೂ ಪುನರುತ್ಥಾನದ ಪರಿಣಾಮವಾಗಿ ದೇವರು ಈಗ “ಸಮಸ್ತವನ್ನೂ ಆತನ ಪಾದಗಳ ಕೆಳಗೆ ಹಾಕಿದನು” (1 ಕೊರಿಂಥ 15:27ಅ). ತನಗೋಸ್ಕರ ಪರಿಶುದ್ಧ ಜನರಿಗೋಸ್ಕರದ ಆತನ ಶುದ್ಧೀಕರಿಸುವಿಕೆಯ ನಿರ್ಧಿಷ್ಟವಾಗಿ ಯೇಸುವಿನ ಆಳ್ವಿಕೆಯನ್ನು ಪ್ರಕಟಿಸುವುದಾಗಿದೆ (ನೋಡಿರಿ 1 ಪೇತ್ರ 1:14-19). ಆತನು ತನ್ನ ಸಭೆಯನ್ನು ಆಳುವವನಾಗಿದ್ದಾನೆ.

**ವಚನ 27.** ಅಪೊಸ್ತಲನು ಈ ಸತ್ಯವನ್ನು ಸ್ಪಷ್ಟಪಡಿಸುತ್ತಾನೆ. NASB

ಬಾಷಾಂತರವು ಆದರೆ ಆತನು ಹೇಳಿದಾಗ ಎಂದು ತೃತೀಯ ಪುರ ಷ ಏಕವಚನದ ಕ್ರಿಯಾಪದಕ್ಕೆ (εἴπῃ, *eipē*) ವಿಷಯವನ್ನು ಒದಗಿಸುವುದಾಗಿದೆ; ಸಂದರ್ಭವು ಯಾವುದು "ಆತನು." "ಆಕೆ" ಅಥವಾ "ಇದು" ಎಂದು ಹೇಳುವುದನ್ನು ಗುರುತಿಸಲೇಬೇಕು. ಪೌಲನು ಕೀರ್ತನೆಯನ್ನು ಉಲ್ಲೇಖಿಸಿದ್ದರಿಂದ, ಒಂದು ಉತ್ತಮ ಭಾಷಾಂತರವು "ಆದರೆ ಅದು ಹೇಳಿದಾಗ" ಎಂದಿದೆ. ಭೀನ್ನವಾದ ಭಾಷಾಂತರವು ಚಿಕ್ಕದಾಗಿದ್ದಾಗಿದೆ. ವೇದಭಾಗವು ಹೇಳುವುದೇನೆಂದರೆ, ದೇವರು ಹೇಳಿದನು; ಮತ್ತು ದೇವರು ಏನು ಹೇಳಿದನೆಂಬುವುದನ್ನು ಪೌಲನು ಸೂಚಿಸಿದನು. "ಇದು ಸ್ಪಷ್ಟವಾಗಿದೆ" ಎಂದು ಪೌಲನು ಹೇಳುತ್ತಾ, ಸಮಸ್ತವನ್ನೂ ಆತನ ಪಾದಗಳ ಕೆಳಗೆ ಆಧೀನಮಾಡಿದ್ದಾನೆ ಎಂದು ವ್ಯಾಖ್ಯಾನಿಸುತ್ತಾನೆ. ತಂದೆಯಾದ ದೇವರು ತನ್ನ ಮಗನಿಗೆ ಆಧೀನ ಮಾಡುತ್ತಿರಲಿಲ್ಲ. ತಂದೆ ಮತ್ತು ಮಗ ಆಳ್ವಿಕೆಯಲ್ಲಿ ಮತ್ತು ಮಹಿಮೆಯಲ್ಲಿ ಬೇರ್ಪಡಿಸಲಾಗದೇ ಇದ್ದುದರಿಂದ, ತಂದೆಯ ಪ್ರಾಮುಖ್ಯತೆಯನ್ನು ಒತ್ತಿ ಹೇಳುವಲ್ಲಿ ಪೌಲನು ಹಿಂದೆಮುಂದೆ ನೋಡಲಿಲ್ಲ. ತಂದೆಯು ಮಗನಿಗೆ ಆಧೀನವಾಗುವಿಕೆಯನ್ನು ವೇದಭಾಗವು ಎಂದಿಗೂ ಮಾತನಾಡದು. ತಂದೆಯು ಮಗನಿಗೆ ಒಂದು ನಿಯೋಗವನ್ನು ಕೊಟ್ಟನು (ಯೋಹಾನ 5:36); ಮಗನು ತಂದೆಗೆ ಯೋಗ್ಯವಾದದ್ದನ್ನು ಮಾಡಿದನು (ಯೋಹಾನ 4:34). ಅವತರಿಸುವಿಕೆಯಲ್ಲಿನ ಯೇಸುವಿನ ಅಮೂಲ್ಯವಾದ ಕಾರ್ಯವು ಆತನ ರಾಜ್ಯವನ್ನು ಆಳುವುದಕ್ಕಾಗಿ ಸನ್ನದ್ಧನನ್ನಾಗಿಸಿದ್ದನ್ನು ಪೌಲನು ಒತ್ತಿ ಹೇಳುತ್ತಾನೆ (ಎಫೆಸ 1:22, 23), ಆದರೆ ಆತನ ಆಳ್ವಿಕೆಯ ದೇವರ ಹಿರಿಮೆಗೆ ಹೊಂದಿಕೆಯಾಗುವಂತದ್ದು ಇತ್ತು.

**ವಚನ 28.** ಈ ವಚನದಲ್ಲಿ ಮತ್ತು 1:9ರಲ್ಲಿ ಮಾತ್ರ ಯೇಸುವು ದೇವರ ಮಗ ಎಂದು ಪೌಲನು 1 ಕೊರಿಂಥದಲ್ಲಿ ಸೂಚಿಸಿದ್ದಾನೆ. ತಂದೆ ಮತ್ತು **ಮಗ** ಇಬ್ಬರೂ ತಮ್ಮ ಶ್ರೇಷ್ಟತೆಯ ಬಗ್ಗೆ ಸ್ಪರ್ದಿಸುತ್ತಿದ್ದಾರೆ ಎಂದು ಇಲ್ಲಿ ಸೂಚಿಸುತ್ತಿಲ್ಲ. ತ್ರೈತ್ವದಲ್ಲಿ ಈ ವಿಷಯವು ಯಾಕೆ ಸ್ಪರ್ದಾತ್ಮಕವಾಯಿತು ಎಂಬುದು ಊಹಿಸಿಕೊಳ್ಳಲೂ ಕಷ್ಟಕರವಾದ್ದು. ತಂದೆ ಮತ್ತು ಮಗ ಒಂದೇ ಮನಸ್ಕರು ಮತ್ತು ಒಂದೇ ಜೀವಿಯೂ ಅಗಿದ್ದಾರೆ. ಒಟ್ಟಾಗಿ, ಪರಿಶುದ್ಧಾತ್ಮನೊಡನೆ (ನೋಡಿರಿ 6:19; 12:3), ಅವರು ಒಂದೇ ದೇವರಾಗಿದ್ದಾರೆ. ಪೌಲನು ಮಾಡಿದ ಭಿನ್ನತೆಯು ರಕ್ಷಕನಂತೆ ಯೇಸುವಿನ ಪಾತ್ರ ಮತ್ತು ಆತನ ಜನರ ಮೇಲೆ ಮುಖ್ಯಸ್ಥನಾಗಿರುವಿಕೆಯೊಡನೆ ಇರುವುದಾಗಿತ್ತು. ಅವರಲ್ಲಿ ಒಬ್ಬನಾಗಿ ಅವರನ್ನು ಆತನು ಆಳುತ್ತಾನೆ. ಆತನು ನ್ಯಾಯತೀರ್ಪಿಗಾಗಿ, ಪುನರುತ್ಥಾನಕ್ಕಾಗಿ, ಮತ್ತು ತನ್ನ ಜನರನ್ನು ನಿತ್ಯತ್ವಕ್ಕೆ ತೆಗೆದುಕೊಂಡು ಹೋಗಲು, ಮಧ್ಯಸ್ಥಗಾರನಂತೆ ಆತನು ಅಪೂರ್ವವಾದ ಪಾತ್ರವು ಕೊನೆಯಾದಾಗ ಆತನು ತಿರುಗಿ ಬರುತ್ತಾನೆ (1 ತಿಮೊಥೆ 2:5; ನೋಡಿರಿ 1 ಕೊರಿಂಥ 8:6). ಸಮಸ್ತವೂ ಆತನಿಗೆ ಆಧೀನವಾದ ಮೇಲೆ **ಮಗನು ತನಗೆ ಆಧೀನಮಾಡಿಕೊಟ್ಟಾತನಿಗೆ ತಾನೇ ಆಧೀನನಾಗುವನು ದೇವರು ಸಮಸ್ತರಲ್ಲಿ ಸಮಸ್ತವೂ ಆಗುವನು**. ದೇವರು "ಸಮಸ್ತರಲ್ಲಿ ಸಮಸ್ತವೂ" ಮುಖ್ಯಸ್ಥನಾಗಿರುವದು.

ಮಗನ ದಿವಾರೋಹಣ ಮತ್ತು ಆತನ *parousia* ಕಾಲದ ಅಂತ್ಯದಲ್ಲಿನದನ್ನು ಸೂಚಿಸುವುದಾಗಿದ್ದು (15:24), ಮಾನವನ ಕ್ಷೇತ್ರದಲ್ಲಿರುವ ಆತನ ಜೀವಿತ ಮತ್ತು ಮರಣದೊಂದಿಗೆ ಜೊತೆಗೊಂಡಿರುವ ಆಡಳಿತ ಮತ್ತು ಅಧಿಕಾರವನ್ನು ಮಗನು ಅಂದಾಜು ಮಾಡಿದ್ದಾನೆ. ಈಗಲೂ ಕೂಡ ಮಗನ ಅಧಿಕಾರವು ತಂದೆಯ ಮಹಿಮೆ ಅಥವಾ

ಸಾರ್ವಭೌಮತ್ವವನ್ನು ತ್ಯಾಗಮಾಡುವುದಲ್ಲ. ತನ್ನ ಅವತರಿಸುವಿಕೆಯ ಆಧಾರದ ಮೇಲೆ ತಂದೆಯು ಮಗನಿಗೆ ನಿಯೋಗವನ್ನು ಹಂಚಿಕೊಟ್ಟನು. ತಂದೆ ಮತ್ತು ಮಗನು ಮನುಕುಲದ ಬಿಡುಗಡೆಯ ನಿತ್ಯತ್ವದ ಅದೇ ಯೋಜನೆಯಲ್ಲಿ ಒಂದಾಗಿದ್ದರು.

ಕ್ರಿಸ್ತನ ಸಂದೇಶವು ಸಂಪೂರ್ಣಹೃದಯದದಿಂದ ಸಮರ್ಪಿಸಿಕೊಂಡವರಿಗೆ, ಮರಣದ ಅಂಶಕ್ಕೂ ಕೂಡಾ ಆ ಆಮಂತ್ರಣವು ಇಲ್ಲದೇ ಇಲ್ಲ (ಲೂಕ 14:26, 27). ಪೌಲನು ವಾದಿಸಿದಂತಹ ಮರಣದ ಪುನರುತ್ಥಾನವು ಆತನು ಬಯಸಿದ ಮೂಲ ಸ್ವರೂಪದ ಜೀವಿತವನ್ನು ಗೆಲಿಲಿಯೊನ್ ಬೋಧಕರ ನಂಬಿಕೆಯಲ್ಲಿ ಸಂಬಂಧಿಸುವಂತದ್ದಾಗಿತ್ತು. ಬರಲಿರುವ ಕಾಲದಲ್ಲಿ ಜೀವನಕ್ಕಾಗಿ ಭರವಸೆಯು ಇಲ್ಲದಿರುವದು, ಯೇಸುವನ್ನು ಹಿಂಬಾಲಿಸುವ ಕ್ರಮದಲ್ಲಿ ಕೇವಲ ಒಬ್ಬ ಮೂರ್ಖನು ಮಾತ್ರ ತನ್ನನ್ನು ಅಪಾಯಕ್ಕೆ, ಕಷ್ಟಪಡುವಿಕೆ, ಮತ್ತು ಮರಣದ ವಿಷಯಗಳನ್ನು ಆರಿಸಿಕೊಳ್ಳುವವನಾಗಿದ್ದಾನೆ. ದೇಹಸಹಿತವಾದ ಪುನರುತ್ಥಾನವು ಕ್ರಿಸ್ತೀಯ ಅರಿಕೆಗೆ ಜೋಡಿಸಲ್ಪಟ್ಟಿಲ್ಲ; ಕ್ರಿಸ್ತನಲ್ಲಿಯ ನಮ್ಮ ನಂಬಿಕೆಯ ಕೇಂದ್ರವಾಗಿ ಇದು ಪಾಲ್ಗೊಳ್ಳುವುದಾಗಿದೆ.

## ದೊಡ್ಡದಾದ "ಯಾಕೆ?" (15:29-34)

**29ಸತ್ತವರಿಗೆ ಪುನರುತ್ಥಾನವಿಲ್ಲವಾದರೆ ಸತ್ತವರಿಗೋಸ್ಕರ ದೀಕ್ಷಾಸ್ನಾನ ಮಾಡಿಸಿಕೊಳ್ಳುವವರು ಏನು ಮಾಡುವರು? ಸತ್ತವರು ಎದ್ದುಬರುವದೇ ಇಲ್ಲವೆಂಬುದು ನಿಜವಾಗಿದ್ದರೆ ಯಾಕೆ ಅವರಿಗೋಸ್ಕರ ದೀಕ್ಷಾಸ್ನಾನ ಮಾಡಿಸಿಕೊಳ್ಳುತ್ತಾರೆ? 30ನಾವು ಸಹ ಪ್ರತಿ ಗಳಿಗೆಯಲ್ಲಿಯೂ ಯಾಕೆ ಜೀವದ ಭಯದಿಂದಲ್ಲಿದ್ದೇವೆ? 31ಸಹೋದರರೇ, ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿ ನಿಮ್ಮನ್ನು ಕುರಿತು ನಮಗಿರುವ ಹೆಚ್ಚಳದ ಮೇಲೆ ಆಣೆ ಇಟ್ಟು ನಾನು ದಿನಾಲು ಸಾಯುತ್ತಲಿದ್ದೇನೆ ಎಂದು ಹೇಳುತ್ತೇನೆ. 32ನಾನು ಎಫೆಸದಲ್ಲಿ ಮೃಗಗಳೊಂದಿಗೆ ಯುದ್ಧ ಮಾಡಿದ್ದು ಕೇವಲ ಮಾನಷಾಭಿಪ್ರಾಯದಿಂದಾದರೆ ನನಗೇನು ಪ್ರಯೋಜನ? ಸತ್ತವರು ಎದ್ದುಬರಲಿಲ್ಲವಾದರೆ – ತಿನ್ನೋಣ ಕುಡಿಯೋಣ, ನಾಳೆ ಸಾಯುತ್ತೇವಲ್ಲಾ. 33ಮೋಸಹೋಗಬೇಡಿರಿ. ದುಸ್ಸಾಹಸವು ಸದಾಚಾರವನ್ನು ಕೆಡಿಸುತ್ತದೆ. 34ಇಂಥ ಅಮಲಿನಿಂದೆಚ್ಚೆತ್ತು ನೀತಿವಂತರಾಗಿರಿ. ಪಾಪವನ್ನು ಬಿಟ್ಟುಬಿಡಿರಿ; ಕೆಲವರಿಗೆ ದೇವರ ವಿಷಯದಲ್ಲಿ ಜ್ಞಾನವೇ ಇಲ್ಲ; ನಿಮಗೆ ನಾಚಿಕೆ ಹುಟ್ಟಬೇಕೆಂದು ಇದನ್ನು ಹೇಳುತ್ತೇನೆ.**

**ವಚನ 29.** ಈ ವಚನದ ಕ್ಲಿಷ್ಟತೆಯನ್ನು ವಿವರಿಸಲು ಸತ್ಯವೇದೀಯ ವಿದ್ಯಾರ್ಥಿಗಳು ಅಸಂಖ್ಯಾತ ಮಾರ್ಗಗಳನ್ನು ಕೊಡುವವರಾಗಿದ್ದಾರೆ. ಅವರಲ್ಲಿ ಅನೇಕರು ವಿವರಿಸಿದ ಭಾಗದಲ್ಲಿ ಚಾತುರ್ಯವನ್ನು ಪ್ರಾಯೋಗಿಸುವವುದಕ್ಕಿಂತಲೂ ಹೆಚ್ಚಾಗಿ ಅವರು ವಿವೇಚನಯುಕ್ತ ವಿವರಣೆಗಳನ್ನು ಕೊಡುವವರಾಗಿದ್ದಾರೆ. ಸಮಸ್ತ ಸೈದ್ಧಾಂತಿಕ ಪದ್ಧತಿಯ ಅವಲಂಭನೆಯು ವಚನದ ಅಕ್ಷರಶಃ ವ್ಯಾಖ್ಯಾನದ ಮೇಲೆ ಇದು ಇರುವುದಾಗಿದೆ. ಮರಣಿಸಿದ ಜನರಿಗೋಸ್ಕರ ಕೊರಿಂಥದವರು ಆ ತರದ ಪರಾರ್ಥಕವಾದ ದೀಕ್ಷಾಸ್ನಾನವನ್ನು ನಡೆಸುತ್ತಿದ್ದರು ಎಂದು ಕೆಲವರು ಸೂಚಿಸುವವರಾಗಿದ್ದಾರೆ. ಅದು ಹಾಗಿರುವುದಾದರೆ, ಇದರ ದಾಖಲೆಯು ಕೇವಲ ಹೊಸ ಒಡಂಬಡಿಕೆಯಲ್ಲಿ ಮಾತ್ರ ಇರುವುದಾಗಿದೆ. ಏನೇ ಆದರೂ, ವಿವರಣೆಯು ಪರಿಗಣನೀಯವಾದ ಕ್ಲಿಷ್ಟತೆಯನ್ನು

ಕೊಡುವುದಾಗಿದ್ದು, ಸಾಮಾನ್ಯ ರೀತಿಯಲ್ಲಿ ಪೌಲನು ಸೂಚಿಸಿದ್ದು ಮತ್ತು ತೆಗೆದು ಹಾಕಲ್ಪಟ್ಟ ವಿಷಯವೂ ಆಗಿದೆ. ಕ್ರೈಸ್ತರು ಮರಣಿಸಿದ ಅವಿಶ್ವಾಸಿಗಳಾದ ಸ್ನೇಹಿತರ ಅಥವಾ ಸಂಬಂಧಿಕರಿಗಾಗಿ ದೀಕ್ಷಾಸ್ನಾನ ಮಾಡಿಸಿಕೊಂಡಿದ್ದಾದರೆ ಅದು ಊಹಿಸಲಾ ಸಾಧ್ಯವಾದಂಥದ್ದು ಆಗಿದ್ದು ಆ ಅಭ್ಯಾಸದ ಪ್ರಯತ್ನವನ್ನು ಮಾಡದೇ ಸರಿಪಡಿಸಿಕೊಳ್ಳಬೇಕೆಂದು ಪೌಲನು ಸೂಚಿಸುವವನಾಗಿದ್ದಾನೆ. ಕ್ರಿಸ್ತಿಯ ಸಿದ್ಧಾಂತಗಳ ತಿರುಚುವಿಕೆಯನ್ನು ವಿರೋಧಸಿವುದರ ಬಗ್ಗೆ ಅಪೊಸ್ತಲನು ನಾಚಿಕೊಳ್ಳುವವನಾಗಿರಲಿಲ್ಲ. ಪೌಲನು ಚರ್ಚಿಸಿದ ಪ್ರತಿಯೊಂದೂ ದೀಕ್ಷಾಸ್ನಾನದ ಉದಾಹರಣೆಯಲ್ಲಿ (ರೋಮಾ 6:3-7; 1 ಕೊರಿಂಥ 6:11; ಗಲಾತ್ಯ 3:27; ಕೊಲೊ 2:12; ತೀತ 3:5), ದೀಕ್ಷಾಸ್ನಾನ ಮಾಡಿಸಿಕೊಂಡವನ ನಂಬಿಕೆಯ ಪ್ರತಿಕ್ರಿಯೆಯ ಬಗೆಗೆ ಆತನು ಮಾತನಾಡುತ್ತಿದ್ದಾನೆ.

ಕೊರಿಂಥದವರು ಅನುಸರಿಸುತ್ತಿದ್ದ ಪ್ರಾತಿನಿಧಿಕ ದೀಕ್ಷಾಸ್ನಾನದ ವಿಚಾರವು ಕ್ಲಿಷ್ಟತೆಗಳಿದ್ದಾಗ್ಯೂ, ಕೆಲ ವಿವರಣಾಕಾರರಿಗೋಸ್ಕರಿಗೆ ಇದು ಈ ಪರಿಚ್ಛೇದದ ಬಲು ಕಾರ್ಯಸಾಧ್ಯವಾದ ವಿವರಣೆಗಳನ್ನು ಕೊಡುವುದಾಗಿದೆ. “ತಾನೇ ಪರವಾನಿಗೆ ಕೊಡದ ತನ್ನ ವಿರೋಧಿಗಳಲ್ಲಿರುವ ಆಚಾರಗಳ ಬಗ್ಗೆ ಆತನು ವಾದಮಾಡುವದು ಸಾಧ್ಯತೆಯುಳ್ಳದ್ದೇ” ಎಂದು Herman Ridderbos ಬರೆಯುತ್ತಾರೆ.[23] ಸತ್ಯವಾದಂಥ ಅಂಥವುಗಳಿಗೆ ಅಂತಹ ಅಭ್ಯಾಸಗಳು ತೊಂದರೆಯಿಲ್ಲದವು, ಅವುಗಳಿಂದ ಯಾವ ಪ್ರಯೋಜನವೂ ಇಲ್ಲ, ಎಂದು ಪೌಲನು ನೋಡುವವನಾಗಿದ್ದನು, ಬಹುಶಃ ಪೌಲನ ಮಾತುಗಳು **ಸತ್ತವರು ಎದ್ದುಬರುವದೇ ಇಲ್ಲವೆಂಬುದು ನಿಜವಾಗಿದ್ದರೆ ಯಾಕೆ ಅವರಿಗೋಸ್ಕರ ದೀಕ್ಷಾಸ್ನಾನ ಮಾಡಿಸಿಕೊಳ್ಳುತ್ತಾರೆ?** ಎಂಬ ಪೌಲನ ಮಾತುಗಳು ಆ ಅಬ್ಯಾಸದ ಆತನ ಸಮ್ಮತಿಯನ್ನು ಬಹುಶಃ ಸೂಚಿಸುವುದಾಗಿರಬಹುದು. ಸಿದ್ಧಾಂತದ ಬಗ್ಗೆ ಪುನರುತ್ಥಾನದ ಬಗೆಗೆ ಆತನ ಬೋಧನೆಗಳಲ್ಲಿ ಇದು ಬಲಪಡಿಸಿದಗಲೂ ಕೂಡಾ ಒಬ್ಬನ ಸ್ಪಷ್ಟವಾದ ಅಸಮ್ಮತಿಯನ್ನು ಎದುರುನೋಡಬಹುದು. ಹೇಗೋ, ಈ ಅಬ್ಯಾಸದಿಂದ ಪೌಲನು ತನಗೋಸ್ಕರ ಅಂತರವನ್ನು ಕಾಣುವವನಾಗಿದ್ದನು. “ಅವರು . . . ಏನು ಮಾಡುವರು?” ಎಂದು ಆತನು ಕೆಳುತ್ತಾನೆ, “. . . ನಾವು ಏನು ಮಾಡುತ್ತೇವೆ?” ಎಂದು ಆತನು ಕೇಳಲಿಲ್ಲ. “ಪುನರುತ್ಥಾನವು ಅಗುವುದಿಲ್ಲವೆಂದ ಮೇಲೆ ‘ಸತ್ತವರಿಗೋಸ್ಕರ’ ದೀಕ್ಷಾಸ್ನಾನ ಮಾಡಿಸಿಕೊಳ್ಳುವದರಿಂದ ಏನು ಪ್ರಯೋಜನ?” ಎಂಬುದು ಪ್ರಶ್ನೆಯ ಮರ್ಮವಾಗಿರಬಹುದು. ಇದೊಂದು ಒಳ್ಳೆಯ ವಿವರಣೆಯು ಆಗಿದ್ದು: “ಪುನರುತ್ಥಾನವನ್ನು ನಿರಾಕರಿಸುವವರು ಆ ಜನರಲ್ಲಿ ಕೆಲವರು ಸತ್ತವರಿಗೋಸ್ಕರ ದೀಕ್ಷಾಸ್ನಾನ ಮಾಡಿಸಿಕೊಳ್ಳುತ್ತಿದ್ದರು ಇದು ಯಾವ ಅರ್ಥವನ್ನು ಕೊಡುತ್ತದೆ?”[24]

ಇದಕ್ಕೆ ಬದಲಿಯಾಗಿ, ಸತ್ತವರ ಬಗೆಗಿನ ದೀಕ್ಷಾಸ್ನಾನದ ನಂತರ ಪೌಲನು ದೀಕ್ಷಾಸ್ನಾನದ ಮಹತ್ವವನ್ನು ಜನರ ಅರಿತುಕೊಳ್ಳುವುದಕ್ಕಾಗಿ ಸೂಚಿಸುತ್ತಿರಬಹುದಾಗಿದೆ. ಕ್ರಿಸ್ತನಲ್ಲಿ ನಂಬಿಕೆಯಿಡುವವನು ಇತರರು ಸತ್ತ ಹಾಗೆಯೇ, ಅದನ್ನು ಅರಿತುಕೊಂಡ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಲು ಬಯಸಬಹುದು, ಹೀಗೆ ಆತನು ಮರಣಿಸುವನು ಮತ್ತು ಕೊನೆಯ ತುತ್ತೂರಿಯು ಧ್ವನಿಸಿದಾಗ ಕರ್ತನನ್ನು ಎದುರಿಸುವನು. David E. Garland ಪೌಲನ ವಿಚಾರವನ್ನು ಸಾರಾಂಶೀಕರಿಸುತ್ತಾ ಹೀಗೆ ಮುಂದುವರೆಸುತ್ತಾರೆ: “ಅಲ್ಲಿ ಸತ್ತವರಿಗೆ ಪುನರುತ್ಥಾನವಿಲ್ಲವಾದರೆ ದೀಕ್ಷಾಸ್ನಾನವು ಹುರುಳಿಲ್ಲದ ಆಚಾರವಾಗಿದ್ದು ಅದು

ಸಂಭವಿಸಲಾರದವುಗಳನ್ನು ಸುಳ್ಳಾಗಿ ಪ್ರತಿನಿಧಿಸುವುದಾಗಿದೆ."[25] ಉಪಸರ್ಗದ ὑπέρ (*huper*) ಹೊರಗೆ "ಅದರೆಡೆಗಿನ ನೋಟದ ಜೊತೆ" ಎಂಬುದರ ಅರ್ಥಕ್ಕೆ ಒತ್ತುಕೊಡುವದು ಕಷ್ಟವಾದದ್ದು ಎಂದು ತಿಳಿದು, ಆದರೆ ಸಾಮಾನ್ಯವಾಗಿ ಬಳಸುವ ಪದಗಳಿಂದ ತೆಗೆದುಕೊಳ್ಳುವ ಮೂಲಕ ಪೌಲನು ಕ್ವಚಿತ್ತಾಗಿ ಸಂರಕ್ಷಿಸುವವನಾಗಿದ್ದಾನೆ.

ಇನ್ನೂ ಇನ್ನೊಂದು ಸಾಧ್ಯತೆಯೆಂದರೆ ವಿಶ್ವಾಸಿಗಳ ದೀಕ್ಷಾಸ್ನಾನವು ಅನಿರೀಕ್ಷಿತವಾಗಿ ಮರಣಿಸಿದವರ ನಂಬಿಕೆಯ ಬಗೆಗೆ ಸಾಕ್ಷಿಯಾಗಿರುತ್ತದೆಂದು ಪೌಲನ ಅರ್ಥವಾಗಿತ್ತು. ಒಬ್ಬ ಕಟ್ಟಾ ವಿಶ್ವಾಸಿಯು ಸತ್ತವನೊಬ್ಬನಿಗೋಸ್ಕರ ನಂಬಿಕೆಯನ್ನು ವ್ಯಕ್ತಪಡಿಸುವ ನಿಟ್ಟಿನಲ್ಲಿ ತನ್ನನ್ನು ತಾನು ದೀಕ್ಷಾಸ್ನಾನ ಮಾಡಿಸಿಕೊಳ್ಳಬಹುದಿತ್ತು. ದೇವರ ಕ್ಷಮೆ ಮತ್ತು ಕೃಪೆಗಾಗಿ ಹತಾಶೆಯ ಮನವಿಯನ್ನು ಮಾಡುವಾಗಲೂ ಕೂಡ ಇಂಥ ಕಾರ್ಯಗಳನ್ನು ಆತನು ಕೈಕೊಳ್ಳಬಹುದಿತ್ತು. ಇಂಥ ಇರುವಿಕೆಗಳು ಆತನು ಮಾಡಿದ್ದಕ್ಕಿಂತಲೂ ಹೆಚ್ಚಿನದು ಇಲ್ಲ ಎಂದು ಯಾಕೆ ಹೇಳಿದನು ಎಂಬುದನ್ನು ವಿವರಿಸುವುದಾಗಿದೆ. ಸತ್ತವರಿಗೋಸ್ಕರ ದೀಕ್ಷಾಸ್ನಾನ ಮಾಡಿಸಿಕೊಳ್ಳುವವರ ಗೋಳಿಗೆ ಆತನು ಬಹುಶಃ ಮನ್ನಣೆ ಕೊಡುತ್ತಿರಬಹುದು.

ಪೌಲನ ಮಾತುಗಳ ಯಾವುದೇ ವಿವರಣೆಯು ಸಂಪೂರ್ಣವಾಗಿ ತೃಪ್ತಿಕರವಾಗಿಸಿಲ್ಲ. ಹೇಗೋ. ವಚನದಿಂದ ತೆಗೆದು ಹಾಕುವಂತಹವುಗಳನ್ನು ಕೆಲ ಸಮಾರೋಪಗಳನ್ನು ಜನರು ತೆಗೆದುಕೊಳ್ಳಬಹುದಾಗಿದೆ. (1) "ಮರಣ" ಎಂಬ ಪದವು ಗ್ರೀಕನಲ್ಲಿ ಬಹುವಚನವಾಗಿದ್ದು, ಕೆಲವರು ಸೂಚಿಸಿದ ಹಾಗೆ ಮರಣಿಸಿದ ಯೇಸುವಿನ ಸಲುವಾಗಿ ದೀಕ್ಷಾಸ್ನಾನ ಎಂದು ಈ ವಚನವು ಅರ್ಥೈಸುವುದಿಲ್ಲ. (2) ಮರಣಿಸಿದವರಿಗೆ ದೀಕ್ಷಾಸ್ನಾನದ ಮೇಲೆ ಹೊಸಒಡಂಬಡಿಕೆಯಲ್ಲಿ ಯಾವುದೇ ಬೋಧನೆಗಳು ಇಲ್ಲ, ಇತರರ ಪಾಪಗಳನ್ನು ತೊಳೆದು ಹಾಕಲು ಒಬ್ಬ ವ್ಯಕ್ತಿಯು ದೀಕ್ಷಾಸ್ನಾನ ಹೊಂದುವ ಯಾವುದೇ ಯೋಗ್ಯತೆ ಅಲ್ಲಿರಬೇಕೆಂಬ ವಿಚಾರದಿಂದ ನಾವು ಸಾರಾಸಗಟವಾಗಿ ತಿರಸ್ಕರಿಸಬಹುದು (ನೋಡಿರಿ ಅ.ಕೃ. 22:16). ವಿಶ್ವಾಸಿಯು ಪಶ್ಚಾತ್ತಾಪದ ಭಾಗವಾಗಿ ದೀಕ್ಷಾಸ್ನಾನವನ್ನು ಮಾಡಿಸಿಕೊಳ್ಳುವಿಕೆಯು ನಂಬಿಕೆ ಪ್ರತಿಕ್ರಿಯೆಯನ್ನು ದೀಕ್ಷಾಸ್ನಾನವು ಸಂರಕ್ಷಿಸುವುದು ಆಗಿದೆ.

**ವಚನ 30.** ಕೊರಿಂಥದವರಿಂದ ಲಕ್ಷವನ್ನು ತನ್ನತ್ತ ತಿರುಗಿಸುತ್ತಾ, ಮರಣದಿಂದ ಪುನರುತ್ಥಾನವು ಇಲ್ಲವಾದರೆ ಪೌಲನು ಮತ್ತು ಇತರ ಬೋಧಕರು ಕ್ರಿಸ್ತನಿಗೋಸ್ಕರ ತಮ್ಮ ಜೀವವನ್ನು ಅಪಾಯಕ್ಕೆ ತಂದು ಕೊಳ್ಳುವುದು ಯಾಕೆ ಎಂದು ಆತನು ಕೇಳುತ್ತಾನೆ. ದೇಹೀಯವಾದ ಪುನರುತ್ಥಾನವು ಇಲ್ಲದೇ ಮರಣದ ನಂತರಜೀವಿತದ ಸಾಧ್ಯತೆಯನ್ನು ಅಪೊಸ್ತಲನು ಪರಿಗಣಿಸಿದಾಗ್ಯೂ, ಅಂಥ ನಂತರದ ಜೀವನದಲ್ಲಿ ಯಾವುದೇ ಮೌಲ್ಯವಾಗಲೀ ಅಥವಾ ವಾದವಾಗಲೀ ಇಲ್ಲವೆಂದು ಆತನು ಸ್ಪಷ್ಟವಾಗಿ ನೋಡುವವನಾಗಿದ್ದಾನೆ.

ಭೌತಿಕ ದೇಹವು ಮರಣದ ನಂತರದಲ್ಲಿಯೂ ಅಸ್ತಿತ್ವದಲ್ಲಿರುವದು ಎಂಬ ಅಜ್ಞಾನದ ಪರಾಕಾಷ್ಠೆ ಎಂಬುದು ಗ್ರೀಕ್ ಆಲೋಚನಾಕಾರರ ಅಭಿಪ್ರಾಯವಾಗಿತ್ತು. ಅಥೇನ್ಸಿನಲ್ಲಿ, ಉದಾಹರಣೆಗೆ, ಮರಣದಿಂದ ಪುನರುತ್ಥಾನದ ಬಗೆಗೆ ಮಾತನಾಡುವವರೆಗೆ ಅಪೊಸ್ತಲನು ಸಕಾರಾತ್ಮಕ ಕೇಳುವಿಕೆಯನ್ನು ಪಡೆದನು (ಅ.ಕೃ. 17:32). ಪೌಲನ ಮಾತುಗಳು ಗಣನೆಗೆ

ಬಾರವು ಎಂಬ ಕಾರಣದಿಂದ ಆತನ ಕೆಲ ವಿರೋಧಿಗಳು ಆತನ ಅಪೊಸ್ತಲಿಕ ಅಧಿಕಾರವನ್ನು ಸಂಶಯಪಡತೊಗಿದರು (2 ಕೊರಿಂಥ 10:10). ಆತನಿಗೆ ತತ್ವಜ್ಞಾನದ ಜ್ಞಾನೋದಯ ಇಲ್ಲವೆಂದು ಅವರು ಪ್ರತಿಪಾದಿಸುತ್ತಿದ್ದರು (ನೋಡಿರಿ 1 ಕೊರಿಂಥ 2:6). ಟೀಕಾಕಾರರ ಬಗೆಗೆ ಅಪೊಸ್ತಲರ ಪ್ರತಿಕ್ರಿಯೆಯು ಜ್ಞಾನದ ಯಾವುದೇ ಕೊರತೆಯನ್ನು ಹೊಂದಿರಲಿ, ರಾಜಿಮಾಡಿಕೊಳ್ಳದ ನಂಬಿಕೆಯ ಅವನು ಅದನ್ನು ಸರಿಸಮಾನ ಮಾಡಿಕೊಳ್ಳುತ್ತಿದ್ದನು. ತಾನು ನಂಬಿದ್ದಕ್ಕೋಸ್ಕರ ಮರಣಿಸಲು ಅತನು ಸಿದ್ಧನಿದ್ದನು. ಆದರೆ ಬಲ್ಲಿದರಾದ ಪ್ರವೀಣರು ಇಲ್ಲ.

ಪೌಲನು ತನ್ನ ಟೀಕಾಕಾರನ್ನು ಖಂಡಿಸುವುದಕ್ಕೆ ಹಿಂದೆಮುಂದೆ ಮಾಡಲಿಲ್ಲ. ಆತನಿಗೆ ವಿವೇಕದಲ್ಲಿ ಕೊರತೆಯಿದ್ದರೆ, ಇದು ಇಹಲೋಕೀಯ ತರದ್ದು ಆಗಿದೆ. ತನ್ನ ಅಶಕ್ತತೆಯಲ್ಲಿ ದೇವರ ಕಾರ್ಯವು ದೇವರ ಮಹಿಮೆಯ ಚಿನ್ಹೆಯಾಗಿದೆ ಎಂದು ಆತನು ಅರಿತಿದ್ದನು. ತತ್ವಜ್ಞಾನಿಯ ಕಲಿಕೆಯಲ್ಲಿ ಆತನು ಯಾವ ನಟನೆಯನ್ನೂ ಮಾಡಲಿಲ್ಲ. ಮುಂದೆ,ಆತನ ನಿರಂತರ ಅಪಾಯದ ಎದುರಿಸುವಿಕೆಯ ಆಧಾರವು ದೇವರ ದೈವಿಕೆತೆಯ ಮೇಲೆ ಆತನ ಆತುಕೊಳ್ಳುವಿಕೆಯು ಆಗಿತ್ತು. ಮರಣದಲ್ಲಿ ಪುನರುತ್ಥಾನವಿಲ್ಲದಿದ್ದರೆ ಆತನು ಮಾಡಿದ್ದಂತೆ ಜೀವಿಸುವ ಮತ್ತು ಬೋಧಿಸುವದನ್ನು ಯಾಕೆ ಕೊರಿಂಥದವರು ಎದುರುನೋಡಲಿಲ್ಲ ಎಂದು ಕೇಳುತ್ತಾನೆ. ಆತನು ತನ್ನನ್ನು **ಪ್ರತೀ ಗಳಿಗೆಯಲ್ಲಯೂ ಯಾಕೆ ಜೀವದ ಭಯದಿಂದ** ಇಟ್ಟುಕೊಳ್ಳುತ್ತಾನೆ?

**ವಚನ 31. ನಾನು ದಿನಾಲು ಸಾಯುತ್ತಿದ್ದೇನೆ** ಎಂದು ಪೌಲನು ಹೇಳುವಾಗ, ತಾನು ನಿರಂತರವಾದ ಅಪಾಯದಲ್ಲಿ ಆತನು ಜೀವಿಸುತ್ತಿದ್ದಾನೆ ಎಂಬುದು ಆತನ ಅರ್ಥವಾಗಿದೆ. ಆತನು ಸೆರವಾಸವನ್ನೋ ಅಥವಾ ಮರಣವನ್ನು ಯಾವುದೇ ಸಮಯದಲ್ಲಿ ಎದುರಿಸಬಹುದಾಗಿತ್ತು. ಆತನಿಗೆ ಎಲ್ಲಡೆ ವೈರಿಗಳಿದ್ದರು, ಆದರೆ ಅಪೊಸ್ತಲನು ತನ್ನ ಸಂಕಟವನ್ನು ಸುವಾರ್ತೆಗಾಗಿನ ತನ್ನ ಭಾರ ಎಂದು ಪರಿಗಣಿಸುವವನಾಗಿದ್ದನು ಎಂದಲ್ಲ (ನೋಡಿರಿ ಅ.ಕೃ. 9:16; 2 ಕೊರಿಂಥ 11:23-27). ರಕ್ಷಣೆಗಾಗಿ ಸಂತೃಪ್ತಿ ಮತ್ತು ಸಂತೋಷದ ಪರಿಣಾಮದ ದೇವರ ಮಹಿಮೆಗಾಗಿ ಮತ್ತು ಆತ್ಮಗಳಿಗೋಸ್ಕರ ಕೊರಿಂಥದಲ್ಲಿರುವಂಥ ಕ್ರೈಸ್ತರಂತೆ ನಂಬಿಕೆಯ ಕಿಡಿಯನ್ನು ಹೊತ್ತಿಸಲು ತನ್ನ ಜೀವಕ್ಕೆ **ಅಪಾಯವನ್ನೂ ತಂದುಕೊಳ್ಳಲು ಆತನು ಸಿದ್ಧನಿದ್ದನು**. νή (*nē*, "ಸ್ಥಿರಪಡಿಸು") ಪದವು, ವಿಷೇಶವಾಗಿ ಒಂದು ಪ್ರತಿಜ್ಞೆಯನ್ನು ಸೂಚಿಸುವುದಾಗಿದ್ದು, ಇದು ಇಲ್ಲಿ ಕೇವಲ ಹೊಸ ಒಡಂಬಡಿಕೆಯಲ್ಲಿ ಮಾತ್ರ ಸಿಕ್ಕುವುದಾಗಿದೆ. ಇದರೊಡನೆ ಅಪೊಸ್ತಲನು ವಿದಿವತ್ತಾಗಿ ಮತ್ತು ನಿಶ್ಚಿತವಾಗಿ ತಾನು ಬರೆಯುವಂತಹ ಸತ್ಯವನ್ನು ಖಚಿತವಾಗಿಸುತ್ತಿದ್ದಾನೆ. ಪ್ರತಿದಿನ ನಾನು ಸಾಯುತ್ತೇನೆ: "ನನ್ನ ಸ್ನೇಹಿತರೇ ಇದು ನಿಮ್ಮಲಿರುವ ನನ್ನ ಹೆಮ್ಮೆಯ ಮೂಲಕ ನಾನು ಪ್ರತಿಜ್ಞೆಗೈಯುತ್ತೇನೆ, ನಮ್ಮ ಕರ್ತನಾದ ಕ್ರಿಸ್ತ ಯೇಸುವಿಗಾಗಿ ನಾನು ನಿಮ್ಮ ಮೇಲೆ ಹೆಮ್ಮೆಯುಳ್ಳನವಾಗಿದ್ದೇನೆ?" ಎಂದು REB ಭಾಷಾಂತರಿಸಿದೆ.

**ನಿಮ್ಮನ್ನು ಕುರಿತು ನನಗಿರುವ ಹೆಚ್ಚಳ** ಎಂಬ ಪದದ ಅರ್ಥವು ಪ್ರಶ್ನೆಯನ್ನು ತರುವುದಾಗಿದೆ. "ನಿಮ್ಮನ್ನು" (KJV) ಅಥವಾ "ನಿಮ್ಮಲ್ಲಿ" ಪದವು ಒತ್ತುಕೊಟ್ಟು ಹೇಳುವುದಾಗಿದೆ. ಇದರ ಅರ್ಥವು ನಿಮ್ಮನ್ನು "ಕುರಿತು ಹೆಚ್ಚಳದ ಮೇಲೆ ನಾನು ಇನ್ನೂ ಹೆಚ್ಚಾಗಿ ಆಣೆಯಿಡುವೆನು." ಅವರ "ಹೆಚ್ಚಳಪಡುವಿಕೆ" ಅಥವಾ ಕ್ರಿಸ್ತನಲ್ಲಿಯ ಆಶೀರ್ವಾದ

ಎಂಬುದು ನಿಶ್ಚಿತವಾಗಿಯೂ ಸತ್ಯ ಎಂದು ಅಪೊಸ್ತಲನು ಸೂಕ್ಮವಾಗಿ ತಾನಿರುವ ಸ್ಥಳದಲ್ಲಿನ ಅಪಾಯವನ್ನು ದೃಢೀಕರಿಸುತ್ತಾನೆ. ಪೌಲನ ಉಲ್ಲೇಖವು ಕೊರಿಂಥದವರು ತಮ್ಮ ನಂಬಿಕೆಯ ಅರಿಕೆಯಲ್ಲಿ ಸಂತೃಪ್ತಿ ಮತ್ತು ಸಂತೋಷವನ್ನು ತೆಗೆದುಕೊಳ್ಳಬಹುದು ಎಂಬ ಸಾಧ್ಯತೆಯನ್ನು ಗ್ರೀಕ್ ಅವಕಾಶ ನೀಡುವುದಾಗಿತ್ತು. ಇನ್ನೊಂದು ಸಾಧ್ಯತೆಯು ಅಪೊಸ್ತಲನು ತನ್ನ ಸ್ವಂತ ಹೆಚ್ಚಳವನ್ನು,ತನ್ನ ಸಂತೃಪ್ತಿಯನ್ನೂ ಮತ್ತು ಸಂತೋಷವನ್ನು ಉಲ್ಲೇಖಿಸುತ್ತಾ ಇರಬಹುದು. ನಮ್ಮ ಕರ್ತನಾದ ಯೇಸೂ ಕ್ರಿಸ್ತನಲ್ಲಿರುವ ಎಂಬ ವಚನದ ಕೊನೆಯ ಭಾಗವು "ಹೆಚ್ಚಳದ" ವಿಷಯವನ್ನು ಸ್ಪಷ್ಟಪಡಿಸುತ್ತದೆ. ತನ್ನ ಬೋಧನೆಯ ಮೂಲಕ ಕ್ರಿಸ್ತನಲ್ಲಿ ಜೀವಿತವನ್ನು ಹಂಚಿಕೊಂಡ ಅವರಿಗೆ ಆಣೆಯಿಡುವ ಮೂಲಕ ಅಪೊಸ್ತಲನು ತಾನು ಹೇಳಿದ ಸತ್ಯವನ್ನು ವ್ಯಕ್ತಪಡಿಸುವವನಾಗಿದ್ದಾನೆ. ಕ್ರಿಸ್ತ ಯೇಸುವಿನಲ್ಲಿ ಅವರ ಇರುವಿಕೆಯ ಮೂಲಕ ವ್ಯಾಖ್ಯಾನಿಸಲ್ಪಟ್ಟ ಮತ್ತು ಮಾಡಲ್ಪಟ್ಟಂಥ ಹೆಚ್ಚಳವು ಇದಾಗಿದೆ.

**ವಚನ 32.** ಪುನರುತ್ಥಾನವನ್ನು ಮತ್ತು ಅದರ ನಿತ್ಯಜೀವಿತಕ್ಕಾಗಿ ನಿರೀಕ್ಷೆಯನ್ನು ಬದಿಗಿರಿಸಿ, ಹಿನ್ನಲೆಯಲ್ಲಿರುವ ತಾನು ನೋಡಬಹುದಾದ ತನ್ನ ಜೀವಿತಕ್ಕಿರುವ ಅಪಾಯದ ಸಂಭವಿಸುವಿಕೆಯ ಆ ತರದ ಪ್ರೇರಣೆಗಳ ಬಗೆಗ ಎಚ್ಚರಿಕೆಯನ್ನು ಪೌಲನು ಗುರುತಿಸಿಕೊಂಡಿದ್ದಾನೆ. ಅಪೊಸ್ತಲನು **ಮಾನುಷಾಭಿಪ್ರಾಯದಿಂದ** (κατὰ ἄνθρωπον, *kata anthrōpon*; 15:32) ವರ್ತಿಸುತ್ತಿದ್ದಾನೆ ಎಂದು ಕೆಲವರು ಹೇಳಬಹುದು. ಅದು ಕ್ರಿಸ್ತೀಯ ಸಮುದಾಯದಲ್ಲಿ ನಾಯಕನಾಗಿದ್ದಂಥ ಒಬ್ಬನ, ಖ್ಯಾತಿ ಮತ್ತು ಮಹತ್ವಾಕಾಂಕ್ಷೆಯಯಾಗಿದೆ. "ಮಾನುಷಾಭಿಪ್ರಾಯ"ವು ಆತನು ಅನುಭವಿಸಿದ್ದು ಎಂಬುನ್ನು ಅಪೊಸ್ತಲು ಅಲ್ಲಗಳೆಯುತ್ಥಾನೆ. ಕೊರಿಂಥದಲ್ಲಿ ಆತನ ಜೀವಕ್ಕೆ ಅಪಾಯವಿತ್ತು (ಅ.ಕೃ. 18:12); ಈಗ ಎರಡನೂರ ಮೈಲಿ ಅಥವಾ ಎಜಿಯನ ಸಮುದ್ರವನ್ನು ದಾಟಿ, ಅಪಾಯವು ಪ್ರಭಲವಾಗಿತ್ತು. ಆಗಲೇ, ಅತನು **ಎಫೆಸದಲ್ಲಿನ ಮೃಗಗಳೊಂದಿಗೆ ಯುದ್ಧಮಾಡಿದ್ದೇನೆ** ಎಂದು ಆತನು ಹೇಳಿರಬಹುದು.

ಅಸಾಮಾನ್ಯವಾದ ಮತ್ತು "ಕ್ರೂರ ಮೃಗಗಳೊಂದಿಗೆ ಯುದ್ಧಮಾಡುವ" ಕ್ಲಿಷ್ಟ ಮಾತುಗಳಿಗೆ ಸ್ಟೋಯಿಕ್ ಮನಸ್ಥಿತಿಯ ಜೊತೆಯ ಲೇಖಕರು ಬಳಿಕೆಗೆ ಬರುತ್ತಾರೆ.[26] ಮೃಗಗಳೊಂದಿಗೆ ಹೋರಾಡುವ ಪೌಲನ ಮಾತಿನ ಅರ್ಥವನ್ನು ಕೆಲವರು ಅಕ್ಷರಸಹ ತೆಗೆದುಕೊಂಡ ಹಾಗೆ ಕೆಲವರು ಅವನ ಒಂದು ಅರ್ಥ ಅರ್ಥೈಸಿದವರೂ ಇದ್ದಾರೆ ಇದು ಅಸಂಭವನೀಯವಾದದ್ದು ಆಗಿದೆ. ಬಹುಶಃ ಆತನು ಅಂಥ ವಿಷಮಪರಿಸ್ಥಿತಿಯಿಂದ ಉಳಿದಿರಲಿಕ್ಕಿಲ್ಲ; ಕೆಲವೊಂದರಲ್ಲಿ ಉಳಿದಿದ್ದಾನೆ. ಪೌಲನು ತಾನು ಅನುಭವಿಸಿದವುಗಳ ಮೂಲಕ ಎಲ್ಲಡೆಯಲ್ಲಿಯೂ ವಿವರವಾಗಿ ಹೇಳದಿದ್ದರೂ ಕೂಡಾ ಎಫೆಸದಲ್ಲಿ ಆತನು ಕೆಲವು ಗಂಭೀರವಾದ ಕಷ್ಟಗಳನ್ನು ಎದುರಿಸಿದ್ದನು, ಆತನು ಎಫೆಸದಲ್ಲಿ ಕೆಲ ವರ್ಷಗಳನ್ನು ಕಳೆದಿದ್ದನು (ನೋಡಿರಿ ಅ.ಕೃ. 20:31). ಆದರೆ 1 ಕೊರಿಂಥ ಬರೆಯುವ ಮೊದಲು ಎಷ್ಟುವರ್ಷಗಳವರೆಗೆ ಇದ್ದನು ಎಂಬುದು ಅಸ್ಪಷ್ಟವಾದದ್ದು. ಅದು ಆತನು ಪಟ್ಟಣವನ್ನು ಬಿಡುವ ಸಂಧರ್ಭವಾಗಿದ್ದುದರಿಂದ ಅತನು ಖಚಿತವಾಗಿ ಯಾವುದೇ ಲೋಹ ಕೆಲಸಗಾರರಿಂದ ನಡೆಸಲ್ಪಡುವ ಗಲಭೆಯನ್ನು ಸೂಚಿಸುತ್ತಲ್ಲ (ಅ.ಕೃ. 19:24, 25; 20: 1 ನೋಡಿರಿ 2 ತಿಮೊಥೆ 4:14).

ಅಲ್ಲಿ ಮರಣದಿಂದ ಪುನರುತ್ಥಾನವು ಇಲ್ಲವಾದರೆ ಇಂಥ ಗಂಭೀರವಾದ ಕಠಿಣಪರೀಕ್ಷೆಗಳು ಒಬ್ಬನು ವಿಷಯವಾಗಲು ಯಾವುದೇ ಕಾರಣವಿಲ್ಲವೆಂದು ಪೌಲನ ಕಷ್ಟಗಳು ಸಾಕ್ಷೀಕರಿಸಲ್ಪಟ್ಟಿವೆ. ಬರಲಿರುವ ಜೀವಿತದಲ್ಲಿ ಯಾವುದೇ ನಿರೀಕ್ಷೆಯಿಲ್ಲದೇ ಅಂಥ ಕಠಿಣಶ್ರಮವು ಯಾವುದೇ ಪ್ರಯೋಜನವಿಲ್ಲದ್ದು ಆಗಿದೆ. ಬದಲಾಗಿ ಉತ್ತಮಕಾರ್ಯವು hedonist ರದು ಆಗಿದೆ[27] "ಕುಡಿಯಿರಿ ತಿನ್ನಿರಿ, ನಾಳೆ ನಾವು ಸಾಯಬಹುದು" (ಯೇಶಾಯ 22:13ಡ). ಈ ಹೇಳಿಕೆಯಲ್ಲಿನ ವಿಧಿಲಿಖಿತದ ವಿಚಾರವು ಗ್ರೀಕೋರೋಮಾನ ಜಗತ್ತಿನ ಅನೇಕ ಬಾಗಗಳಲ್ಲಿ ಜನರ ಮನದಲ್ಲಿ ನೆಲಿಸಿತ್ತು. ಇದರ ಅರ್ಥವು ಮರಣದಿಂದ ಪುನರುತ್ಥಾನವನ್ನು ನೀವು ನಂಬದೇ ಇದ್ದರೆ, ಅದರ ತಾತ್ವಿಕ ಸಮಾರೋಪದತ್ತ ನಿಮ್ಮ ವಿಚಾರಗಳನ್ನು ಹೊತ್ತುಕೊಳ್ಳಲು ಧೈರ್ಯವುಳ್ಳವರಾಗಿರಿ. ಆ ಕ್ಷಣದಲ್ಲಿ ಯಾವುದೇ ಅರ್ಥಹೀನ ಅಲ್ಹಾದವನ್ನು ಆನಂದಿಸಲಿ ಎಲ್ಲರ ಭವಿಷ್ಯವನ್ನು ಮರಣವು ಹಿಡಿದಿರುವುದು." ಲ್ಯಾಟಿನನ್ನಲ್ಲಿಯ *carpe diem* ("ದಿನವನ್ನು ಸ್ವಾಧೀನ ಮಾಡಿಕೊಳ್ಳುವದು") ಇಂತ ಪದಗಳು ಇದೇ ತತ್ವದ ರೀತಿಯಲ್ಲಿ ಖಚಿತವಾದವುಗಳು ಆಗಿವೆ. ಮರಣ ಮತ್ತು ಸಮಾಧಿಯು ಕೇವಲ ಇವೇ ನಮ್ಮ ಭವಿಷ್ಯವಾಗಿರುವುದಾದರೆ, ನಾವು ಇರುವ ಗಳಿಗೆಯು ಮಹತ್ವದ್ದಾಗಿರುತ್ತದೆ.

**ವಚನ 33.** ದುಷ್ಟರ ಪ್ರಬಾವದಿಂದ ರಕ್ಷಣೆಹೊಂದಿದವರಿಗೆ ಅಂತ್ಯದಿನದಲ್ಲಿ ದೇಹೀಯ ಪುನರುತ್ಥಾನವನ್ನು ನಿರಾಕರಿಸುವವರನ್ನು ತನ್ನ ಓದುಗರು ದೂರವಿರಿಸಬೇಕೆಂದು ಪೌಲನು ಬಯಸುವವನಾಗಿದ್ದಾನೆ. ಪ್ರತ್ಯಕ್ಷವಾಗಿ, ಕೆಲ ಕೊರಿಂಥದವರು ದೇಹೀಯ ಪುನರುತ್ಥಾನವನ್ನು ಬಲು ಸಹಜವಾಗಿ ತಳ್ಳಿಹಾಕಿದ್ದರು.ಪೌಲನು ಕೊರಿಂಥದಲ್ಲಿ ಎದುರಿಸಿದ ಶ್ರಮವನ್ನು ಪುರ್ರಚಿಸಿ ಖಚಿತವಾಗಿ ಹೆಳುವದು ಕಷ್ಟಕರವಾದದ್ದು. ಆಧುನಿಕ ಓದುಗರು ಊಹಿಸುವುದನ್ನು ಬಿಟ್ಟುಬಿಟ್ಟಿದ್ದಾರೆ, ಆದರೆ ಕೆಲ ಕೊರಿಂಥದ ವಿಶ್ವಾಸಿಗಳು ತಾವು ಈಗಾಗಲೇ ಪುನರುತ್ಥಾನವನ್ನು ಅನುಭವಿಸಿದ್ದಾರೆಂದು ಪ್ರತಿಪಾದಿ ಸುವವರಾಗಿದ್ದರು. ಕೆಲ ಅಪಾರ್ಥಮಾಡಿಕೊಳ್ಳುವಿಕೆಯು ಮತ್ತು ಬುದ್ಧಿಪೂರ್ವಕ ವಿಕೃತಗೊಳಿಸುವಿಕೆ ಹೊಂದಾಣಿಕೆಯ ಮೂಲಕ ಇದ್ದು, ಪುನರುತ್ಥಾನದಲ್ಲಿ ಹೊಸ ಜೀವಿತದ ಪರಿಣಾಮದ ದೀಕ್ಷಾಸ್ನಾನ ಹೊಂದಿರುವದನ್ನು ಪೌಲನು ಬೋದಿಸಿದ್ದಾನೆ ಎಂದು ಅವರು ಪ್ರತಿಪಾದಿಸಬಹುದಿತ್ತು (ನೋಡಿರಿ ರೋಮಾ 6:4). ಅವರು ತಮ್ಮನ್ನು ತಾವು ಈಗಾಗಲೇ ಎಬ್ಬಿಸಲ್ಪಟ್ಟು ಕ್ರಿಸ್ತನ ಜೊತೆ ಆಸೀನರಾಗಿರುವವರು ಎಂದು ನಂಬಿರುವುದರಿಂದ, ಅವರು ಅನೈತಿಕತೆ ಮತ್ತು ಪಾಪದ ಬಗ್ಗೆ ಯಾವುದೇ ಭಯವನ್ನು ಹೊಂದಿರಲಿಲ್ಲ.ಮಹತ್ವದ ತತ್ವವನ್ನು ಪುನಃಸ್ಥಾಪಿಸುವ ಮೂಲಕ ಪೌಲನು ಈ ವಿಚಾರವನ್ನು ನಿರಾಕರಿಸಿದನು: ಕ್ರೀಸ್ತಿಯ ಅರಿಕೆಯು ಅವರು ಆಚರಿಸುವ ನೈತಿಕತೆಯಿಂದ ಬೇರೆಯಾಗಿರ ಬಾರದೆಂದು ಅತನು ಇಲ್ಲಿ ಸ್ಪಷ್ಟಪಡಿಸಿದನು.

**ದುಸ್ಸಹವಾಸವು ಸದಾಚಾರವನ್ನು ಕೆಡಿಸುತ್ತದೆ** ಎಂಬ ಉಕ್ತಿಯು ಆಧುನಿಕ ಯುಗದಲ್ಲಿ ಅನೇಕ ಪ್ರಾಚೀನ ಧಾರ್ಮಿಕ ಸಾಹಿತ್ಯಗಳ ಸ್ಥಳಗಳಿಂದ ಬಂದಿದೆ. ಇಲ್ಲಿ ಪೌಲನು ಉಲ್ಲೇಖಿಸಿದ ಪದಗಳು ಸಾಮಾನ್ಯವಾಗಿ ಅಥೇನಿನ ಮೆನಂದರನ ಗುಣವಿಷೇಶವಾಗಿದೆ (c. ಕ್ರಿ.ಪೂ. 300). "ದುಸ್ಸಹವಾಸವು" (ὁμιλίαι κακαί, *homiliai kakai*) ಪರಿಗಣನೆಯಡಿಯಲ್ಲಿ ಒಬ್ಬನ ಸಾಂಗತ್ಯವನ್ನು ಇಟ್ಟುಕೊಳ್ಳುವದು ಮತ್ತು ಒಬ್ಬನು

ಅಂಗೀರಿಸಿದ ನಂಬುಗೆಗಳ ಪರಿಣಾಮಕ್ಕೆ ಸಂಬಂಧಿಸಿದ್ದು ಆಗಿದೆ. KJVಯ ಬಾಷಾಂತರದಲ್ಲಿ "ಕೆಡುಕನ ಸಂಪರ್ಕವು ಉತ್ತಮ ಗುಣಗಳನ್ನು ಹಾಳುಮಾಡುತ್ತದೆ" ಎಂದಿದ್ದು, ಇದು ಸತ್ಯದ ಕೇಂದ್ರವಾಗಿದೆ, ಆದರೆ ಅಪೊಸ್ತಲನ ವಿಷಯವು ಮಾತನಾಡುವ ವಿಷಯಗಳನ್ನು ಮೀರಿದ್ದು ಆಗಿತ್ತು. "ಒಳ್ಳೆಯ" ಇದು ವಿಶೇಷಣವಾಗಿ χρηστός (*chrēstos*) ಭಾಷಾಂತರವಾಗಿದ್ದು, ಇದು "ನೀತಿ" ಎಂದು ಮಾರ್ಪಡಿಸಲ್ಪಟ್ಟಿದೆ. ಸಾಮಾನ್ಯವಾಗಿ "ಉಪಯೋಗಕಾರಿ" ಎಂದು ಅರ್ಥೈಸುವ ಪದವಾಗಿದೆ, ಆದರೆ ಈ ಸಂಧರ್ಭದಲ್ಲಿ ಸೇರುವ ಅರ್ಥವು *"ನೈತಿಕವಾಗಿ ಉತ್ತಮ ಮತ್ತು ಉದಾರವಾಗಿ ಇರುವದು"* ಎಂದಾಗಿದೆ.[28] ಇದರ ಜೊತೆ ಹೊಂದಿಕೊಂಡಿರುವ ಮತ್ತು ಒಬ್ಬನ ಕೆಟ್ಟತನಕ್ಕೆ ಒಪ್ಪಿಗೆಕೊಡುವ, ಬಾಯಿ ಮಾತಿನ ಒಪ್ಪಿಗೆಯನ್ನು ಕೂಡಾ ಕೊಡುವದು, ಕೆಟ್ಟತನದಲ್ಲಿ ಸೇರಿರುವದು ಎಂದು ಪೌಲನು ಸೂಚಿಸುತ್ತಾನೆ. ಒಬ್ಬನ ಜೀವಿತದ ಫಲಗಳಲ್ಲಿ ಪದಗಳು ಸ್ವಾಭಾವಿಕವಾಗಿ ಶೋಧಿಸುತ್ತಾ ಹೋಗುತ್ತವೆ. ಇದರ ಅರ್ಥವು "ನೈತಿಕತೆಯ ಬಗೆಗೆ ಇಸ್ರಾಯೇಲರ ಮತ್ತು ಹೆನನಿಕ್ ವಿಚಾರಗಳು ಸಾಮಾಜಿಕ ಭೌತಿಕ ಚೌಕಟ್ಟಿನಲ್ಲಿಯ ಉಪಯುಕ್ತತೆಯ ಪ್ರದರ್ಶನವನ್ನು ಇಟ್ಟುಕೊಳ್ಳುವಿಕೆಯು ಅಗಿದೆ."[29]

**ವಚನ 34.** ಕರ್ತನು ಮರಳಿ ಬರುವಾಗ ದೇಹೀಯವಾದ ಪುನರುತ್ಥಾನವನ್ನು ತಿರಸ್ಕರಿಸುವಿಕೆಯ ಮೂರ್ಖತನವನ್ನು ತೆಗೆದುಹಾಕಬೇಕೆಂದು ಪೌಲನು ವಾದಮಾಡುತ್ತಾನೆ. **ಇಂಥ ಅಮಲಿನಿಂದೆಚ್ಚತ್ತು ನೀತಿವಂತರಾಗಿರಿ** ಎಂದೂ **ಪಾಪವನ್ನು ಬಿಟ್ಟುಬಿಡಿರಿ** ಎಂದು ಬರೆಯತ್ತಾನೆ. ಸುಳ್ಳು ಬೋಧನೆಗಳನ್ನು ಎಷ್ಟುದಿನಗಳ ವರೆಗೆ ಸಹಿಸುತ್ತಾಬಂದರೋ ಅಲ್ಲಿಯವರೆಗೆ, ಕ್ರಿಸ್ತನೊಂದಿಗಿನ ಅವರ ಸಂಬಂಧವು ವಿಪತ್ತಿನಲ್ಲಿ ಇತ್ತು" ಎಂದು ಗ್ರೀಕ್ ವರ್ತಮಾನಕಾಲವು ಸೂಚಿಸುವುದಾಗಿದೆ. ಪಾಪವು ಕಳುವುಡುವದು ಮತ್ತು ಸುಳ್ಳುಹೇಳುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ನಂಬಿಗೆಗಳನ್ನು ಒಪ್ಪಿಕೊಳ್ಳುವಿಕೆಯ ಮೂಲಕ ಮೂಲಭೂತ ತತ್ವಗಳ ನಿರಾಕರಣೆಯಿಂದ ನಂಬುಗೆಗಳೂ ಕೂಡಾ ಪಾಪವಾಗಿರಬಹುದು. ದೇವರಜ್ಞಾನದ ಕೊರತೆಯುಳ್ಳಂಥದ್ದನ್ನು ಪ್ರಾಯೋಗಿವಸು ಬೋಧನೆಗಳ ಜೊತೆ ಅವರು ಗಮನಿಸದಂಥದ್ದು ಮತ್ತು ರಾಜಿಯಾದಂಥದ್ದು ಕೊರಿಂಥದವರಿಗೆ ನಾಚಿಕೆಯಾಗುವಂಥ ವಿಷಯವಾಗಿತ್ತು.ಪೌಲನು ತನ್ನ ಓದುಗರಿಗೆ ಅವರ ಪ್ರಯೋಜನಗಳಿಗೋಸ್ಕರ ವಾದ ಮಾಡಬಯಸುತ್ತಾನೆ. ಇದರಂತರೆಯೇ, ಅಲ್ಲಿ ಮಹಿಮೆಗೆ ಯೋಗ್ಯವಾದ ಸಂಗತಿಗಳಾದಾಗ ಮತ್ತು ನಿರಾಕರಿಸುವುದಕ್ಕೆ ಪರಿಸ್ಥಿತಿಯು ಕರೆಕೊಟ್ಟಾಗ ಆತನು ಹೊಗಳುತ್ತಾನೆ. ಆತನ ಉದ್ದೇಶವು ಜನ ಪ್ರೀಯವಾಗಬೇಕೆನ್ನುವುದಲ್ಲ, ಆದರೆ ಈ ಸಹೋದರರನ್ನು ದೈವೀಕ ಮಾರ್ಗದಲ್ಲಿ ನಡೆಸುವುದೇ ಆಗಿತ್ತು.

## ವಿಭಿನ್ನ ರೀತಿಯ ಶರೀರಗಳು (15:35-41)

**35ಸತ್ತವರು ಹೇಗೆ ಎಬ್ಬಿಸಲ್ಪಡುತ್ತಾರೆ, ಎಂಥ ದೇಹದಿಂದ ಬರುತ್ತಾರೆ ಎಂದು ಒಬ್ಬನು ಕೇಳಾನು. 36ಮೂಢನು ನೀನು; ನೀನು ಬಿತ್ತುವ ಬೀಜವು ಸಾಯದಿದ್ದರೆ ಜೀವಿತವಾಗುದಿಲ್ಲ, ನೋಡು; 37ಒಂದು ವೇಳೆ ಗೋಧಿಯನ್ನಾಗಲೀ ಬೇರೆ ಯಾವುದೋ ಬೀಜವನ್ನಾಗಲೀ ಬಿತ್ತುವಾಗ ಬರೀ ಕಾಳನ್ನೇ ಹೊರತು ಮುಂದೆ ಆಗಬೇಕಾದ ದೇಹವನ್ನು ಬಿತ್ತುವುದಿಲ್ಲ.**

**[38]ಆದರೆ ದೇವರು ತನ್ನ ಇಷ್ಟದಂತೆ ಅದಕ್ಕೆ ದೇಹವನ್ನು ಕೊಡುತ್ತಾನೆ. ಒಂದೊಂದು ಬೀಜಕ್ಕೆ ಅದರದರ ದೇಹವನ್ನು ಕೊಡುತ್ತಾನೆ. [39]ಎಲ್ಲಾ ಶರೀರಗಳು ಒಂದೇ ವಿಧವಾದವುಗಳಲ್ಲ; ಮನುಷ್ಯನ ಶರೀರ ಬೇರೆ, ಪಶುಗಳ ಶರೀರ ಬೇರೆ, ಪಕ್ಷಿಗಳ ಶರೀರ ಬೇರೆ, ಮೀನುಗಳದು ಬೇರೆ. [40]ಇದಲ್ಲದೆ ಪರಲೋಕದ ದೇಹಗಳುಂಟು, ಭೂಲೋಕದ ದೇಹಗಳುಂಟು, ಆದರೆ ಪರಲೋಕದ ದೇಹಗಳ ಮಹಿಮೆ ಬೇರೆ, ಭೂಲೋಕದ ದೇಹಗಳ ಮಹಿಮೆ ಬೇರೆ. [41]ಸೂರ್ಯನ ಮಹಿಮೆ ಒಂದು ವಿಧ, ಚಂದ್ರನ ಮಹಿಮೆ ಮತ್ತೊಂದು ವಿಧ, ನಕ್ಷತ್ರಗಳ ಮಹಿಮೆ ಇನ್ನೊಂದು ವಿಧ. ಮಹಿಮೆಯಲ್ಲಿ ಒಂದು ನಕ್ಷತ್ರಕ್ಕೂ ಇನ್ನೊಂದು ನಕ್ಷತ್ರಕ್ಕೂ ಹೆಚ್ಚು ಕಡಿಮೆಯುಂಟಷ್ಟೆ.**

**ವಚನ 35.** ಪುನರುತ್ಥಾನವನ್ನು ಕೆಲ ಮೂಲಗಳ ಮೇಲೆ ನಿರಾಕರಿಸುವವ ತಮ್ಮ ವಿರೋಧಿಗಳ ಅಸಮರ್ಥತೆಯು ಇದನ್ನು ತರ್ಕಾಧಾರಿತ ನಿಬಂಧನೆಗಳನ್ನು ವಿವರಿಸುವುದಾಗಿದೆ.ಭೌತಿಕ ದೇಹವು ಕೊಳೆಯುವುದನ್ನು ಯಾರಾದರೂ ನೋಡಬಹುದು. ಅದು ಎಬ್ಬಿಸಲ್ಪಡುವುದು ಹೇಗೆ? Garlandರ ಹೇಳಿಕೆಯು ಸ್ವಲ್ಪ ಮಟ್ಟಿಗೆ ಮಾತ್ರ ಸರಿಯಾಗಿದೆ:

> ಕೊರಿಂಥದವರ ಅಪರಾಧಗಳು ಕೆಲ ತಿರುಗಿಬೀಳುವ ಉದ್ದೇಶಪೂರ್ವಕ ಸಿದ್ಧಾಂತಗಳಲ್ಲಿ ಬೇರೂರಿರಲಿಲ್ಲ ಆದರೆ ಪ್ರಾಮಾಣಿಕವಾದ ಗೊಂದಲವು ಅವರ ಗ್ರೀಕ ಜಗತ್ತಿನ ದೃಷ್ಟಿಕೋನದಲ್ಲಿ ಕೊಟಲ್ಪಟ್ಟಿದ. ಲೌಕೀಕ ದೇಹವು ಭೌತಿಕವಾಗಿದೆ ಮತ್ತು ನಾಶವಾಗುವಂಥದ್ದು ಆಗಿದ್ದು ಅದು ಪರಲೋಕ ರಾಜ್ಯಕ್ಕೆ ಯೋಗ್ಯವಾಗುವಂತೆ ಆತ್ಮೀಕವೂ ಮತ್ತು ನಾಶವಾಗದಂಥದ್ದೂ ಆಗುವಂತೆ ಹೇಗೆ ಮಾಡಲ್ಪಡಬೇಕು ಎಂಬುದನ್ನು ಅರಿತುಕೊಳ್ಳುವಲ್ಲಿ ಅವರು ವಿಫಲರಾದರು.[30]

ಅಂಶದ ಗೊಂದಲವು ನಿಸ್ಸಂಶಯವಾಗಿದೆ; ಆದರೆ 15:34ರಲ್ಲಿನ "ಪಾಪ ಮಾಡಬೇಡಿರಿ" ಎಂಬ ಪೌಲನ ವಾದವು ಎಲ್ಲಕ್ಕಿಂತಲೂ ಹೆಚ್ಚಾಗಿ ಗೊಂದಲವನ್ನು ಒಳಗೊಂಡಿರುವುದನ್ನು ಸೂಚಿಸುವುದಾಗಿದೆ.

ಪೌಲನು ಕೊರಿಂಥದ ವಿಶ್ವಾಸಿಗಳನ್ನು ಒಡಂಬಡಿಸುವದಕ್ಕೋಸ್ಕರ ಗುರುತಾದ "ಕಿವಿಮಾತನ್ನು" ಅಲಂಕಾರಿಕ ಭಾಷೆಯಲ್ಲಿ ಬಳಸುವವನಾಗಿದ್ದಾನೆ. ವಿರೋಧಿಗಳ ದೃಷ್ಟಾಂತಗಳ ಬಾಯಲ್ಲಿ ಆತನು ಸಂಭವನೀಯ ಮಾತುಗಳನ್ನು ಇಟ್ಟಿದ್ದಾನೆ (ನೋಡಿರಿ ರೋಮಾ 9:19; 11:19; ಯಾಕೋಬ 2:18) ಮತ್ತು ವಾದಗಳ ಮೂಲಕ ಅವುಗಳನ್ನು ವಿವರಿಸುವವನಾಗಿದ್ದಾನೆ. ದೇವರು ಪ್ರತಿಯೊಬ್ಬ ತನ್ನ ಜನರಿಗೋಸ್ಕರ ಪರಲೋಕೀಯ ದೇಹವನ್ನು - ಆತ್ಮೀಕ ರಾಜ್ಯವನ್ನು ಅರಿತುಕೊಳ್ಳುವಂಥ ನಿತ್ಯ ಜೀವವಿರುವಂಥ ದೇಹವನ್ನು ಒದಗಿಸಲು ನಿರ್ದಿಷ್ಟವಾಗಿ ಸಮರ್ಥನಿದ್ದಾನೆ ಎಂದು ಕೊರಿಂಥವದರನ್ನು ಒಪ್ಪಿಸುವುದು ಆತನ ಉದ್ದೇಶವುವಾಗಿತ್ತು. ಹಾಗೆ ನೋಡಿದರೆ ಆ ಪ್ರಶ್ನೆಗಳು ನಿಜವಾಗಿಯೂ ಕೊರಿಂಥದಲ್ಲಿನ ಕೆಲವರಿಂದ ಎಬ್ಬಿಸಲ್ಪಟ್ಟವುಗಳಾಗಿದ್ದಾಗ್ಯೂ, ಯಾವುದೇ ನಿರ್ದಿಷ್ಟ ವ್ಯಕ್ತಿಯು ಪೌಲನ ಮನದಲ್ಲಿ ಇರಲಿಲ್ಲ**. ಅವಿಶ್ವಾಸಿಯು ಸತ್ತವರು ಹೇಗೆ ಎದ್ದು ಬರುತ್ತಾರೆ? ಎಂಥ ದೇಹದಿಂದ ಬರುತ್ತಾರೆ?** ಎಂದು ಕೆಳಬಹುದು. ಮೊದಲಬಾರಿ ಅದ್ಯಾಯದಲ್ಲಿ ಪೌಲನು "ದೇಹ" ಎಂಬ ಪದವನ್ನು ಬಳಸಲು ಆರಿಸಿಕೊಂಡಿದ್ದಾನೆ.ಈ

ಪ್ರಶ್ನೆಗಳಲ್ಲಿ ವ್ಯಕ್ತಪಡಿಸಲಾದ ಸಂಶಯಗಳು ವಿವೇಕದ ನೈಜತ್ವಕ್ಕಿಂತ ಹೆಚ್ಚಾಗಿ ಕಾಣುವವು ಆಗಿವೆ. ದೇವರು ತನ್ನ ಬಗೆಗಿನ ಪ್ರಕಟಣೆಯನ್ನು ಅಲ್ಪವಾದ ಪರಿಗಣಿಸುವಿಕೆಯೊಡನೆ ಅವರು ಸೂಚಿಸುವುವು; ಅಥವಾ ಅವುಗಳು ಸಾಮಾನ್ಯ ಮಾನವ ಅನುಭವದ ಲೆಕ್ಕದಲ್ಲಿ ತೆಗೆದುಕೊಳ್ಳಲ್ಪಡುತ್ತವೆ ಎಂದು ಪೌಲನು ಒತ್ತಿಹೇಳುತ್ತಾನೆ.

**ವಚನ 36.** ತಮ್ಮ ಜಾಣತನದ ಪ್ರಶ್ನೆಗಳಿಂದ ಪುನರುತ್ಥಾನದ ಯಾವುದೇ ಪ್ರಶ್ನೆಯನ್ನು ಸುಮ್ಮನಾಗಿಸಬಹುದು ಎಂದು ಯೋಚಿಸುವಂಥವರೊಡನೆ **ಮೂಢ** (ἄφρων, *aphrōn*) ಎಂಬ ಕಠಿಣವಾದ, ಲಕ್ಷವನ್ನು ಸೆಳೆಯುವ ಪದದಿಂದ, ಪೌಲನು ಸಂಘರ್ಷಕ್ಕಿಳಿಯುತ್ತಾನೆ. "ಎಂಥ ಮೂರ್ಖತನದ ಪ್ರಶ್ನೆಗಳು!" ಎಂದು REBಯು ಆತನು ಪ್ರತಿಕ್ರಿಯೆಯ ಪರಿಣಾಮವನ್ನು ಹಿಡಿದಿಟ್ಟಿದೆ.

**ವಚನ 37.** ಸೃಷ್ಟಿಯಿಂದ ಕೊಟಲ್ಪಟ್ಟ ಉದಾಹರಣೆಗಳಲ್ಲಿ ತಮ್ಮ ಸುತ್ತಲೂ ನೋಡಿಕೊಳ್ಳುಲೆಂದು ಈ ಸಂಶಯಸ್ಥರಿಗೆ ಪೌಲನು ಕೋರುವವನಾಗಿದ್ದಾನೆ. **ನೀನು** ಎಂಬುದು ಮಹತ್ವಪೂರ್ಣವಾದದ್ದು ಆಗದೆ. "ನೀನೂ ಕೂಡಾ" ಎಂದು ಪೌಲನು ಹೇಳುತ್ತಿದ್ದು ಗೋಧಿಯ ಕಾಂಡವನ್ನು ಬಿತ್ತಿದರೆ ಮತ್ತು ಅದು ಗೋಧಿಯ ಕಾಂಡವನ್ನು ಉತ್ಪಾದಿಸುತ್ತದೆ ಎಂದು ಎದುರುನೋಡಬೇಡ. ಬೀಜವು ಬಿತ್ತಲ್ಪಡುವಾಗ, ಅದು ಮರಣಿಸುವ ಗುಣಾಂಶವು ಒಳಗೊಂಡಿರುತ್ತದೆ ಆದರೆ ಅದರ ಪ್ರಕ್ರಿಯೆಯು ಹೊಸಜೀವವನ್ನು ತರುತ್ತದೆ. ಜೀವವು ಮರಣದ ಹೊರಗೆ ಪುಟಿದೇಳುತ್ತದೆ. ಬೀಜದಿಂದ ಹೊರಬಂದ ಸಸಿಯು ಬೀಜದ ರೂಪದಂತಿರುವುದಿಲ್ಲ, ಆದರೂ ಬೀಜ ಮತ್ತು ಸಸಿಯ ಮಧ್ಯ ನಿರಂತರತೆಯು ಇರುತ್ತದೆ. ಮಾನವರೂ ಕೂಡಾ, ಜೀವಿಸುವ ನಿಟ್ಟಿನಲ್ಲಿ ಸಾಯುವವರಾಗಿರುತ್ತಾರೆ. ದೇಹವು ಸಾಯುತ್ತದೆ, ಆದರೆ ಅದೆ ಕೊಳೆಯುವಿಕೆಯು ಹೊಸ ಆತ್ಮೀಕ ದೇಹಕ್ಕೋಸ್ಕರದ ಭರವಸೆಯನ್ನು ಒಳಗೊಂಡಿದೆ. ಲೌಕೀಕ ಜಗತ್ತಿಗೆ ಸಾಕಷ್ಟು ಲಕ್ಷಕೊಡದೇ ಇರುವಂಥವರು ದೇಹದ ರೀತಿಯಲ್ಲಿನ ನಿತ್ಯಜೀವದ ಪರಿಕಲ್ಪನೆಯನ್ನು ನಿರಾಕರಿಸುವವರ ಮೂಲಕ ಪ್ರಶ್ನೆಗಳು ಎತ್ತುವವರು ಆಗಿದ್ದಾರೆ.

ಭಿನ್ನವಾಗಿಸುವುದಕ್ಕೋಸ್ಕರ ಆದರೆ ಅದಕ್ಕೆ ಸಂಬಂಧಿಸಿದ ಅಂಶಗಳನ್ನು ಮಾಡುವುದಕ್ಕೋಸ್ಕರ ಯೇಸು ಅದೇ ತತ್ವವನ್ನು ಬಳಸಿದನು ಅಂದರೆ ಮರಣದಿಂದ ಜೀವದ ಪುಟಿದೇಳುವಿಕೆ. ಕರ್ತನು ಇನ್ನೇನು ಮರಣಿಸಬೇಕು ಆ ಸಮಯದಲ್ಲಿ, ಗ್ರೀಕ್ ಮಾತನಾಡುವ ಯೆಹೂದಿಗಳು ಪಸ್ಕಹಬ್ಬವನ್ನು ಆಚರಿಸುವ ತಮ್ಮ ಆಚರಣೆಯಲ್ಲಿ ಇದ್ದರು. ಅವರು ಯೇಸುವನ್ನು ಭೇಟಿಮಾಡಲು ಬಯಸಿದರು. ಆತನ ರಹಸ್ಯವಾದ ಮಾರ್ಗಗಳಲ್ಲಿ ಲಕ್ಷೀಕರಿಸಿದ್ದು ಯೋಹಾನನ ಸುವಾರ್ತೆಯಲ್ಲಿ ದಾಖಲಾಗಿದ್ದು,ಈ ಕೊತೂಹಲಕಾರಿ ಜನರಿಗೆ ತಮ್ಮ ದೃಷ್ಟಿಕೋನವನ್ನು ಬದಲಾಯಿಸಿಕೊಳ್ಳಲು ಯೇಸು ಒತ್ತಯಿಸುತ್ತಾನೆ. "ಗೋದಿಯ ಕಾಳು ಭೂಮಿಯಲ್ಲಿ ಬಿದ್ದು ಸಾಯದಿದ್ದರೆಒಂದೇ ಆಗಿ ಉಳಿಯುವದು," "ಸತ್ತರೆ ಬಹಳ ಫಲಕೊಡುವದು" ಎಂದು ಹೇಳುತ್ತಾನೆ (ಯೋಹಾನ 12:24).

ಬೀಜದ ಅಳಿವು ಮುಂಬರುವ ಸುಂದರವಾದ ಸಸಿಗೆ ಯಾವ ತೊಂದರೆ ಮಾಡದು, ಅದೇ ರೀತಿಯಲ್ಲಿ, ಭೌತಿಕ ದೇಹದ ಮರಣ ಮತ್ತು ಕೊಳೆಯುವಿಕೆಯು ಮೊದಲಿದ್ದದ್ದಕ್ಕಿಂತಲೂ ಹೆಚ್ಚು ಅದ್ಭುತವಾದ ದೇಹದ ಪುನರುತ್ಥಾನಕ್ಕೆ ಯಾವುದೇ ಅಡ್ಡಿಯನ್ನು ಮಾಡಲಾರದು. ಪುನರುತ್ಥಾನಿತ ದೇಹದ ಬಗೆಗಿನ ಆತನ ವಾಗ್ದಾನವನ್ನು

ಹೊತ್ತುಕೊಳ್ಳಲು ಸಮರ್ಥವಾಗುವ ಸೃಷ್ಟಿಯಲ್ಲಿ ವಿವರಸಲಸಾಧ್ಯವಾದಂಥ ಘಟನೆಗಳನ್ನು ದೇವರು ತರಲು ಸಮರ್ಥನಾಗಿದ್ದಾನೆ. ಭೌತಿಕ ಜೀವಿಯಲ್ಲಿ ಪಾಲ್ಗೊಂಡಿರುವಿಕೆಯ, ಲೌಕೀಕ ದೇಹವು ಬರುವ ದಿನದಲ್ಲಿ ಹೊಂದಿಕೊಳ್ಳುವಂತೆ ಹೇಗೆ ದೇಹವು ಪರಿವರ್ತನೆಯಾಗುವದು ಎಂದು ಜನರು ಅರಿತುಕೊಳ್ಳುವದನ್ನು ಎದುರನೋಡುವದು ಕ್ವಚಿತ್ತಾದುದು ಅಗಿದೆ. ಅದೇರೀತಿಯಲ್ಲಿ, ದೇವರು ತನಗೆ ಬಳಿಕೆಯಾಗುವ ಕಲ್ಪನೆಯನ್ನೂ ಮೀರಿ **ಗೊಧಿಯನ್ನಾಗಲೀ ಬೇರೆಯಾವುದೇ ಬೀಜವನ್ನಾಗಲೀ** ಬಿತ್ತುವ ರೀತಿಯಲ್ಲಿ ದೇವರು ತಮ್ಮ ದೇಹಗಳನ್ನು ಮಾರ್ಪಡಿಸುವನು ಎಂಬದು ಸ್ತ್ರೀ ಮತ್ತು ಪುರುಷರ ನಂಬಿಕೆಯು ಸರಳವಾದ ವಿಶ್ವಾಸವಾಗಿದೆ. ಒಬ್ಬ ವೀಕ್ಷಕನು ಬಟಾಣಿ ಮತ್ತು ಹರಳುಗಳನ್ನು ಅವುಗಳ ಭಿನ್ನತೆಯನ್ನು ಅರಿತುಕೊಳ್ಳದೇ ಭೂಮಿಯಲ್ಲಿ ಹಾಕಿದಾಗ ಒಂದು ಸಸಿಯಾಗಿ ವಿಕಸಿಸಿ ಪರಿವರ್ತನೆಯಾದಾಗ ಇನ್ನೊಂದು ಹಾಗೇ ಒಳಗೆ ಉಳಿದಾಗಲೇ ಹೊರತು ಅವುಗಳ ಬಳಿಕೆಯ ಅರ್ಥಮಾಡಿಕೊಳ್ಳಲಾಗುವದು ಎಂದು ಮಾನವ ವೀಕ್ಷಕನು ಹೇಳುತ್ತಾನೆ. ಮಾನವನ ದೇಹವು ಅಂತಸತ್ವ ಹೊಂದಿದ ಬಟಾಣಿಯಾಗಿದೆ ಹೊರತು ಸತ್ವಹೀನವಾದ ಹರಳಲ್ಲ ಎಂದು ಪೌಲನು ವಾದಿಸುತ್ತಾನೆ.

**ವಚನ 38.** ಬೀಜವು ಮೊಳೆತು ಹೊಸದೊಂದು **ದೇಹವನ್ನು** ಕೊಟ್ಟಾಗ, ದೇವರು ಕಾರ್ಯನಿರತನಾಗಿದ್ದಾನೆ ಎಂದು ಸ್ಪಷ್ಟವಾಗುತ್ತದೆ. ಬೀಜಕ್ಕೆ ತನ್ನ ಕೊಳೆಯುವಿಕೆಯಿಂದ ಜೀವವನ್ನು ಪಡೆಯುವಂತೆ ಕೊಟ್ಟಾತನೇ ದೇವರು. ಪ್ರತಿಯೊಂದೂ ಬೀಜಕ್ಕೂ ಅದರದೇ ರೂಪವನ್ನು ಕೊಡುತ್ತಾನೆ; ಅದು, ಆಬೀಜದಿಂದ ಯಾವ ತರದ ಸಸ್ಯವು ಹೊರಬರಬೇಕೆಂದು ಆತನು ನಿರ್ಣಯಿಸಿರುತ್ತಾನೆ. ಪುನರುತ್ಥಾನಿತ ದೇಹದ ಸ್ವಭಾವವನ್ನು ಪರಿಗಣಿಸಿದಾಗ, ದೇವರ ಅದ್ಭುತ ಶಕ್ತಿಯ ವಿವರಗಳನ್ನು ತೆಗೆದುಕೊಳ್ಳುವ ಅವಶ್ಯಕತೆಯು ಅವರಿಗಿದೆ ಎಂಬುದನ್ನು ಹೇಳುವವನಾಗಿದ್ದಾನೆ. ಈ ಯುಗದಲ್ಲಿ ಊಹಿಸಲಾಗದ್ದನ್ನು ಮಾಡುವವನಾಗಿದ್ದಾನೆ. ಬೀಜ ಮತ್ತು ಅದು ಉತ್ಪಾದಿಸುವ ದೇಹಗಳ ಮಧ್ಯದ ಅವುಗಳ ನಿರಂತರತೆಯನ್ನು ನಿರ್ಲಕ್ಷಿಸಕೂಡದು. ಪರಲೋಕೀಯ ದೇಹಗಳು ಇಹಲೋಕದವುಗಳು ಹೊಂದಿದಂತೆ ಆಕಾರವನ್ನು ಹೊಂದಿರುವುದಿಲ್ಲ. ತಮ್ಮದೇ ಆದ ವ್ಯಕ್ತಿತ್ವವನ್ನು ಉಳಿದುಕೊಳ್ಳುವವು ಅಗಿವೆ.

ಅಪೊಸ್ತಲನ ವಾದದ ಮಹತ್ವವೆಂದರೆ ಬೀಜ ಮತ್ತುಅದರಿಂದ ಹುಟ್ಟಿದ ಸಸ್ಯ, ಪರಿಗಣನೀಯವಾಗಿ ಭಿನ್ನವಾದಾಗ್ಯೂ, ಎರಡೂ ಸಂಗತಿಗಳು ಭೌತಿವಾಗಿವೆ. ಇಲ್ಲವೇ ಒಂದು ಶುದ್ಧವಾದ ಅತ್ಮೀಕ ವಸ್ತುವಾಗಿವೆ. ಈ ವಿಚಾರವು Wayne Grudem ರಿಂದ ಮಂಡಿಸಲ್ಪಟ್ಟಿದೆ:

> ಅಲ್ಪದರಲ್ಲಿ, ಪುನರುತ್ಥಾನದ ದೇಹವು ಸಹಜವಾಗಿ ಮತ್ತು ಮೂಲತಃವಾಗಿ ಅಭೌತಿಕವಾದವುಗಳು, ಅವುಗಳು ಹಾಗೆ ಮಾಡಲ್ಪಡಬಹುದು, ಆದರೆ ಇದು ಸಹಜವಾದ ದೈಹಿಕ ಮತ್ತು ಭೌತಿಕ ಅವುಗಳು ಸ್ಪಷ್ಟವಾದ ಸೂಚನೆಯನ್ನು ಕೊಡದ ಹೊರತು ದೇಹವಾಗಿದ್ದಾಗಲೂ ಕೂಡಾ ಇದು ಸಂಪೂರ್ಣವಾಗಿದ್ದು, ಬಲಹೀನತೆ, ಅನಾರೋಗ್ಯ ಮತ್ತು ಮರಣದಿಂದ ನಿರಂತರವಾಗಿ ವೈಯಕ್ತಿವಾದದ್ದು ಆಗಿದೆ ಎಂದು ಯೇಸು ಮತ್ತು ಹೊಸ ಒಡಂಬಡಿಕೆಯ ಲೇಖಕರು ಬೋಧಿಸಲು ಬಯಸುತ್ತಾರೆ.[31]

**ವಚನ 39.** ಈ ಅಂಶದಲ್ಲಿ ಪೌಲನ ವಾದಗಳು ಬದಲಾವಣೆಯಾಗದಿದ್ದರೂ ಅವನ ಹೋಲಿಕೆಗಳು ಬದಲಾಗಿವೆ, ಸಸ್ಯ ಜಗತ್ತಿನಿಂದ ಪ್ರಾಣಿ ಜಗತ್ತಿಗೆ ಸಾಗುವಾಗ, ಅಪೊಸ್ತಲನು ಈಗ ತಾನೇ ಮಾಡಿದ ವಿಷಯಗಳಿಗೆ ಪೂರಕವಾಗಿ ಹೆಚ್ಚುವರಿ ವಾದಗಳನ್ನು ಕೊಡುತ್ತಿದ್ದಾನೆ. ಹೀಗೆ, **ಮನುಷ್ಯನ ಶರೀರ ಬೇರೆ, ಪಶುಗಳ ಶರೀರ ಬೇರೆ, ಪಕ್ಷಿಗಳ ಶರೀರ ಬೇರೆ, ಮೀನುಗಳದು ಬೇರೆ.** ಎಂಬಂತೆ ಸಸ್ಯಜೀವಕ್ಕೆ ಅನೇಕ ರೂಪವನ್ನು ದೇವರು ಕೊಟ್ಟಂತೆ, ಪ್ರತಿಯೊಂದೂ ಬೀಜವು ವಿಭಿನ್ನ ರೀತಿಯ ಸಸ್ಯವನ್ನು ಉತ್ಪತ್ತಿ ಮಾಡುತ್ತದೆ. ಬೀಜಗಳು ಮತ್ತು ಅವು ಉತ್ಪಾದಿಸುವ ಸಸ್ಯಗಳ ಬಗ್ಗೆ ಹೇಳುವ ಮೂಲಕ, ದೇವರು ದೇಹವನ್ನು ಪರಿವರ್ತನೆ ಮಾಡಲು ಶಕ್ತನು ಎಂದು ಪ್ರಾಯೋಗಿಸುವವ ನಾಗಿರುವುದರಿಂದ ಇದು ಇನ್ನೂ ಭೌತಿಕವಾಗಿಯೇ ಉಳಿದಿದೆ ಆದರೆ ಭಿನ್ನ ರೂಪದಲ್ಲಿ ಮತ್ತು ಕಾರ್ಯದಲ್ಲಿ ಇದೆ. ದೇವರು ಪರಲೋಕದ ದೇಹವನ್ನು ಅದು ಪರಲೋಕೀಯ ಜೀವಕ್ಕೆ ಹೊಂದಿಕೊಳ್ಳುವಂತಹ ಸಂಗತಿಗಳಿಂದ ರೂಪಿಸುವವನಾಗಿದ್ದಾನೆ.

15:39ರಲ್ಲಿ ಮೂಲ ಪದವು "ದೇಹ"; 15:40, 41ರಲ್ಲಿನ ಮೂಲ ಪದವು "ಮಹಿಮೆ" ಆಗಿದೆ. ಪ್ರಾಣಿಗಳ ಜಗತ್ತಿನಲ್ಲಿನ ಭಿನ್ನ ತರದ ದೇಹವಿರುವಂತೆ, ಭೂಲೋಕದ ಜೀವಗಳು ಮತ್ತು ಪರಲೋಕದ ಪ್ರಭಾವ ಶಾಲಿಗಳು ಮಹಿಮೆಯಲ್ಲಿ ಭಿನ್ನರಾಗಿರುತ್ತಾರೆ. ಸಂಶಯಿಸಲ್ಪಟ್ಟವರು ಅಥವಾ ಪ್ರಶ್ನಿಸಲ್ಪಟ್ಟವರನ್ನು ಉದ್ದೇಶಿಸುತ್ತಾ ಲೌಕೀಕ ಸಂಗತಿಗಳ ಮಧ್ಯದಲ್ಲಿ ಹಾಗೂ ಮರಣದಿಂದ ದೇಹದಲ್ಲಿ ಉಳಿಯುವಂಥ ಸಂಗತಿಗಳ ಸ್ಥಿರತೆಗಳ ಬಗ್ಗೆ ಪೌಲನು ಹೇಳುತ್ತಾನೆ. ತಾವು ದೇಹದಲ್ಲಿ ಹುದುಗಿಸಿರುವ ಆತ್ಮ ಮತ್ತು ಅದರ ಮಿತಿಗೆ ಅನ್ವಯಿಸಲ್ಪಟ್ಟವರು ಎಂದು ತಮ್ಮಷ್ಟಕ್ಕೆ ತಾವೇ ಯೋಚಿಸುವವರು ಆಗಿರುತ್ತಾರೆ. ಹೀಗೆ ಅವರು ಮರಣವನ್ನು ದೇಹದಿಂದ ಮುಕ್ತಿ ಎಂದು ಭಾವಿಸುವವರು ಅಗಿರುತ್ತಾರೆ. ಅಂಥ ಯೋಚನೆಗಳನ್ನು ಪೌಲನು ತಳ್ಳಿಹಾಕುತ್ತಾನೆ. ದೇವರು ಆದಿಯಲ್ಲಿ, ಸೃಷ್ಟಿಯನ್ನು ನಿರ್ಮಾಣಮಾಡಿ ದನು ಮತ್ತು ಅವುಗಳನ್ನು ಒಳ್ಳೆಯದೆಂದು ಉಚ್ಚರಿಸಿದನು (ಆದಿ. 1:31).

**ವಚನ 40. ಪರಲೋಕದ ದೇಹಗಳು, ಭೂಲೋಕದ ದೇಹಗಳಿಗೆ** ದೇವರ ಮಹಿಮೆಯು ಅದಕ್ಕೆ ಹೊಂದಿಕೊಂಡು ಇರುವುದಾಗಿದೆ. ಮರ ಅಥವಾ ಬೆಟ್ಟಗಳು ಸೂರ್ಯ ಚಂದ್ರರಂತಹ ಒಂದೇ ತರದ ಮಹಿಮೆಯನ್ನು ಹೊಂದಿಲ್ಲ, ಆದರೆ ಪ್ರತಿಯೊಂದೂ ಸೃಷ್ಟಿಕರ್ತನ ನಿತ್ಯ ವಿವೇಕ ಮತ್ತ ಶಕ್ತಿಯಿಂದ ತನ್ನದೇ ಆದ ರೀತಿಯಲ್ಲಿ ಹೊಳೆಯುವವು ಅಗಿವೆ. ಭೌತೀಕ ದೇಹಗಳಿಗೆ ಮಹಿಮೆಯನ್ನು ಕೊಡಲು ಶಕ್ತನಾಗಿರುವಂತೆ, ದೇವರು ತಾನೇ ಸೃಷ್ಟಿಸಿದ ದೇಹಗಳಿಗೆ ಪರಲೋಕದ ರಾಜ್ಯದಲ್ಲಿ ಎಂದೆಂದಿಗೂ ವಾಸಿಸುವಂತಹ ಮಹಿಮೆಯನ್ನೂ ಸಹ ಕೊಡಲು ಶಕ್ತನಾಗಿರುತ್ತಾನೆ.

**ವಚನ 41. ಪೌಲನು ತಾನು ಲೌಕೀಕವಾದ ಮಹಿಮೆಯ ಕೂಡ ಇರಬಹುದಾಗಿತ್ತು ಆದರೆ ಇರಲಿಲ್ಲ.** ಬದಲಾಗಿ ಆತನು ತನ್ನ ಲಕ್ಷವನ್ನು ಪರಲೋಕೀಯ ಮಹಿಮೆಯತ್ತ ತಿರುಗಿಸಿದನು. ವೈವಿಧ್ಯತೆಯು ಸ್ಪಷ್ಟವಾಗಿ ಕಾಣುತ್ತದೆ. **ಚಂದ್ರನ ಮಹಿಮೆ ಮತ್ತೊಂದು ವಿಧ, ನಕ್ಷತ್ರಗಳ ಮಹಿಮೆ** ಇನ್ನೊಂದು ವಿಧ ಎಂದು ಆತನು ಹೇಳುತ್ತಾನೆ. ದೇವರು ಒಂದು ತರದ ದೇಹಕ್ಕೆ ಅಥವಾ ಒಂದು ತರದ ವೈಭವಕ್ಕೆ ಸೀಮಿತವಾಗಿಲ್ಲ. ವೈಜ್ಞಾನಿಕ ಜ್ಞಾನವು ಮುಂದುವರೆದಂತೆ, ದೇಹದ ಮಹಿಮೆ ಮತ್ತು ರಕ್ತ ದೇಹಗಳು ಹೆಚ್ಚು ಸ್ಪುಟವಾಗಿ ಹೊರಹೊಮ್ಮುತ್ತವೆ. ದೇಹಗಳು ಇನ್ನೂ ಬೆಳೆದು ಹಳೆಯುವು ಆಗುತ್ತವೆ ಮತ್ತು

ಕೊಳೆಯುತ್ತವೆ. ಲೌಕೀಕ ದೇಹಗಳು ರೋಗ ಮತ್ತು ಮರಣಕ್ಕೆ ತುತ್ತಾಗಿವೆ. ದೇವರು ಸ್ಪಷ್ಟವಾಗಿ ಮಿತಿಯಿಲ್ಲದೇ ದೇಹಗಳನ್ನು ನಿರ್ಮಿಸುವಲ್ಲಿ ಸಮರ್ಥನಾಗಿದ್ದಾನೆ ಎಂದು ಪೌಲನು ವಾದಿಸುವವನಾಗಿದ್ದಾನೆ.ಪರಲೋಕದ ಸ್ಥಳದಲ್ಲಿ ಬದಲಾಗದ ಮಹಿಮೆಯನ್ನು ಪ್ರಕಟಿಸುವವನಾಗಿದ್ದಾನೆ ಎಂದು ಸೂಚಿಸುವ ಮೂಲಕ ಆತನು ತನ್ನ ವಿಚಾರವನ್ನು ಹೇಳಿದನು. ನಶ್ವರವಾದ ಮಾಂಸದ ದೇಹಗಳು ಬದಲಾವಣೆಯಾಗದ ನಕ್ಷತ್ರಗಳಿಗೆ ವಿರುದ್ಧವಾಗಿ ಆತನು ವ್ಯತ್ಯಾಸವನ್ನು ತೋರಿಸುವವನಾಗಿದ್ದಾನೆ. ದೇವರು ಲೌಕೀಕ ದೇಹದಿಂದ ಪರಲೋಕೀಯವುಗಳಿಗೆ ರೂಪಾಂತರಿಸುವ ಶಕ್ತಿ ಮತ್ತು ವಿವೇಕವನ್ನು ಹೊಂದಿದ್ದಾನೆ.ಪರಲೋಕೀಯ ರಾಜ್ಯದಲ್ಲಿ ದೇಹೀಯವಾಗಿ ಇರುವಿಕೆಯ ಅಸಾಧ್ಯತೆಯು ದೇಹದ ಮಿತಿಯು ವಾದಿಸಲ್ಪಟ್ಟಿಲ್ಲ.

ಮೊದಲ ಆದಾಮ ಮತ್ತು ಎರಡನೆಯ ಆದಾಮನಾದ ಯೇಸುಕ್ರಿಸ್ತ ಮಧ್ಯದ ಸಮಾನತೆಯನ್ನು ಪೌಲನು ಈಗಾಗಲೇ ಪ್ರಾಸಂಗಿಕವಾಗಿ ತಿಳಿಸಿದ್ದಾನೆ (15:22). ರೋಮಾದವರಿಗೆ ಬರೆದ ತನ್ನಪತ್ರದಲ್ಲಿ, ಕೆಲ ವರ್ಷದ ಹಿಂದೆ ಬರೆದಂಥವುಗಳ ಎರಡರ ಮಧ್ಯದ ಸಾಮ್ಯವನ್ನು ಬೆಳೆಸಿದ್ದಾನೆ. ರೋಮಾಪುರ ಪತ್ರಿಕೆ 5:14-19ರಲ್ಲಿ, ಪೌಲನು ಆದಾಮನ ಪಾಪಗಳ ಪರಿಣಾಮವನ್ನು ಯೇಸುಕ್ರಿಸ್ತನ ಮರಣ ಮತ್ತು ಪುನರುತ್ಥಾನದ ಪರಿಣಾಮವಾದ ಬಿಡುಗಡೆಯ ದೃಷ್ಟಿಯನ್ನು ಪುನರುಚ್ಚರಿಸುತ್ತಾನೆ 1 ಕೊರಿಂಥದಲ್ಲಿ ಪುನರುತ್ಥಾನಿಕ ಕ್ರಿಸ್ತನು ಬಿಡುಗಡೆಮಾಡಲ್ಪಟ್ಟ ಪುನರುತ್ಥಾನಕ್ಕೆ ಮಾದರಿಯಾಗಿದ್ದಾನೆ ಎಂದು ಅತನು ತೋರಿಸುವವನಾಗಿದ್ದಾನೆ. ಕ್ರಿಸ್ತನ ಪುನರುತ್ಥಾನಿತ ದೇಹವು ಪ್ರತಿಯೊಬ್ಬನ ಪುನರುತ್ಥಾನಿತ ದೇಹವು ಕ್ರೈಸ್ತನಿಗೆ ಖಚಿತತೆ ಆಗಿದೆ.

ಸಮಾಧಿಯೊಳಕ್ಕೆ ಹೋದಂಥ ಅದೇ ಕ್ರಿಸ್ತನ ಪುನರುತ್ಥಾನಿತ ದೇಹವು, ಮಹಿಮಾಯುತವಾಗಿ ಪರಿವರ್ತಿತವಾಯಿತು. ಪುನರುತ್ಥಾನಿತ ದೇಹವು ಮಾಂಸ ಮತ್ತು ರಕ್ತಗಳಲ್ಲಿ ಅದೇ ರಿತಿಯ ಸ್ಥಿರತೆಯನ್ನೂ ಮತ್ತು ಅಸ್ಥಿರತೆಯೆರಡನ್ನೂ ಹೊಂದಿರುತ್ತದೆ. ಆ ಸತ್ಯವು ನಂಬಿಕೆಯ ಕಣ್ಣು ನೋಡುವವರೆಗೂ ಸ್ತತ್ಯವಾಗಿರುತ್ತದೆ.

## ಕೊನೆಯ ಆದಾಮ (15:42-49)

**42ಸತ್ತವರಿಗಾಗುವ ಪುನರುತ್ಥಾನವು ಅದೇ ಪ್ರಕಾರವಾಗಿರುವದು. ದೇಹವು**
**ಲಯಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ. ನಿರ್ಲಯಾವಸ್ಥೆಯಲ್ಲಿ ಎದ್ದುಬರುವದು; 43ಹೀನಾವಸ್ಥೆಯಲ್ಲಿ**
**ಬಿತ್ತಲ್ಪಡುತ್ತದೆ, ಮಹಿಮೆಯಲ್ಲಿ ಎದ್ದುಬರುವದು; ನಿರ್ಬಲಾವಸ್ಥೆಯಲ್ಲಿ ಬಿತ್ತಲ್ಪಡುತ್ತದೆ**
**44ಬಲಾವಸ್ಥೆಯಲ್ಲಿ ಎದ್ದುಬರುವದು; ಪ್ರಾಕೃತ ದೇಹವಾಗಿ ಬಿತ್ತಲ್ಪಡುತ್ತದೆ, ಆತ್ಮೀಕದೇಹವಾಗಿ**
**ಎದ್ದುಬರುವದು. ಪ್ರಾಕೃತದೇಹವಿರುವುದಾದರೆ ಆತ್ಮೀಕ ದೇಹವೂ ಇರುವದು.**
**45ಮೊದಲನೆಯ ಮನುಷ್ಯನಾದ ಆದಾಮನು ಬದುಕುವ ಪ್ರಾಣಿಯಾದನೆಂದು**
**ಬರದದೆಯಲ್ಲಾ. ಕಡೇ ಆದಾಮನೋ ಬದುಕಿಸುವ ಆತ್ಮನು. 46ಆತ್ಮೀಕವಾದದ್ದು**
**ಮೊದಲೇನಲ್ಲ, ಪ್ರಾಕೃತವಾದದ್ದು ಮೊದಲನೆಯದ್ದು; ಆಮೇಲೆ ಆತ್ಮೀಕವಾದದ್ದು.**
**47ಮೊದಲನೆಯ ಮನುಷ್ಯನು ಭೂಮಿಯೊಳಗಿಂದ ಉತ್ಪನ್ನವಾಗಿ ಮಣ್ಣಿಗೆ**
**ಸಂಬಂಧಪಟ್ಟವನು; ಎರಡನೆಯ ಮನುಷ್ಯನು ಪರಲೋಕದಿಂದ ಬಂದವನು. 48ಮಣ್ಣಿನಿಂದ**
**ಹುಟ್ಟಿದವನು ಎಂಥವನೋ ಮಣ್ಣಿಗೆ ಸಂಬಂಧಪಟ್ಟವರೂ ಅಂಥವರೇ; ಪರಲೋಕದಿಂದ**

**ಬಂದಾತನು ಎಂಥವನೋ ಪರಲೋಕ ಸಂಬಂಧಪಟ್ಟವರೂ ಅಂಥವರೇ. [49]ನಾವು ಮಣ್ಣಿನಿಂದ ಹುಟ್ಟಿದವನ ಸ್ವಾರೂಪ್ಯವನ್ನು ಧರಿಸಿಕೊಂಡಿರುವ ಪ್ರಕಾರ ಪರಲೋಕದಿಂದ ಬಂದಾತನ ಸ್ವಾರೂಪ್ಯವನ್ನು ಧರಿಸಿಕೊಳ್ಳಬೇಕು.**

**ವಚನ 42.** ತತ್ವಶಾಸ್ತ್ರದ ಊಹೆಯ ಜೊತಗೆ **ಪೌಲನು ಸತ್ತವರಿಗಾಗುವ ಪುನರುತ್ಥಾನವನ್ನು** ನಂಬಿಕೆಯಲ್ಲಿ ಒಳಗೊಳ್ಳಿಸುತ್ತಾ ಇಲ್ಲ. ನಿಜವೇನೆಂದರೆ ದೇವರು ಬಲವಾಗಿದ್ದಾನೆ, ಜ್ಞಾನವಾಗಿದ್ದಾನೆ, ಮತ್ತು ದೈಹಿಕವಾದವುಗಳನ್ನು ಆತ್ಮೀಕವಾಗಿ ಮಾರ್ಪಡಿಸುವವನು. ಇದು ನಿಶ್ಚಿತವಾಗಿ ಸ್ವಾಭಾವಿಕ ದೇಹದಲ್ಲಿನ ವಿವಿಧ ದೈಹಿಕ ಮತ್ತು ಮಹಿಮೆಯು ಎಂಬುದು ಸ್ಪಷ್ಟವಾದದ್ದು ಆಗಿದೆ.ಮನುಷ್ಯರ ವಿವೇಕವು ಅನ್ಯಥಾ ಕೆಟ್ಟ ಮತ್ತು ಮುಗ್ಗರಿಸಿ ಬೀಳುವ ಲೌಕಿಕ ವಸ್ತುಗಳಿಗೂ,ಮಾನವನ ವಿವೇಕದ ದೌರ್ಬಲ್ಯವನ್ನು ಪ್ರಾಯೋಗಿಸುವುದಕ್ಕೂ ಈಡಾಗಿರುತ್ತಾರೆ (2:5).

ಭೂಮಿಯ ಮೇಲೆ ಜೀವಿತಕ್ಕಾಗಿ ದೇವರಿಂದ ರೂಪಿಸಲ್ಪಟ್ಟ ದೇಹವು ಬಿತ್ತಲ್ಪಡುತ್ತದೆ ಎಂದು ಅಪೊಸ್ತಲನು ಹೇಳುತ್ತಾನೆ. ಇದು **ಲಯಾವಸ್ಥೆಯದ್ದು** (φθορᾶ, *phthora*) ಆಗಿರುತ್ತದೆ. ಎದ್ದುಬರುವದು ನಿತ್ಯಜೀವಕ್ಕಾಗಿ ಇದ್ದು ಅದು **ನಿರ್ಲಯಾವಸ್ಥೆಯದ್ದು** (ἀφθαρσία, *aphtharsia*) ಅಗಿ ರೂಪಗೊಂಡಿರುತ್ತದೆ. KJVಯ ಮತ್ತು ಅದರಂತೆಯೇ NASBಯ ಕೆಲ ಟಿಪ್ಪಣಿಗಳ ಮುದ್ರಣದಲ್ಲಿ "ನಾಶವಾಗುವ" ಮತ್ತು "ನಾಶವಾಗದ" ಎಂಬ ಪದಗಳನ್ನು ಭಾಷಾಂತರಿಸುವ ಮೂಲಕ ವಿಭಿನ್ನ ಅರ್ಥಗಳನ್ನು ಕೊಡುವದಾಗಿದೆ. "ನಾಶವಾಗುವಿಕೆಯು" ದೇವರ ವಿರುದ್ಧ ತಿರುಗಿಬೀಳುವ ಪ್ರವೃತ್ತಿಯನ್ನು ಅಥವಾ ಭೌತಿಕ ದೇಹವು ಕೇವಲ ದೈಹಿಕವಾಗಿ ಕೊಳೆತುಹೋಗುವುದು ಎಂದು ಮಾತ್ರ ಸೂಚಿಸುವದನ್ನು ಒಳಗೊಂಡಿರವದು. ಪಾಪದ ನಾಶವಾಗುವಿಕೆಯ ಬಲವು ಇಲ್ಲಿ ಪೌಲನ ಕಾಳಜಿಯಾಗಿ ಕಾಣಿಸಿಕೊಳ್ಳದೇ ಇರುವುದರಿಂದ, NASB ಮತ್ತು NIVಯ ಭಾಷಾಂತರಗಳು ಉತ್ತಮ ಭಾಷಾಂತರಗಳು ಎನ್ನಬಹುದು. ದೇವರು "ಬಿತ್ತಲ್ಪಟ್ಟವುಗಳು" ಎಂದರೆ ಈ ಜಗತ್ತಿನಲ್ಲಿ ದೇವರು ತನ್ನ ಸೃಷ್ಟಿಗಾಗಿ ಈ ದೇಹಗಳನ್ನು ಮಾಡಿದನು.

**ವಚನ 43.** ಪೌಲನು ಭೌತಿಕ ದೇಹ ಮತ್ತು ಎಬ್ಬಿಸಲ್ಪಟ್ಟ ದೇಹಗಳ ವ್ಯತ್ಯಾಸವನ್ನು ಮುಂದುವರೆಸಿದ್ದಾನೆ. ಭೌತಿಕ ದೇಹಗಳು ಪ್ರಸ್ತುತ ಕಾಲದಲ್ಲಿ **ಹೀನಾವಸ್ಥೆಯಲ್ಲಿ ಬಿತ್ತಲ್ಪಡುವದು ಮತ್ತು ನಿರ್ಬಲಾವಸ್ಥೆಯಲ್ಲಿ ಬಿತ್ತಲ್ಪಡುವದು**. ಪುನರುತ್ಥಾನದಲ್ಲಿ ದೇಹಗಳು ಪರಿವರ್ತಿತವಾಗುತ್ತವೆ ಹೀಗೆ ಅವುಗಳು **ಮಹಿಮೆ** ಮತ್ತು **ಬಲವನ್ನು** ಪ್ರಕಟಪಡಿಸುತ್ತವೆ. ಮಾಂಸದ ದೇಹವು ನಮ್ರತೆಯ ಗರ್ವದ ರೀತಿಯನ್ನು ಹೊಂದಿವೆ. ಗರ್ವದ ದೇಹವು ಕಾಲದಿಂದ ಅಶಕ್ತ ದೇಹಕ್ಕೆ ಕುಗ್ಗಿಸಲ್ಪಟ್ಟಿದೆ; ಶುದ್ಧ ಮನಸ್ಸು ಭಯಗ್ರಸ್ತವಾಗಿಯೂ ಗೊಂದಲಮಯವಾಗಿಯೂ ಇರಬಹುದು.

*ಸಮಾಧಿಗೆ ಹೋದ ಅದೇ ಮಾಂಸ - ರಕ್ತಗಳ ದೇಹ ಇದ್ದ ಹಾಗೇ ಇರುವ ಮೂಲ ಪುನರುತ್ಥಾನದ ಬಗೆಗೆ ಅಪೊಸ್ತಲನು ವಾದಮಾಡುತ್ತಿಲ್ಲ.* ಒಬ್ಬ ಮನುಷ್ಯನು ಸಮುದ್ರದಲ್ಲಿ ಸತ್ತಾಗ ಆತನನ್ನು ತಿಂದ ಮೀನುಗಳನ್ನು ಇನ್ನೊಬ್ಬ ಮನುಷ್ಯನು ತಿಂದಾಗ ಏನು ಸಂಭವಿಸುತ್ತದೆ ಎಂದು ಸಂಶಯಕಾರರು ಕೇಳುತ್ತಾರೆ. ಅವರು ತಮ್ಮ ಆತ್ಮಗಳು ಮಾಂಸದಲ್ಲಿ ಸಿಲುಕಿಕೊಂಡಿದೆ ಎಂದು ಭಾವಿಸುವ ಗ್ರೀಕ ತತ್ವಜ್ಞಾನಿಗಳು ಮಾಡುವಂತಹ ತಪ್ಪನ್ನು ಮಾಡುತ್ತಿದ್ದಾರೆ. ಹಿಂದಿನ ಅಥವಾ ಇಂದಿನ ನಾಸ್ತಿಕರು ಮರಣದಿಂದ ದೇವರ

ಪುನರುತ್ಥಾನದ ಬಗೆಗ ಯಾವುದೇ ಅಸಾಧಾರಣವಾದ ಸಮಸ್ಯೆಯನ್ನು ನೀಡಿಲ್ಲ. ದೇವರು ಯಾವುದೇ ಭೌತಿಕ ಸಂಪನ್ಮೂಲಗಳಿಗೆ ತನ್ನನ್ನು ಸೀಮಿತಗೊಳಿಸಿಲ್ಲ. ಮರಣದಿಂದ ಪುನರುತ್ಥಾನವು ವಿಜ್ಞಾನದಿಂದ ಅಧ್ಯಯನ ಮಾಡುವ ಪರಮಾಣು ಮತ್ತು ಸಣ್ಣಕಣಗಳ ತರದವುಗಳಿಗೆ ಸಂಬಂಧಿಸಿಲ್ಲ.

**ವಚನ 44.** ಅನೇಕ ಪ್ರಕರಣಗಳಲ್ಲಿ, ಒಂದು ಭಾಷೆಯಿಂದ ಇನ್ನೊಂದು ಭಾಷೆಗೆ ಅರ್ಥವು ಕನಿಷ್ಟಪಕ್ಷದ ಗೊಂದಲದಿಂದ ಭಾಷಾಂತರವಾಗುತ್ತದೆ; ಆದರೆ **ಪ್ರಾಕೃತ ದೇಹ** (σῶμα ψυχικόν, *sōma psuchikon*) ಎಂಬ ಪದವು ಕ್ಲಿಷ್ಟವಾದುದು ಮಾನವನ ಮಿತಿಗಳ ಮೂಲಕ ಸುತ್ತುವರೆದ ಜೀವನದ ಆ ಗುಣಗಳನ್ನು ತೋರಿಸುವತ್ತ ಲಕ್ಷ ಸೆಳೆಯಲು ಪೌಲನು ಈ ವಿಷೇಶಣಗಳನ್ನು ψυχικός (*psuchikos*) ಬಳಿಸಿದ್ದಾನೆ. ಗುಣಗಳು "ದೇಹೀಯ" ಮತ್ತು "ದೈಹಿಕ"ಗಳ ಗುಣಗಳು ಒಂದರಮೇಲೊಂದು ಬಂದಿವೆ ಆದರೆ ಅವುಗಳು ಹೆಚ್ಚುಒಂದಕ್ಕಿಂತ ಒಂದು ಸಮಗ್ರವಾದವುಗಳು ಆಗಿವೆ. Richard E. Oster, Jr, ಈ ರೀತಿ ವಾದಮಾಡಿದ್ದಾರೆ.

> "ಪ್ರಾಕೃತ" ಪದವು ಹಿಂದಿನ ಪದಗಳ (15:42-43) ನಾಶವಾಗುಂಥ, ಹೀನಾವಸ್ಥೆಯ ಮತ್ತು ಬಲಹೀನವಾದಂಥದ್ದು, "ಆತ್ಮೀಕವಾದವುಗಳು" ಆಗಿರುವಾಗ ನಾಶವಾಗದಂಥ ಮಹಿಮೆ ಹಾಗೂ ಬಲದ ಜೊತೆ ಒಂದಾಗಿ ಎಲ್ಲ ಅಂಶಗಳನ್ನು ಸಾರಾಂಶೀಕರಿಸುವುದು ಆಗಿದೆ.[32]

ಪುನರುತ್ಥಾನಿತ ದೇಹವು ಭೌತಿಕ ದೇಹವು ಹೊಂದಿರುವಂಥ ಪರಂಪರಾಗತ ಬಲಹೀನತೆಗೆ ಮೀಸಲಾಗಿಲ್ಲ; ಆದರೆ ಈ ಸಮಯದಲ್ಲಿ ದೇಹವು ಆತ್ಮೀಕವಾಗಿರುತ್ತದೆ, ಎಂದು ಪೌಲನು ಹೇಳುತ್ತಾನೆ, ಆತನು ಇದು ಅಲೌಕಿಕವಾದದ್ದು ಎಂದು ಆತನು ಬೋಧಿಸುತ್ತಿಲ್ಲ. ಭೌತಿಕ ದೇಹವು ಈ ಇಹಲೋಕದ ಜೀವಿತಕ್ಕೆ ಯೋಗ್ಯವಾಗಿರುವಾಗ, ಆತ್ಮೀಕ ದೇಹವು ಆತ್ಮೀಕ ಜೀವಿತಕ್ಕೆ ಬೇಕಾದವುಗಳಿಗೆ ಯೋಗ್ಯವಾದ್ದದ್ದು ಆಗಿದೆ. ಆತ್ಮೀಕ ದೇಹದ ಸ್ವರೂಪದ ಬಗೆಗೆ ಯಾವುದೇ ಹೆಚ್ಚಿನದನ್ನು ಪ್ರಕಟಿಸಲು ಆರಿಸಿಕೊಂಡನು; ಆದರೆ ಲೌಕೀಕವಾದ ದೇಹವು ಇರುವಂತೆಯೇ ಹಾಗೆಯೇ ಆತ್ಮೀಕವಾದದ್ದು ಇರುವುದಾಗಿರುತ್ತದೆ ಎಂದು ಅಪೊಸ್ತಲನು ಸೂಚಿಸುವವನಾಗಿದ್ದಾನೆ.

ದೇಹದ ಇಲ್ಲದಿರುವಿಕೆಯ ಪ್ರಕಾರವನ್ನು ಊಹಿಸಿಕೊಳ್ಳುವದೂ ಕಷ್ಟಕರವಾಗಿದೆ. ರೂಪತಾಳದೇ ಇರುವ ಆತ್ಮವು ಬಹುಶಃ ಆಕಾಶದ ಪರಿಮಿತಿಯಲ್ಲಿ ಯಾವುದೇ ಮಿತಿಯನ್ನು ಹೊಂದದೇ ಇರುವದು ಆಗಿರಬೇಕು. ಆಕಾಶದ ಪರಿಮಿತಿಯಿಲ್ಲದೇ ಅಸ್ತಿತ್ವವನ್ನು ಊಹಿಸಲು ಸಾಧ್ಯವೇ? ಆತ್ಮಗಳು ಭೌತಿಕ ದೇಹದಿಂದ ತಮ್ಮನ್ನು ತಾವು ಮುಕ್ತಗೊಳಿಸಿಕೊಂಡಾಗ ಅವು ಸ್ವತಂತ್ರಯವಾದ ಮತ್ತು ಆಶೀರ್ವದಿತ ಆತ್ಮಗಳು ಆಗುತ್ತವೆ ಎಂಬ ಒತ್ತಿ ಹೇಳುವಿಕೆಯನ್ನು ಒಳಗೊಂಡ ವಿರೋಧಾಭಾಸಗಳ ಪ್ಲೆಟೋನಿಸ್ಟ ತತ್ವಜ್ಞಾನಿಗಳ ಜೊತೆ ಅಗಸ್ಟೈನನು ಸಂಘರ್ಷಕ್ಕೆ ಇಳಿದನು. ". . . ಆಶೀರ್ವಾದವನ್ನು ಒಳಗೊಂಡ ಪ್ರತಿಯೊಂದೂ ತರದ ದೇಹಕ್ಕೂ ನಾವು ಬಿಡುವ ಅಗತ್ಯವಿಲ್ಲ ಆದರೆ ನಾಶವಾಗುವ,ಭಾರವಾದ, ನೋವುಯುಕ್ತ ಮರಣಿಸುವವುಗಳು ಆಗಿರುವಂಥ ದೇಹಗಳಿಗೆ ಅಲ್ಲ, - ದೇವರ ಒಳ್ಳೆತನವು ಮೊದಲ ಮನುಷ್ಯನಿಗೋಸ್ಕರ ಆದರೆ ಅಂಥ ಮನುಷ್ಯನು

ಮಾಡಿದ ಪಾಪ ಮಾತ್ರ ಪರಿಣಾಮವಾಗುವುದಾಗಿದೆ."[33]

**ವಚನ 45.** ಆದಿಯಲ್ಲಿ,ತನ್ನ ಸ್ವರೂಪದಲ್ಲಿ ಮಾನವನನ್ನು ರೂಪಿಸಬೇಕೆಂದು ದೇವರು ನಿರ್ಣಯಿಸಿದಾಗ, ಭೂಮಿಯ ಮೇಲೆ ಜೀವಿಸಲು ಯೋಗ್ಯವಾದ ದೇಹದ ಜೊತೆ ಮನುಕುಲವನ್ನು ಆತನು ರೂಪಿಸಿದನು.ನಂತರ ಅದು ಹೀಗೆ ಹೇಳುತ್ತದೆ, ದೇವರು ನೆಲದ ಮಣ್ಣಿನಿಂದ ಮನುಷ್ಯನನ್ನು ಉಂಟುಮಾಡಿ ಆತನ ಮೂಗಿನಲ್ಲಿ ಜೀವಶ್ವಾಸ ಊದಿದನು, ವೇದವಾಕ್ಯ ಹೇಳುವಂತೆ, "ಆಗ ಮನುಷ್ಯನು ಬದುಕುವ ಪ್ರಾಣಿಯಾದನು" (ಆದಿ. 2:7). ಪೌಲನು ಓದುವುದಕ್ಕಾಗಿ ಆದಿಕಾಂಡದ ಬಾಷೆಯನ್ನೇ ಸಾರಾಂಶೀಕರಿಸುತ್ತಾ ಮತ್ತು ಬಳಸುತ್ತಾ **ಮೊದಲನೆಯ ಮನುಷ್ಯನು ಆದಾಮನು ಬದುಕುವ ಪ್ರಾಣಿಯಾದನು** ಎನ್ನುತ್ತಾನೆ. ಆದಾಮನು ದೇಹ ಮತ್ತು ಆತ್ಮಗಳ ಸಂಕೀರ್ಣತೆಯ ಜೋಡಿಸುವಿಕೆಯನ್ನು ಸಂಪೂರ್ಣವಾಗಿ ಹೊಂದಿಕೊಂಡ ಒಂದು ಐಕ್ಯತೆಯಲ್ಲಿ ಇದ್ದನು. ಆತ್ಮವಿಲ್ಲದ ದೇಹವು ಕಟ್ಟಿಗೆ,ಅಥವಾ ಹೂವು ಅಥವಾ ಎಲೆಗಳಿಲ್ಲದ ಮರದ ಹಾಗಿರುವದು. ಆದಾಮ ಮತ್ತು ಆತನ ಸಂತತಿಯವರು ದೇಹ ಮತ್ತು ಆತ್ಮಗಳ ಅಸ್ತಿತ್ವದಲ್ಲಿ ಇರುವವರು ಎಂದು ವ್ಯಾಖ್ಯಾನಿಸಲ್ಪಟ್ಟಿದ್ದಾರೆ.

15:44ರಲ್ಲಿ ಪೌಲನು ಪ್ರಾಕೃತ ದೇಹ (σῶμα ψυχικόν, *sōma psuchikon*) ಮತ್ತು ಆತ್ಮೀಕ (σῶμα πνευματικόν, *sōma pneumatikon*) ದೇಹಗಳ ಮಧ್ಯ ಗುರುತಿಸುವಾಗ, ಆತನು ನಪುಂಸಕ ಲಿಂಗದ ಏಕವಚನ ವಿಷೇಶಣವನ್ನು ಬಳಿಸದ್ದಾನೆ: ಆದರೆ 15:45ರಲ್ಲಿ ಆತನು ಮೊದಲ ಮತ್ತು ಕೊನೆಯ ಆದಾಮನ ಎಂಬ ವ್ಯಕ್ತಿಯೆಡೆಗೆ ಲಕ್ಷವನ್ನು ಸೆಳೆಯಬಯಸುತ್ತಾನೆ. ಮೊದಲನೆಯ ಮತ್ತು ಎರಡನೆಯ ಆದಾಮರು ಮಾಡಿಕೊಂಡ ಆಯ್ಕೆಗಳು ಎಲ್ಲವೂ ಮಾನವ ಕುಟುಂಬಕ್ಕೆ ಭಿನ್ನವಾದವುಗಳು ಆಗಿವೆ. ದೇವರು ಇಚ್ಛಿಸಿದ ಕಾರಣದಿಂದ "ಮೊದಲು ಆದಾಮನು" "ಬದುಕುವ ಪ್ರಾಣಿ" (ψυχὴν ζῶσαν, *psuchēn zōsan*) ಆದನು. ಪಾಪದ ಉದಯಕ್ಕಿಂತಲೂ ಮುನ್ನ, ಆತ್ಮನೊಂದಿಗಿನ ಅದಾಮನ ಇರುವಿಕೆಯು ಬಲಹೀನತೆಯ ಮತ್ತು ಅಗೌರವದ ಯಾವುದೇ ಸೂಚನೆಗಳನ್ನು ಹೊಂದಿರಲಿಲ್ಲ (15:43). ಪಾಪ ಅಂದರೆ ಆದಾಮನಿಗೆ ಮರಣ, ಲೌಕಿಕವಾಗಿ, ಕೂಡಿ ಇರುವಿಕೆಯು ಆಗಿತ್ತು (15:21, 22). ಕೊನೆಯ ಆದಾಮನು **ಬದುಕಿಸುವ ಆತ್ಮನು** (πνεῦμα ζῳοποιοῦν, *pneuma zōopoioun*) ಆಗಿದ್ದು, ಆತನು ಮಾನವ ಕುಟುಂಬವನ್ನು ವಿಮೋಚಿಸಿದನು. NASBಯ ಭಾಷಾಂತರಕಾರರು ಇದನ್ನು ಉತ್ತಮವಾಗಿ ಮಾಡಲು ದೊಡ್ಡ ಅಕ್ಷರಗಳನ್ನು ಬಳಸಿದ್ದು, "ಜೀವಕೊಡುವ ಅತ್ಮವಾಗಿ ದೇವರು ಆತನನ್ನು ಮಾಡಿದನು" ಎಂದು ಆ ಪರಿಚ್ಛೇದವನ್ನು ಭಾಷಾಂತರಿಸಿದ್ದಾರೆ. ಕೊನೆಯ ಆದಾಮನು "ಜೀವಕೊಡುವ ಆತ್ಮನು" ಆತ್ಮೀಕ ದೇಹವನ್ನು ನಿತ್ಯಜೀವಕ್ಕಾಗಿ ಕೊಂಡುಕೊಂಡನು.

**ವಚನ 46.** ಆತ್ಮೀಕ ದೇಹವು ಸೂಚಿಸುವ ಪ್ರಾಕೃತದೇಹವನ್ನು ಮುನ್ನುಡಿದಿದ್ದ ತನ್ನ ವಿವರಣೆಗೆ ಅಪೊಸ್ತಲನು ಆಧಾರವನ್ನು ನೋಡುತ್ತಿದ್ದಾನೆ. Garland ಇದನ್ನು ಈ ರೀತಿಯಲ್ಲಿ ನೋಡುತ್ತಾನೆ:

> ಈ ಪರಿಚ್ಛೇದದಲ್ಲಿನ ಕೊರಿಂಥದವರ ಸ್ವಕೇಂದ್ರೀಕೃತ ಆತ್ಮೀಕತೆಗೆ ಯಾವ ಸಂಬಂಧವೂ ಇಲ್ಲ ಆದರೆ ಭೂಮಿಯ ಮೇಲಿನ ದೇಹವು ದಿವ್ಯ ದೇಹವಾಗಿ

ಹೇಗೆಎಬ್ಬಿಸಲ್ಪಡುವದು ಎಂಬುದರ ಬಗ್ಗೆ ಅವರಿಗೆ ಗೊಂದಲವು ಇದೆ ಎಂದು ಪೌಲನ ವಾದವು ಆಗಿದೆ.[34]

ಆತನ ಅಥವಾ ಅವಳ ಮರಣದ ಮತ್ತು ಕೊನೆಯಲ್ಲಿ ಕರ್ತನು ಕಾಣಿಸಿಕೊಳ್ಳುವಾಗಿನ ಅವದಿಯ ಮಧ್ಯದಲ್ಲಿ ವ್ಯಕ್ತಿಯು ಪ್ರಜ್ಞೆಯನ್ನು ಇಟ್ಟುಕೊಳ್ಳುತ್ತಾರೋ ಇಲ್ಲವೋ ಎಂಬ ವಿಷಯದ ಬಗ್ಗೆ ಮಾತ್ರ ಪೌಲನು ಕೇವಲ ಹೇಳುತ್ತಿಲ್ಲ. ಕೊನೇಪಕ್ಷ,ಆತನು 1 ಕೊರಿಂಥ 15ರಲ್ಲಿ ಆಗಲಿ ಮತ್ತು ಆತನು ಎಲ್ಲಿಯೂ ಇದನ್ನು ಪ್ರಸ್ತಾಪಿಸಿಲ್ಲ. ಕೊರಿಂಥದವರ ನಂಬಿಕೆಯಲ್ಲಿನ ಮರಣಾನಂತರದ ನಂಬಿಕೆಯ ಜೀವಿತದಿಂದ ಪೌಲನ ಪುನರುತ್ಥಾನ ನಂತರದ ನಂಬಿಕಯವರೆಗೆ Oster ಹೀಗೆ ಬೇರೆಮಾಡಿದ್ದಾರೆ.

ಆತ್ಮೀಕ ಜೀವಿತವು . . . ವಿಶ್ವಾಸಿಯ ಆತನ ವೈಯಕ್ತಿಕ ಸ್ಥಿತಿ ಮತ್ತು ಆವಸ್ಥೆಯನ್ನು ಸೂಚಿಸುತ್ತಿಲ್ಲ, ಆದರೆ ಬದಲಾಗಿ ದೇಹದಲ್ಲಿ ಮತ್ತು ಕೇವಲ ಅಲ್ಲಿ ಮಾತ್ರ, ಕರ್ತನು ಮರಳುವ ಸಮಯ ಮತ್ತು ಅಂತ್ಯದ ಕುರಿತಾಗಿದೆ.[35]

**ವಚನ 47.** ಮೊದಲ ಆದಾಮ ಮತ್ತು ಕೊನೆಯವನ ಮಧ್ಯ ಪೌಲನು ನಿರಂತರತೆಯನ್ನು ತೋರಿಸುವವನಾಗಿದ್ದಾನೆ. ಪಾಪದಿಂದ ದೇಹವು ಕಳಂಕಿತವಾಗಿರುತ್ತದೆ ಮತ್ತು ಆದಕಾರಣ ಬಲಹೀನಯ ವಿಷಯ ಹಾಗೂ ಅಪ್ರಾಮಾಣಿಕತೆಯು ಕ್ರಿಸ್ತನಲ್ಲಿ ಭವ್ಯತೆ ಮತ್ತು ಬಲವಾಗಿ ಮಾರ್ಪಾಡಾಗುತ್ತದೆ.ಪರಲೋಕದಲ್ಲಿ ಜೀವನವು ಈ ಜಗತ್ತಿನಲ್ಲಿ ಇರುವ ಹಾಗೆ ಇರುತ್ತಿದ್ದು, ಎರಡೂ ದೇಹದ ಅಸ್ತಿತ್ವವನ್ನು ಒಳಗೊಂಡಿವೆ.

ದೇಹದ ಅಸ್ತಿತ್ವವು ಅದೇ ರೀತಿಯಾಗಿ ಇರಿಸಿಕೊಳ್ಳುವದು ಎಂಬುದು ಪುನರುತ್ಥಾನವನ್ನು ನಿರಾಕರಿಸುವವರ ದೋಷವು ಆಗಿದೆ. ಭೂಮಿಯ ಮೇಲಿನ ದೈಹಿಕ ದೇಹವು ಆದಾಮನಲ್ಲಿ ಮೂರ್ತಿಕರಿಸಿದ್ದು, ಅದು ವಿಭಿನ್ನವಾದ ವಾಸ್ತವಾಂಶ ಮತ್ತು ಆತ್ಮೀಕ ಜೀವಿತದಿಂದ ಅದರ ಸ್ವಭಾವವನ್ನು ಹೊಂದಿ ಪುನರುತ್ಥಾನಿತ ಯೇಸುವನ್ನು ಸೂಚಿಸುವಂತದ್ದಾಗಿದೆ. “ಆದಾಮ” ಎಂದರೆ “ಭೂಮಿ” ಎಂದು ಸೂಚಿಸುವುದಾಗಿದೆ. **ಮೊದಲ ಆದಾಮನನ್ನು** ಹೋಲಿಸುವ ಮೂಲಕ ಆದಾಮನು ಮಣ್ಣಿನಿಂದ (ἐκ γῆς χοϊκός, *ek gēs choikos*) ಮಾಡಲ್ಪಟ್ಟವನು ಎರಡನೆಯ ಮನುಷ್ಯ, ಪರಲೋಕದಿಂದ ನಿರ್ಮಿಸಲ್ಪಟ್ಟ ಯೇಸುವಿನ ಮೂಲಕ ಪುನರುತ್ಥಾನವಾದನು (ἐξ οὐρανοῦ, *ex ouranou*) ಎಂದು ಪೌಲನು ಸೂಚಿಸುತ್ತಾನೆ. ಯೇಸುವಿನ ದೇಹವು ಆತನ ಅವತರಿಸುವಿಕೆಯ ಅವಧಿಯ ವರೆಗೆ ಪೌಲನ ಅಂಶಕ್ಕೋ ಯಾವುದೇ ಸಂಬಂಧವಿಲ್ಲ. Ridderbos ಇದನ್ನು ಹೇಳುತ್ತಾರೆ:

ಪೂರ್ವಾಸ್ತಿತ್ವದ ಅಸ್ತಿತ್ವದ ಮೂಲಕ ಅವರು ಪರಲೋಕದ ಮೂಲವಾದ ಆತನ ಮಾನವತ್ವವನ್ನು ಅವರು [ಪದಗಳು *ex ouranou*] ಮಾತನಾಡುತ್ತಿಲ್ಲ, ಆದರೆ ಆತ್ಮೀಕವಾದ ಪರಲೋಕಸ್ವಭಾವದ ಮಾನವತ್ವ ಪುನರುತ್ಥಾನದ ಅಸ್ತಿತ್ವದ ಕುರಿತು.[36]

ಎರಡನೆಯ ಮನುಷ್ಯನು ಎಂದರೆ ಅದು **ಪರಲೋಕದಿಂದ** ಬಂದಾತನು ಅಥವಾ “ಪರಲೋಕದವನು” (NIV) ಆದ ಪುನರುತ್ಥಾನಿತ ಯೇಸುವೇ. ಆತನು

"ಪರಲೋಕದವನು" ಆತನು ಮರಣದಿಂದ ಪುನರುತ್ಥಾನದ ಕಾರಣದಿಂದಲೇ. ತಮ್ಮ ಸ್ವಂತ ಪುನರುತ್ಥಾನದಿಂದಲೇ ನಂಬಿಗಸ್ಥವಾದ ಚಿತ್ತವು "ಪರಲೋಕದವನು" ಎಂಬಲ್ಲಿ ಹಂಚಿಕೊಂಡಿದ್ದು, ಅದು ಪುನರುತ್ಥಾನವು ಈಗಾಲೇ ಕ್ರಿಸ್ತನಲ್ಲಿ ಆರಂಭವಾಗಿದೆ ಎಂಬುದೇ ಆಗಿದೆ.ಪ್ರಸ್ತುತಕ್ಕಾಗಿ, ಯೇಸುವು ದೇವರ ಸನ್ನಿಧಿಯಲ್ಲಿ ತನ್ನ ಮಾನವತ್ವದ ಛಾಪನ್ನು ಒತ್ತಿದ್ದಾನೆ (ನೋಡಿರಿ ಫಿಲಿಪ್ಪಿ 3:20, 21). ಪೌಲನು ಲೌಕಿಕವಾದ ಯೇಸುವಿನ ದೇಹದ ಪುನರುತ್ಥಾನಕ್ಕಿಂತ ಮುಂಚಿನದರ ಬಗೆಗೆ ಏನೂ ಹೇಳುತ್ತಿಲ್ಲ. ಕೆಲ ನಾಸ್ತಿಕ ಸಿದ್ಧಾಂತಗಳು ಧೃಢಿಕರಿಸುವಂತೆ ಯೇಸುವು ತನ್ನ ಅವತರಿಸುವಿಕೆಯಲ್ಲಿ ಪರಲೋಕೀಯ ಮನುಷ್ಯನಾಗಿದ್ದಾನೆ ಎಂದು ಆತನು ಹೇಳುತ್ತಿಲ್ಲ. ಭೂಮಿಯ ಮೇಲಿನ ಆತನ ದೈಹಿಕ ದೇಹವು ಮನುಕುಲದಲ್ಲಿ ಪಾಲು ತೆಗೆದುಕೊಂಡು ಆದಾಮನ ಎಲ್ಲ ಸಂತತಿಯರಿಗೆ ಹಂಚಲ್ಪಟ್ಟಿತು.

**ವಚನ 48.** ಮಾನವನ ಇರುವಿಕೆಯ ಎರಡು ರೀತಿಗಳನ್ನು ಪೌಲನು ಊಹಿಸಿದ್ದಾನೆ. ಈ ಜಗತ್ತಿನಲ್ಲಿಯ ಮೊದಲ ಜೀವಿತವು ನೆಲದಿಂದ ಮಣ್ಣಿನಿಂದ (ὁ χοϊκός, *ho choikos*) ಮಾಡಲ್ಪಟ್ಟ ದೇಹ, ಎರಡನೆಯ ಜೀವಿತವು ಪೆರಲೋಕದಲ್ಲಿಯ ದೇಹ ಪರಲೋಕದಲ್ಲಿ ಮಾಡಲ್ಪಟ್ಟದ್ದು (ὁ ἐπουράνιος, *ho epouranios*). ಅಪೊಸ್ತಲನು ಬಿಟ್ಟದ್ದು ಯಾವದು, ಅದು ದೈಹಿಕ ಮರಣ ಮತ್ತು ಅಂತ್ಯದಲ್ಲಿ ಕರ್ತನ ಬರೋಣದ ಇರುವಿಕೆ ಮಧ್ಯದ ಆರಂಭದ ಸಮಯದ ಇರುವಿಕೆ ಇವು "ಮಧ್ಯದ ಸ್ಥಿತಿ" ಎಂದು ಕರೆಯಲ್ಪಡುವವು ಆಗಿವೆ. ಹೊಸ ಒಡಂಬಡಿಕೆಯಲ್ಲಿನ ಪೌಲನ ಮೂಲಕ ಮತ್ತು ಇತರ ಹೇಳಿಕೆಗಳು ಪರಿಗಣಿಸಲ್ಪಟ್ಟವುಗಳು ಆಗಿವೆ (ನೋಡಿರಿ 2 ಕೊರಿಂಥ 5:1-10; ಫಿಲಿಪ್ಪಿ 1:23; 3:20, 21; 1 ಥೆಸಲೋನಿಕ 4:13-17); ಆದರೆ ಪ್ರತಿಯೊಂದೂ ಪರೀಕ್ಷಿಸಲ್ಪಟ್ಟಾಗ ಮಧ್ಯಂತರದ ಇರುವಿಕೆಯು ಇನ್ನೂ ಅಸಂಖ್ಯಾತ ಪ್ರಶ್ನೆಗಳುಅದಕ್ಕೆ ಹೊಂದಿಕೊಂಡಿವೆ. ಕರ್ತನಲ್ಲಿ ಮರಣಿಸಿದವರು ಕರ್ತನ ಮರಳಿ ಬರುವತನಕ "ಬೆತ್ತಲೆ" (2 ಕೊರಿಂಥ 5:2, 3) ಆಗಿರುತ್ತಾರೆಯೇ? ಇದು ಈ ಪರಿಚ್ಛೇದದ ವ್ಯಾಖ್ಯಾನ ಆಗಿದೆ. ಪ್ರಶ್ನೆಗಳು ಕೊನೆಯಿಲ್ಲದವುಗಳು ಮತ್ತು ಯಾವುದೇ ಉತ್ತರಗಳು ಸರಿಸುಮಾರು ಆಗಿರುತ್ತದೆ. John McRay ರವರು ಈ ಉತ್ತರವನ್ನು ಬರೆಯುವಾಗ ಅವರ ವಾದ ಸರಿಯಾಗಿತ್ತು ". . . ಯೇಸು ಕ್ರಿಸ್ತನೊಡನೆ ಒಂದಾಗುವದು ಅಂತ್ಯದ ಪುನರುತ್ಥಾನದ ಎದುರನೋಡುವಿಕೆಯು ಇವು ನಂಬಿಕೆಯ ಜೀವಿತಕ್ಕೆ ಮತ್ತು ಸಂತೋಷದ ಜೀವಿಸುವಿಕೆಗೆ ಅವಷ್ಯವಿಲ್ಲ."[37]

**ವಚನ 49. ಮಣ್ಣಿನಿಂದ ಹುಟ್ಟಿದವನ ಸ್ವಾರೂಪ್ಯವನ್ನು** ಧರಿಸಿಕೊಂಡಿರುವದು ಪ್ರಸ್ತುತ ದಿನಗಳಲ್ಲಿನ ದೈಹಿಕವಾದ ದೇಹವು ಆಗಿದೆ. **ಪರಲೋಕದಿಂದ ಬಂದಾತನ ಸ್ವಾರೂಪ್ಯವು** ಕರ್ತನ ಪುನರುತ್ಥಾನಿತದ ನಿಟ್ಟಿನಲ್ಲಿ ದೇಹವು ರೂಪಿತವಾಗಿದೆ (ಫಿಲಿಪ್ಪಿ 3:20, 21). ಪೌಲ ಪತ್ರಗಳ ಹಿನ್ನಲೆಯಲ್ಲಿ ಆತನ ಪ್ರಬೋದನೆಯು ಈ ಯುಗದಲ್ಲಿ ಪ್ರಸ್ತುತವಾಗಿದೆ. ಬದಲಾಗಿ ಭವಿಷ್ಯವು ಸೂಚ್ಯಾರ್ಥವಾಗಿದ್ದು φορέσομεν (*phoresomen*, "ನಾವು ಸಹಿಸಿಕೊಳ್ಳೋಣ"), ಎಂಬುದರ ಬದಲು ಪ್ರಾಚೀನ ವೇದಭಾಗದ ಅನೇಕ ಭಾಗಗಳು φορέσωμεν (*phoresōmen* "ನಾವು ಜೊತೆಯಾಗಿ ಸಹಿಸಿಕೊಳ್ಳೋಣ") ಎಂಬುದನ್ನು ಪ್ರೋತ್ಸಾಹಿಸುವುದಾಗಿದೆ. ಹಿಂದಿನ ಭಾಗಗಳು ಈ ಸಂದರ್ಭಕ್ಕೆ ಸರಿಯಾಗಿದ್ದು ವೇದಭಾಗದ ಆಧಾರಗಳು ಮುಂದಿನ ಭಾಗವನ್ನು ಪುಷ್ಟೀಕರಿಸುವವು ಆಗಿವೆ. ಇತ್ತೀಚಿನ

ಭಾಗಗಳನ್ನು ನಾವು ಅಂಗೀಕರಿಸುವುದಾದರೆ ಓದುವುದನ್ನು ನಿತ್ಯತ್ವದ ಸಿದ್ಧತೆಗಾಗಿ ಜೀವಿಸಲು ತನ್ನ ಜನರಿಗೆ ಕರೆಕೊಟ್ಟ ಕ್ರಿಸ್ತನ ಪರಲೋಕೀಯ ಜೀವಿತ ಮಾರ್ಗವನ್ನು ಅನುಸರಿಸಲು ಪೌಲನು ತನ್ನ ಓದುಗರಿಗೆ ಕರೆ ಕೊಡುವವನಾಗಿದ್ದಾನೆ.

## ಪುನರುತ್ಥಾನದ ರಹಸ್ಯ (15:50-57)

**50ಸಹೋದರರರೇ, ನಾನು ಹೇಳುವುದೇನೆಂದರೆ ರಕ್ತಮಾಂಸವು ದೇವರ ರಾಜ್ಯಕ್ಕೆ
ಬಾಧ್ಯವಾಗಲಾರದು; ಲಯವಾಗುವ ವಸ್ತು ನಿರ್ಲಯಪದವಿಗೆ ಭಾಧ್ಯವಾಗುವುದಿಲ್ಲ.
51ಕೇಳಿರಿ ಇದುವರೆಗೂ ಗುಪ್ತವಾಗಿದ್ದ ಸಂಗತಿಯನ್ನು ನಾನು ನಿಮಗೆ ತಿಳಿಸುತ್ತೇನೆ –
ನಾವೆಲ್ಲರೂ ನಿದ್ರೆಹೋಗುವುದಿಲ್ಲ;
52ಆದರೆ ಕಡೇ ತುತೂರಿಯು ಧ್ವನಿಯಾಗುವಾಗ
ನಾವೆಲ್ಲರೂ ಒಂದು ಕ್ಷಣದಲ್ಲೇ ರೆಪ್ಪೆಬಡಿಯುವಷ್ಟರೊಳಗಾಗಿ ಮಾರ್ಪಡುವೆವು.
ತುತ್ತೂರಿಯು ಊದಲಾಗಿ ಸತ್ತವರು ನಿರ್ಲಯರಾಗಿ ಎಬ್ಬಿಲ್ಪಡುವರು ನಾವು
ಮಾರ್ಪಡುವೆವು.
53ಲಯವಾಗುವ ಈ ದೇಹವು ನಿರ್ಲಯತ್ವವನ್ನು ಧರಿಸಿಕೊಳ್ಳುವದೂ
ಮರಣಾಧೀನವಾಗಿರುವ ಈ ದೇಹವು ಅಮರತ್ವವನ್ನು ಧರಿಸಿಕೊಳ್ಳುವದೂ ಅವಶ್ಯ.
54ಲಯವಾಗುವ ಈ ದೇಹವು ನಿರ್ಲಯತ್ವವನ್ನು ಧರಿಸಿಕೊಂಡಾಗ ಮರಣಾಧೀನವಾಗಿರುವ
ಈ ದೇಹವು ಅಮರತ್ವವನ್ನು ಧರಿಸಿಕೊಂಡಾಗ ಬರೆದಿರುವ ಮಾತು ನೆರವೇರುವದು. ಆ
ಮಾತು ಏನೆಂದರೆ ಮರಣವು ನುಂಗಿಯೇ ಹೋಯಿತು, ಜಯವಾಯಿತು ಎಂಬುದೇ.
55ಮರಣವೇ, ನಿನ್ನ ಜಯವೆಲ್ಲಿ ಮರಣವೇ, ನಿನ್ನ ವಿಷದ ಕೊಂಡಿ ಎಲ್ಲಿ?
56ಮರಣದ ಕೊಂಡಿ
ಪಾಪವೇ ಮತ್ತು ಪಾಪದ ಬಲಕ್ಕೆ ಆಧಾರ ಧರ್ಮಶಾಸ್ತ್ರವೇ.
57ಆದರೆ ದೇವರು ನಮ್ಮ
ಕರ್ತನಾದ ಯೇಸು ಕ್ರಿಸ್ತನ ಮೂಲಕ ನಮಗೆ ಜಯವನ್ನು ಕೊಟ್ಟಿದ್ದಾನೆ ಆತನಿಗೆ ಸ್ತೋತ್ರ.**

ಮರಣದ “ಮಧ್ಯದ ಸ್ಥಿತಿ” ಎಂಬುದರ ಬಗೆಗೆ ಹೇಳುವಾಗ ಪೌಲನಿಗೆ ಅಲ್ಲಿ ಎರಡು ಕಾರಣಗಳು ಇದ್ದವು. ಮೊದಲನೆಯದು ಅಪೊಸ್ತಲನು ಕರ್ತನಿಂದ ಆಗುವ ಪ್ರಕಟನೆಗಳ ಮೇಲೆ ಆತುಕೊಂಡಿದ್ದನು. ಈ ವಿಚಾರದಲ್ಲಿ, ಆತನು ಸ್ಪಷ್ಟವಾದ ಪ್ರಕಟಣೆಗಳನ್ನು ಪಡೆದಿದ್ದನು. ಎರಡನೆಯದಾಗಿ, ಕರ್ತನ ಬರೋಣವು ಬೇಗನೇ ಅಗುತ್ತದೆ ಎಂದು ಪೌಲನು ಎದುರು ನೋಡುವವನಾಗಿದ್ದನು. ತನ್ನ ಸಮಕಾಲೀನ ಕ್ರೈಸ್ತರ ದೈಹಿಕವಾದ ಮರಣ ಮತ್ತು ಅಂತ್ಯದ ದಿನಗಳು ಮಧ್ಯ ಯಾವುದೇ ಉದ್ದನೆಯ ಅವಧಿಯು ಇಲ್ಲ ಎಂದು ಆತನು ಎದುರುನೋಡುವವನಾಗಿದ್ದನು.

1 ಥೆಸಲೋನಿಕದ ಬರವಣಿಗೆಗಳು ಬಹುಶಃ 1 ಕೊರಿಂಥದ ಬರಹಗಳ ಸುಮಾರು ನಾಲ್ಕು ವರ್ಷ ಮುಂದಾಗಿ ಬರೆದಿರಬಹುದಾಗಿದೆ. ಪೌಲನು ಥಸಲೋನಿಕದವರಿಗೆ ಬರೆಯುವಾಗ, ಆತನು ಕರ್ತನು ಮರಳಿಬರುವಾಗ ತಾನು ಜೀವಿತರಲ್ಲಿ ಇರುವವನಾಗಿರುತ್ತಾನೆ ಎಂದು ಎದುರುನೋಡುವವನಾಗಿದ್ದನು. “. . . ಕರ್ತನು ಪ್ರತ್ಯಕ್ಷನಾಗುವವರೆಗೂ ಜೀವದುಂದುಳಿದಿರುವ ನಾವು ನಿದ್ರೆಹೋದವರಿಗಿಂತ ಮುಂದಾಗುವುದೇ ಇಲ್ಲ” (1 ಥೆಸಲೋನಿಕ 4:15) ಎಂದು ಆತನು ಬರೆಯುತ್ತಾನೆ. 1 ಕೊರಿಂಥದಲ್ಲಿ, ಅನೇಕ ಪ್ರಕಟನೆಯ ನಂತರ, ತಾನು ಆ ಘಟನೆಯಲ್ಲಿ ಜೀವದಿಂದ ಇರುವ ಸಾಧ್ಯತೆಯು ಇಲ್ಲವೆಂದು ಆತನಿಗೆ ಮನವರಿಕೆಯು ಆಯಿತು. ನಾವೆಲ್ಲರೂ ನಿದ್ರೆ

ಹೋಗುವುದಿಲ್ಲ ಆದರೆ ಮಾರ್ಪಡುವೆವು ಎಂದು ಆತನು ಹೇಳುತ್ತಾನೆ (15:51).

ಹೊಸ ಒಡಂಡಿಕೆಯ ಸಮಯದಲ್ಲಿನ ಕ್ರೈಸ್ತರು ಕ್ರಿಸ್ತನ ಮರಳಿಬರುವುಕೆಗಾಗಿ ಮುನ್ನೋಡುವವರಾಗಿದ್ದರು. "ನೀವು ದೀರ್ಘಶಾಂತಿಯಿಂದಿರಿ, ನಿಮ್ಮ ಹೃದಯಗಳನ್ನು ಧೃಢಪಡಿಸಿಕೊಳ್ಳಿರಿ. ಕರ್ತನ ಪ್ರತ್ಯಕ್ಷತೆಯು ಹತ್ತಿರವಾಯಿತು" ಎಂದು ಯಾಕೋಬನು ಬರೆಯುತ್ತಾನೆ (ಯಾಕೋಬ 5:8). ತನ್ನ ಮೊದಲ ಪತ್ರದಲ್ಲಿ ಪೇತ್ರನು "ಎಲ್ಲವುಗಳ ಅಂತ್ಯವು ಹತ್ತಿರವಾಗಿದೆ" ಎಂದು ಬರೆಯುತ್ತಾನೆ (1 ಪೇತ್ರ 4:7). ಇದು ಕೇವಲ ಕರ್ತನ ಮರಳಿಬರುವಿಕೆಯು ಆಗಿರಲಿಲ್ಲ; ವಿಶ್ವಾಸಿಗಳಿಗೋಸ್ಕರ ಪ್ರತಿದಿನ ಈ ಘಟನೆಗೋಸ್ಕರ ಮುನ್ನೋಡುತ್ತಾ ಜೀವಿಸುವವರಾಗಿದ್ದರು. ಆತನ ಬರುವಿಕೆಯು ಮಾತ್ರವಲ್ಲ, ಆದರೆ ಜನಪ್ರೀಯ ಸಂಗೀತದ ಪದಗಳಲ್ಲಿ "ಯೇಸುಬೇಗ ಬರುವನು" ಎಂದು ಇರುವುದಾಗಿತ್ತು.[38] ಸಭೆಯ ಸಿದ್ಧಾಂತವು ಆತನು ಬೇಗನೇ ಬರುವನು ,ಮತ್ತು ನಾವು ಮಾರ್ಪಡುವೆವು ಎಂಬುದೇ.

**ವಚನ 50**. ಪೌಲನು ತನ್ನ ವಾದಗಳನ್ನು ಕ್ರೋಢೀಕರಿಸುವವನಾಗಿದ್ದಾನೆ. ಅಲ್ಲಿ ಪುನರುತ್ಥಾನಿತ ದೇಹವಿರುವದು ಎಂಬುದನ್ನು ಆತನು ಸ್ಪಷ್ಟಪಡಿಸುವಾಗ, ಪುನರುತ್ಥಾನಿತ ದೇಹವು ಮಾನವನ ಈಗಿರುವ ಅಸ್ತಿತ್ವದ ಮಿತಿಯಲ್ಲಿರುವಂಥ ಮಾಂಸ ಮತ್ತು ರಕ್ತಗಳ ದೇಹದಲ್ಲಿ ನಾಶವಾಗುವ ವಸ್ತು; ಹೊಂದಿಕೊಂಡಿರದು ಎಂದೂ ಸಹ ಆತನು ಹೇಳುತ್ತಾನೆ. ಮಾಂಸವು ಪುನರುತ್ಥಾನಿತ ದೇಹವು **ನಾಶವಾಗದಂತದ್ದು**. ಲಯವಾಗುವ ದೇಹವು **ದೇವರ ರಾಜ್ಯಕ್ಕೆ ಬಾಧ್ಯವಾಗಲಾರದು**; ಲಯವಾಗುವ ವಸ್ತು ನಿರ್ಲಯ ಪದವಿಗೆ ಭಾಧ್ಯವಾಗುವುದಿಲ್ಲ. ಲೌಕೀಕದೇಹವು ಯಾವುದೇ ನಕಾರಾತ್ಮಕ ಸೂಚನೆಗಳನ್ನು ಹೊಂದಿರುವುದಿಲ್ಲ ಎಂಬುದು ಪೌಲನಿಗೆ ಸಾಮಾನ್ಯವಾಗಿ ಗ್ರೀಕ ವಿಚಾರವಾದಿಗಳದು ಎಂದಾಗಿತ್ತು.

"ದೇಹ" ಎಂಬ ಪದವು ಮಾಂಸ ಪದಕ್ಕೆ ವ್ಯತ್ಯಾಸವಾಗಿದ್ದು, ಮನುಷ್ಯನ ಎರಡು ರೀತಿಯ ಇರುವಿಕೆಯನ್ನು ಪ್ರತಿನಿಧಿಸುವುದಾಗಿದೆ. ಈ ಸಂಧರ್ಭದಲ್ಲಿ ಈ ಪದವು ಮಾತ್ರ ಪರಿಗಣನೆಯಡಿಯಲ್ಲಿ ಇದ್ದು, ಅಪೊಸ್ತಲನು ಈ ಪದವನ್ನು ಕೆಲಸಾರಿ ವ್ಯತ್ಯಾಸ ತೋರಿಸುವುದಕ್ಕೋಸ್ಕರ ಬಳಸಿದ್ದಾನೆ (ಉದಾಹರಣೆ ರೋಮಾ 2:28ರಲ್ಲಿ "ಮಾಂಸ"ವು "ದೇಹ"ಕ್ಕೆ ಸಮವಾಗಿದೆ). ಇತರ ಪರಿಚ್ಛೇದಗಳಲ್ಲಿ ಅವುಗಳು ಮನುಷ್ಯನನ್ನು ಎರಡು ವಿಭಿನ್ನ ದೃಷ್ಟಿ ಕೋನಗಳಿಂದ ಹೆಸರಿಸುವವು ಆಗಿವೆ. ಪೌಲನು "ಮಾಂಸ" ಎಂಬ ಪದವನ್ನು ಮನುಷ್ಯ ಬಲಹೀನತೆಯನ್ನು ಮತ್ತು ಆಶಾಶ್ವತೆಗಾಗಿ ತೋರಿಸಬಯಸಿದ್ದಾನೆ. ದೇಹವಿಲ್ಲದ ಪುನರುತ್ತಾನದ ಬಗ್ಗೆ ಅಪೊಸ್ತಲನು ಯೋಚಿಸಿದನು, ಆತನು ಎಂದಿಗೂ ಮಾಂಸ ಸಹಿತದ ಪುನರುತ್ಥಾನವನ್ನು ಸೂಚಿಸಿಲ್ಲ.

James D. G. Dunn ರವರು ಈ ರಿತಿಯಲ್ಲಿ ಹೇಳಿದ್ದಾರೆ:

> ಕೇವಲಮಾನವನಂತೆಯ ನಮ್ಮ ಮರಣದಲ್ಲಿನ ನಮ್ಮ ಅಸಾಮರ್ಥ್ಯವನ್ನು, ಹಸಿವೆ ಮತ್ತು ಆಸೆಗಳಲ್ಲಿನ ನಮ್ಮ ಆತುಕೊಳ್ಳುವಿಕೆಯನ್ನೂ, ನಮ್ಮ ಈ ಹಸಿವೆ ಮತ್ತು ಆಸೆಗಳನ್ನು ನಮ್ಮ ದೇಹೀಯತೆಯು ನಮ್ಮ ಕೊರತೆಯನ್ನು ಮತ್ತು ಬಲಹೀನತೆಗಳ ನಿರ್ವಹಣೆಯಲ್ಲಿನ ದೌರ್ಬಲ್ಯ ಇವುಗಳನ್ನು ತೋರಿಸುವುದಾಗಿದೆ.[39]

"ಮಾಂಸ" ಎಂಬುದಕ್ಕಿಂತಲೂ "ದೇಹ" ಎಂಬುದು ಮಾನವನ ಅಸ್ತಿತ್ವದ ಪರಿಗಣನೆಗೆ ಹೆಚ್ಚು ಸಕಾರಾತ್ಮಕವಾದ ಪದವಾಗಿ ಬಳಸುವುದಾಗಿದೆ. ಸ್ವಾಭಾವಿಕವಾಗಿ ದೇಹವನ್ನು ಹೊಂದಿರುವ ಅಂಶದ ಅರ್ಥವು ಆತ್ಮನಲ್ಲಿ ಜೀವಿಸುವದು ಎಂದು ಪೌಲನು ಮತ್ತು ಹಳೆಒಡಂಬಡಿಕೆ ಪ್ರಕಟಣೆಗಳು ಆ ರೀತಿಯಲ್ಲಿ ಅರ್ಥೈಸಿಕೊಂಡಿವೆ.

15ನೇಯ ಅಧ್ಯಾಯದಲ್ಲಿನ ಅಂತಿಮ ವಚನಗಳಲ್ಲಿನ ಜೀವಿಸುವವರಿಗೆ ಕರ್ತನ ಬರೋಣದ ಅರ್ಥವು ಏನಾಗಿದೆ ಮತ್ತು ಮರಣಿಸಿದವರಿಗೆ ಇದು ಯಾವ ಅರ್ಥವಾಗಿದೆ ಎಂಬುದರ ಮಧ್ಯದ ವ್ಯತ್ಯಾಸದಂತೆ ಇವುಗಳ ಮಧ್ಯದ ಪೌಲನ ಸಾರಾಂಶವನ್ನು Joachim Jeremias ನೋಡುವವರಾಗಿದ್ದಾರೆ.[40] ಜೆರಮೀಯರ ಪ್ರಕಾರ ಅಪೊಸ್ತಲನ ಸೂಚನೆಯಂತೆ "ದೇಹ ಮತ್ತು ರಕ್ತ" ಜೀವಿಸುವವರನ್ನು ಸೂಚಿಸುವುದಾಗಿದೆ ಮತ್ತು ಆತನು "ನಿರ್ಲಯ" (φθορά, *phthora*, "ನಾಶವಾಗದ್ದು"; KJV) ಎಂದು ಬಳಿಸಿದ್ದು ಇದು ಮರಣಿಸಿದವರಿಗೆ ಸಮಾನವಾಗಿದೆ. ಕರ್ತನು ಮರಳಿಬರುವುದಕ್ಕಿಂತ ಮುಂಚೆ ಮರಣಿಸಿದವರು ಮತ್ತು "ಮನುಷ್ಯರು" ಇನ್ನೂ ಜೀವಂತ ಇರುವವರು ತಿರುಗಿ 15:53ರಲ್ಲಿ "ನಿರ್ಲಯರು." ಕರ್ತನ ಬರೋಣವು ಜೀವಿಸುವವರಿಗೆ ಮತ್ತು ಸತ್ತವರಿಗೆ ಇಬ್ಬರಿಗೂ ಪುನರುತ್ಥಾನದಲ್ಲಿ ಪಾಲು ತೆಗೆದುಕೊಳ್ಳಲು ಹೇಗೆ ಅವಕಾಶ ಕೊಡುವುದಾಗಿದೆ ಎಂದು ಪೌಲನ ವಿವರಣೆಯು ತಿಳಿಸುವುದಾಗಿದೆ. ಅಪೊಸ್ತಲನ ವಾದದ ಸಂಭವನೀಯ ವಿವರಣೆಯನ್ನು ಜೆರಮೀಯನು ಪ್ರಸ್ತಾಪಿಸಿದ್ದಾನೆ, ಆದರೆ ಕರ್ತನು ಮರಳುವುದಕ್ಕಿಂತ ಮೊದಲು ಮರಣಿಸಿದವರಿಗೋಸ್ಕರ ಕಾಳಜಿ ಹೊಂದಿರುವರಿಂದ ಕೊರಿಂಥದವರು ತೊಂದರೆಗೊಳಗಾದರು ಎಂದು ಈ ಆದ್ಯಾಯದಲ್ಲಿ ಯಾವುದೂ ಸೂಚಿತವಾಗಿಲ್ಲ. ಕೊರಿಂಥದಲ್ಲನ ಥೆಸಲೋನಿಕದ ಕ್ರೈಸ್ತರ ಪ್ರಶ್ನೆಗಳನ್ನು ನಾವು ತೆಗೆದುಕೊಳ್ಳುವದು ಇದು ಅಸಂಭವನೀಯವಾದದ್ದು (ನೋಡಿರಿ 1 ಥೆಸಲೋನಿಕ 4:13).[41]

**ವಚನ 51.** ಪುನರುತ್ಥಾನದ ದೇಹದ ಸ್ವಭಾವ ಮತ್ತು ದೇವಜನರು ಕಾರ್ಯವಿಧಾನದ ಮೂಲಕ ನಾಶವಾಗುವುದರಿಂದ ನಾಶವಾಗದೆಡಗೆ ಮಾರ್ಪಾಡಾಗುವದು ಮನುಷ್ಯರ ತಿಳುವಳಿಕೆಗೆ ಮೀರಿದ್ದು; **ಇದು ರಹಸ್ಯವಾಗಿದೆ**. ಅಪೊಸ್ತಲನು ಪ್ರಕಟಣೆಯ ಪದವಿಯನ್ನು ಕರ್ತನಿಂದ ಪಡೆದದ್ದು ರಹಸ್ಯದ ಮೇಲಿನ ಮಸುಕನ್ನು ಎತ್ತುವ ಭಾಗವಾಗಿದೆ. ಕೆಲ ವಿಶ್ವಾಸಿಗಳು ಕರ್ತನ ಮರಳುವಿಕೆಯಲ್ಲಿ ಜೀವಂತವಾಗಿರುತ್ತಾರೆ. ಎಲ್ಲ ಜನರೂ ಮರಣಿಸಿರುವುದಿಲ್ಲ; ಆದರೆ ಕರ್ತನು ಮರಳಿದಾಗ ಜೀವದಿಂದಿರುವವರು ಅಥವಾ ಮರಣಿಸಿದವರಲ್ಲಿ ಎಲ್ಲರೂ ಮಾರ್ಪಾಡಾಗುವರು. ನಾಶವಾಗುವ ಮಾಂಸ ಮತ್ತು ರಕ್ತದ ದೇಹವು ಪುನರುತ್ಥಾನಿತ ದೇಹವಾಗಿ ಮಾರ್ಪಾಡಾಗುವದು. ದೈಹೀಕ ಪುನರುತ್ಥಾನದ ಮೇಲಿನ ಸಿದ್ಧಾಂತದ ಅಂಶವು ಸ್ವಾಭಾವಿಕವಾದ ನಾಶವಾಗುವದು ತಪ್ಪು ಎಂದು ಗ್ರೀಕ ಆಲೋಚನಕಾರರು ನಿರಾಕರಿಸುವವರಾಗಿದ್ದಾರೆ. ಆರಂಭದಿಂದಲೂ, ದೇವರು ವಸ್ತುಗಳಿಂದಾದ ಸೃಷ್ಟಿಯನ್ನು ಒಳ್ಳೆಯದು ಎಂದು ಹೇಳಿದನು. ನಾವು . . . **ಮಾರ್ಪಡುವದು** ಎಂಬುದು ಬರುವ ಕಾಲದಲ್ಲಿ ಕ್ರೈಸ್ತರಿಗಾಗಿ ಭೌತಿಕವಲ್ಲದ್ದು ಅಲ್ಲ.

**ವಚನ 52.** ಅಂತ್ಯವು ಬಂದಾಗ, ಸಮಯವು ಓಡಿಹೋಗುವದು. ಅಂತ್ಯದ ದಿನಗಳಲ್ಲಿ ಕರ್ತನ ಮೊದಲ ಕಾಣಿಸಿಕೊಳ್ಳುವಿಕೆಯ ಬರುವದು ಮುಂದೋರಿಸುವ ಮತ್ತು ಮುನ್ನೋಡುವಿಕೆಯ ಉದ್ದನೆಯ ಪ್ರಕ್ರಿಯೆ ಆಗಿರುತ್ತದೆ. ಎರಡನೆಯ ಬರೋಣವು (ಇಬ್ರಿಯ

9:28) ವಿಭಿನ್ನ ರೀತಿಯದು ಆಗಿರುತ್ತದೆ. ಆತನು ಅನಿರೀಕ್ಷಿತವಾಗಿ ರಾತ್ರಿ ವೇಳೆಯಲ್ಲಿ ಕಳ್ಳನು ಬರುವಂತೆ ಬರುವನು (ಮತ್ತಾಯ 24:43; ಲೂಕ 12:39; 1 ಥೆಸಲೋನಿಕ 5:2; 2 ಪೇತ್ರ 3:10). ವಿಶ್ವಾಸದ, ಪಶ್ಚಾತ್ತಾಪದ, ಮತ್ತು ನಿರೀಕ್ಷೆಯ ಸಮಯವು ಕೊನೆಗೊಳ್ಳುತ್ತದೆ. ಒಂದು **ಕ್ಷಣದ ಆ ಸಮಯದಲ್ಲಿ** (ἐν ἀτόμῳ, *en atomō*), ರೆಪ್ಪೆ ಬಡಿಯುವವಷ್ಟರಲ್ಲಿ, ದೇವರ ಶಕ್ತಿ ಮೂಲಕ ಮಾರ್ಪಡುವ ಘಟನೆಗಳು ನಡೆದುಹೋಗುತ್ತವೆ. ಇಲ್ಲಿ ಬಳಸಿದ ಗ್ರೀಕ ಪದವನ್ನು ಇಂಗ್ಲೀಷ್ ಮಾತನಾಡುವವರು ಎರವಲು ಪಡೆದು ಅದನ್ನು ವಿಷಯಕ್ಕೆ ಅನ್ವಯಿಸಿ ಮತ್ತು ಅಸ್ತಿತ್ವದಲ್ಲಿರುವಂತ ಭಾಗಗಳ ವುದ್ಧಿಯನ್ನು “ಕಣ” ಎಂದು ಹೆಸರಿಸಿದ್ದಾರೆ.

ತನ್ನ ಓದುಗರ ಸ್ವಾಭಾವಿಕವಾದ ಘಟನೆಯ ಮೇಲೆ ಅಪೊಸ್ತಲನು ಯಾವುದೇ ಪ್ರಭಾವವನ್ನು ಬೀರಲಿಲ್ಲ. ತುತ್ತೂರಿಯ ಕರೆಯನ್ನು ಅಂತ್ಯದ ಚಿನ್ಹೆಯಾಗಿ ರೂಪಕದಂತೆ ಅತನು ಬಳಿಸಿದ್ದಾನೆ (ನೋಡಿರಿ ಮತ್ತಾಯ 24:31; 1 ಥೆಸಲೋನಿಕ 4:16). ತುತ್ತೂರಿಯ ಧ್ವನಿಸಿದಾಗ, ತುತ್ತೂರಿಯು ಊದಲಾಗಿ **ಸತ್ತವರು ನಿರ್ಲಯರಾಗಿ ಎಬ್ಬಿಲ್ಪಡುವೆವು**. ಜೀವಿಸುವವರು **ಮಾರ್ಪಾಟು** ಹೊಂದುವರು ಮತ್ತು ಎಲ್ಲವೂ ಮಾರ್ಪಾಡಾಗುವದು. ಪುನರುತ್ಥಾನದ ದೇಹವು ಕೊರತೆಯುಳ್ಳಂತಹ ಮಾಂಸದ ದೇಹವನ್ನು ಹಿಂದಕ್ಕೆ ಬಿಡುವದು. ಪರಲೋಕದ ಪರಿಣಾಮವು ನಾಶವಾಗದ ದೇಹವಾಗಿದೆ.

ಸುಳ್ಳು ಬೋಧನೆಗಳನ್ನು ಖಂಡಿಸಲು ಪೌಲನು ಹಿಂದೆಮುಂದೆ ನೋಡಲಿಲ್ಲ, ಉದಾ, ಎತ್ತಲ್ಪಡುವಿಕೆ ಅಥವಾ ಭೂಮಿಯ ಮೇಲೆ ಕ್ರಿಸ್ತನ ಸಾವಿರ ವರ್ಷಗಳ ಆಳ್ವಿ ಕೆ. ಆತನು ಯೋಹಾನನ ದಿವ್ಯ ದರ್ಶನದ ಪ್ರಕಟನೆಯ ಪುಸ್ತಕದಲ್ಲಿನ ಬಂಗಾರದ ಬೀದಿಗಳು ಮತ್ತು ನಾಲ್ಕು ಪಟ್ಟಣದ ವಿವರಣೆ ಇವುಗಳ ವಿವರಣೆಯನ್ನು ಬಿಟ್ಟು ಬಿಟ್ಟನು (ಪ್ರಕಟಣೆ 21:16-21). ನಂಬಿಕೆಯ ಈ ಯುಗದಲ್ಲಿ, ದೇವರ ಜನರು ಕೇವಲ “ನಮ್ಮಲ್ಲಿ ಕಾರ್ಯ ಸಾಧಿಸುವ ತನ್ನಶಕ್ತಿಯ ಪ್ರಕಾರ ನಾವು ಬೇಡುವುಕ್ಕಿಂತಲೂ ಯೋಚಿಸುವುದಕ್ಕಿಂತಲೂ ಅತ್ಯಧಿಕವಾದದ್ದನ್ನು ಮಾಡಲು ಶಕ್ತನಾದ ದೇವರಲ್ಲಿ” ನಂಬಿಕೆಯಿಡಬೇಕು (ಎಫೆಸ 3:20). ವಿಶ್ವಾಸಿಗಳಲ್ಲಿ ದೇವರು ಕ್ರಿಸ್ತನಲ್ಲಿ ವಾಗ್ದಾನ ಮಾಡಿದ ದೈಹಿಕ ಅಸ್ತಿತ್ವವನ್ನು ಹೊಂದಿದ ನಿತ್ಯಜೀವವನ್ನು ಸ್ಥಾಪಿಸುವದು ಅಪೊಸ್ತಲನ ಕಾಳಜಿಯಾಗಿತ್ತು. ಹೀಗಿರುವಾಗ ಕ್ರಿಸ್ತನ ಹೊರಗಿರುವವರಿಗೆ ಪೌಲನಿ ಹೇಳಲು ಏನೂ ಇರಲಿಲ್ಲ. ರಕ್ಷಣೆ ಹೊಂದಿದವರಿಗೆ ಮಾತ್ರ ಅವನ ಕಾಳಜಿಯು ಆಗಿತ್ತು.

**ವಚನ 53.** ಅಪೊಸ್ತಲನು ನಂತರ 15:50ರಲ್ಲಿ ತಾನು ವ್ಯಕ್ತಪಡಿಸಿದಂತ **ನಕಾರಾತ್ಮಕತೆಯನ್ನು ನಂತರ ಸಕಾರಾತ್ಮಕವಾಗಿ ಹೇಳುತ್ತಾನೆ**. ದೇಹದ ರೂಪವು ಬದಲಾದಾಗ, ಅಲ್ಲಿ ಕರ್ತನ ಮರಳಿ ಬರುವಿಕೆಗಾಗಿ ಕಾಯುತ್ತಿರುವಂತಹ ಕ್ರೈಸ್ತರ ಮತ್ತು ತುತ್ತೂರಿಯ ಧ್ವನಿಯಾದಾಗ ಏನಾಗಿರುವರು ಎಂಬುದರ ಮದ್ಯ ಇರುವ ನಿರಂತರತೆಯನ್ನು ಪೌಲನು ಒತ್ತಿಹೇಳಿದ್ದಾನೆ. ಲಯವಾಗುವ ಈ ದೇಹವು ನಿರ್ಲಯತ್ವವನ್ನು ಧರಿಸಿಕೊಳ್ಳುವದು. ಪೌಲನ ಪ್ರಕಾರ ದೇಹ ಮತ್ತು ಆತ್ಮಗಳ ಏಕತೆಯನ್ನು ಒಳಗೊಳ್ಳುವಿಕೆಯು ಈ ಕಾಲದಲ್ಲಿ ಮತ್ತು ಮುಂಬರುವ ಎರಡೂ ಕಾಲದಲ್ಲಿ ಅಸ್ತಿತ್ವದಲ್ಲಿರುವದು.

**ವಚನ 54.** ಆತ್ಮದೊಡನೆ ದೇಹರಹಿತವಾದ ಇರುವಿಕೆಯ ಅಥವಾ “ಆತ್ಮ ಜಗತ್ತ”ನ್ನು

ತನ್ನೊಳಗೆ ಹೊಂದಿಕೊಂಡಿರುವಂತಹ ಯಾವುದನ್ನು ಅಪೊಸ್ತಲನು ಅನ್ಯಜನರಿಗೆ ಚಿತ್ರಿಸುವುದಿಲ್ಲ. ದೈಹಿಕವಾಗಿ ಇರುವಿಕೆಯ ಹೊರರೂಪವು ಮರಣಾಧೀನವಾಗಿರುವ ಈ ದೇಹವು ಅಮರತ್ವದ ಉಚ್ಛರಣೆಯಲ್ಲಿ ಯಾವುದೇ ಪ್ರಶ್ನೆಗಳು ಇರುವುದಿಲ್ಲ. ಕ್ರೈಸ್ತನಾಗುವುದಕ್ಕೆ ಕ್ರಿಸ್ತನನ್ನು ಧರಿಸಿಕೊಳ್ಳುವದು ಎಂಬ ರೂಪಕವನ್ನು ಬಳಸಿ ಅಪೊಸ್ತಲನು ಇನ್ನೊಂದೆಡೆ ಬರೆಯುತ್ತಾನೆ. ಇದೊಂದು ವಸ್ತ್ರದಂತೆ ಹಾಕಿಕೊಳ್ಳುವುದಾಗಿದೆ. ಪುನರುತ್ಥಾನವು "ಧರಿಸಿಕೊಳ್ಳುವ" ಚಿನ್ಹೆಯ ವಿಷಯವಾಗಿರುವಾಗ ಮಾಡುವ **ಬದಲಾವಣೆಯು ನಿತ್ಯತ್ವದ ಅಸ್ತಿತ್ವದ ಸಿದ್ಧತೆಯು ಆಗಿದೆ**. ಹೊರಜಗತ್ತನಲ್ಲಿ ಕರ್ತನು ಬರುವಾಗ ಇನ್ನೊಂದರ ಬದಲಾವಣೆಯ ಜೊತೆ ಒಂದು ದೇಹದಲ್ಲಿ ಜೀವಿಸುವವರು ಮತ್ತು ಮರಣಿಸಿದವರು ಪುನರುತ್ಥಾನಿತ ದೇಹವನ್ನು ಹೊದ್ದುಕೊಂಡವರು ಎಂಬುದು ಪೌಲನ ಮೂಲ ಆಸಕ್ತಿಯು ಆಗಿತ್ತು.

ತುತ್ತೂರಿಯು ಊದುವಾಗ ಮತ್ತು "ಮರ್ತ್ಯರು" ನಾಶವಾಗದವರಾಗಿ ಬದಲಾದಾಗ, ಇದು ಆರಂಭದಿಂದಲೂ ದೇವರ ಪ್ರಕಟಣೆಯ ಸಂಪೂರ್ಣತೆಯು ಆಗಿರುವುದಾಗಿದೆ. ಯೇಶಾಯ 25:8ರಲ್ಲಿ ಅಪೊಸ್ತಲ ಉಲ್ಲೆಖವು ಸಂಕ್ಷೀಪ್ತವಾಗಿದ್ದರೂ ಕೂಡಾ ಅಂಶಗಳನ್ನು ಹೊಂದಿದೆ: "**ಮರಣವನ್ನು ಶಾಶ್ವತವಾಗಿ ನಿರ್ನಾಮ ಮಾಡುವೆನು.**" ತನ್ನ ಓದುಗರು ಯೇಶಾಯನ ಮಾತುಗಳನ್ನು *parousia* ಕರ್ತನ ಮುಖ್ಯ ಆಧಾರವಾಗಿ, ಕೊನೆಯ ತುತ್ತೂರಿಯ ಧ್ವನಿಸುವ ಕ್ಷಣದಲ್ಲಿ ಪ್ರಮುಖವಾಗಿ ಅರ್ಥಮಾಡಿಕೊಳ್ಳಬೇಕೆಂದು ಪೌಲನು ಬಯಸುವವನಾಗಿದ್ದಾನೆ. ಪ್ರವಾದಿಗಳ ಸಂಧರ್ಭದಲ್ಲಿ ಅ ಪದಗಳು ಅವರ ಸ್ವಂತದ ಅರ್ಥದಲ್ಲಿ ಇದ್ದವು. ಆದರೆ ಪೌಲನು ತಾನು ವಿವರಿಸುವ ಘಟನೆಗಳಿಗೆ ಅವುಗಳನ್ನು ಸಮಂಜಸವಾಗಿ ಕಂಡುಬರುತ್ತಾನೆ. (15:27ರ ಮೇಲಿನ ವ್ಯಾಖ್ಯನ ನೋಡಿರಿ.)

**ವಚನ 55.** ಪೌಲ ಮತ್ತು ಇತರ ಹೊಸ ಒಡಂಬಡಿಕೆಯ ಲೇಖಕರು ಉಲ್ಲೇಖಿಸಿದಂತ ಹಳೆಯ ಒಡಂಬಡಿಕೆಯ ಮತ್ತು ಕ್ರಿಸ್ತನ ಮೂಲಕ ದೇವರ ಚಿತ್ತದ ಕಾರ್ಯ ನಡೆಸುವಿಕೆಯನ್ನು ಅನ್ವಯಿಸುತ್ತಾ ಅನಾಯಾಸವಾದುದರ ಜೊತೆ ಸತ್ಯವೇದೀಯ ವಿಶ್ಲೇಷಣಕಾರರು ಯಾವಾಗಲೂ ನಿರಾಶರಾಗುತ್ತಾರೆ ಅಥವಾ ಗೊಂದಲ ಕ್ಕೊಳಗಾಗುತ್ತಾರೆ. ಅಪೊಸ್ತಲನ ಹೊಶೇಯನ ಉಲ್ಲೇಖವು ಹೊರತಾದುದೇನಲ್ಲ. 1 ಕೊರಿಂಥ 15:55ರ ವ್ಯಾಖ್ಯೆಗಳು ಅಕ್ಷರಸಹ ಅಲ್ಲ. ಹೋಶೇ 13:14ರ "ಮರಣವೇ ನಿನ್ನ ಉಪದ್ರವವೆಲ್ಲಿ? ಪಾತಾಳವೇ ನೀನು ಮಾಡುವ ನಾಶನವೆಲ್ಲಿ?" NASB ಭಾಷಾಂತರಕಾರರ ಸುಸಂಗತವಾದ ಸಾಲುಗಳು ಆಗಿವೆ. ಎಪ್ರಾಯಿಮನ ಜೊತೆಯ ದೇವರ ಸಂಬಂಧವು ಹೊಶೆಯನಲ್ಲಿಯ ವಿಷಯವಾಗಿತ್ತು, ಆದರೆ ಕರ್ತನಾದ ಕ್ರಿಸ್ತ ಯೇಸುವಿನ ಮೂಲಕಮರಣವನ್ನು ಜಯಿಸಿದವರ ಜಯದ ಕೂಗನ್ನು ವ್ಯಕ್ತಪಡಿಸಲು ಪ್ರವಾದಿಗಳ ಭಾಷೆಯನ್ನು ಬಳಸಲು ಆತನು ಹಿಂದೆ ಮುಂದೆ ನೋಡುತ್ತಿರಲಿಲ್ಲ.

ಅಪೊಸ್ತಲನು ಮರಣವನ್ನು ಮತ್ತು ಸಮಾಧಿಯನ್ನು ಗೇಲಿಮಾಡಿದನು ಮತ್ತು ಅಣುಕಿಸಿದನು. "ನೀವು ಎಲ್ಲಿ ಬಿಡಲ್ಪಟ್ಟಿರಿ" ಎಂದು ಆತನು ಮರಣವನ್ನು ಕೆಳುತ್ತಿದ್ದಾನೆ, "ಈಗ ಅದೇ ದೇವರಮಗನು ಮನುಕುಲಕ್ಕೆ ಕೃಪೆಯನ್ನು ತಂದಿದ್ದಾನಲ್ಲವೇ? ಈ ಕಾಲದ ಮೂಲಕ ಮರಣವು ಜೀವನದ ಅನಿವಾರ್ಯ ಸಮಾರೋಪವಾಯಿತು. ಪೌಲನು ಹೊಶೇಯನ ಹೇಳುವ ಮಾತುಗಳನ್ನು ತೆಗೆದುಕೊಂಡಿದ್ದಾನೆ "ಮರಣವೇ ನಿನಗೆ

ಜಯವಿಲ್ಲ ನಿನಗೆ ಕೊಂಡಿಯಿಲ್ಲ. ಜೀವವು ನಮ್ಮದು."

ಸಮಗ್ರವಾಗಿ, ಪೌಲನು 1 ಕೊರಿಂಥದ ಸಮಸ್ಯೆಯೊಡನೆ ವ್ಯವಹರಿಸುತ್ತಿದ್ದಾನೆ. ಅಂತರ್ ಜಗಳಗಳೊಂದಿಗೆ, ನೀತಿಯ ಅಭದ್ರತೆಯಿಂದ ಮತ್ತು ಸೈದ್ಧಾಂತಿಕ ಗೊಂದಲಗಳಲ್ಲಿ ತಮ್ಮ ಮಾರ್ಗಗಳನ್ನು ಕಾಣುತ್ತ ನಲಗುತ್ತಿರುವ ಸಭೆಗೆ ಆತನು ಸಹಾಯ ಮಾಡಲು ಯತ್ನಿಸುತ್ತಿದ್ದಾನೆ. ಹೆಚ್ಚಿನ ಭಾಗವು, ಆತನ ಬರಹಗಳನ್ನು ಲಕ್ಷೀಕರಿಸುವಂತಹ ಶ್ರೇಷ್ಟ ಸೈದ್ಧಾಂತಿಕ ಸೂತ್ರಿಕರಣ ಸಾಹಸಗಳನ್ನು ಅತನು ತೊಲಗಿಸಿದನು; ಆದರೆ ಸಿದ್ಧಾಂತಗಳು ಅಲ್ಲಿದ್ದವು, ಅವುಗಳು ಮೇಲ್ಮೈಯಿಂದ ದೂರವಿರಲಿಲ್ಲ. ಪ್ರಾಯೋಗಿಕ, ನೈತಿಕ, ಪದ್ಧತಿಗನುಸಾರವಾಗಿ ಮತ್ತು ಮುಂದೆ ಕ್ರೈಸ್ತರು ಕಾರ್ಯಮಾಡುವಂತಹ ಸತ್ಯವೇದೀಯ ದೈವಶಾಸ್ತ್ರ ಗಳ ಮಧ್ಯ ಅಪೊಸ್ತಲನು ಸಣ್ಣ ಭಿನ್ನತೆಯನ್ನು ಉಳಿಸಿಕೊಂಡಿದ್ದಾನೆ. ನೈತಿಕತೆ ಮತ್ತು ಸಿದ್ಧಾಂತಗಳು ಬೇಡಿಕೆಯ ಸಂಧರ್ಭಗಳಿಗೆ ತಕ್ಕಂತೆ ಬೇರೆ ಮಾಡುವವು ಮತ್ತು ಕೂಡಿಸುವವು ಆಗಿವೆ; ಅವುಗಳು ಬೇರೆಯಾಗದವುಗಳು.

**ವಚನ 56.** ಕ್ರಿಸ್ತ ಯೇಸುವಿನಲ್ಲಿಯ ದೇವರ ಕೃಪಾಪೂರಿತ ವರಕ್ಕೋಸ್ಕರ ರೋಮಾ 4–7ರಲ್ಲಿ ಪೌಲನು ಧರ್ಮಶಾಸ್ತ್ರದ ಸೂಚನೆ ಮತ್ತು ನಂಬಿಕೆಯ ವಿಧೇಯತೆ" ಇವುಗಳನ್ನು ಬೆಳಿಸಿದ್ದಾನೆ (ನೋಡಿರೋಮ 1:5; 16:26). ಬಹುಶಃ ನಾಲ್ಕು ಅಥವಾ ಐದು ವರ್ಷಗಳ ನಂತರದಲ್ಲಿ ಆತನು ಕೊರಿಂಥದಲ್ಲಿ ಶಮನ ಮಾಡುತ್ತಿರುವಾಗ ರೋಮದ ಸಭೆಗೆ ಆತನು ಬರೆದದ್ದು ಇದು ಅದಕ್ಕೆ ಸೂಕ್ತವಾದದ್ದು ಆಗಿದೆ (ನೋಡಿರಿ ಅ.ಕೃ. 20:2, 3). ಮರಣದ ಕೊಂಡಿ ಪಾಪವೇ ಮತ್ತು ಪಾಪದ ಬಲಕ್ಕೆ ಆಧಾರ ಧರ್ಮಶಾಸ್ತ್ರವೇ ಎಂಬುದು ಹೋಶೇಯ 13:14ರಲ್ಲಿನ ಉಲ್ಲೇಖವನ್ನು **ಅನುಸರಿಸಲು ಇದು ಬಲು ವೈಶಿಷ್ಟ ಪೂರ್ಣವಾದದ್ದು ಆಗಿದ್ದು ಆಗಿದೆ.** ಈ ಎಲ್ಲ ಸಾಧ್ಯತೆಗಳಲ್ಲಿ, ಪಾಪ ಮತ್ತು ಧರ್ಮಶಾಸ್ತ್ರದ ಮೇಲಿನ ಪೌಲನ ತೀರ್ಮಾನಗಳನ್ನು ತಿರುತಿರುಗಿ ಅವರೊಡನೆ ಇರುವ ಆತನ ಸಮಯದಲ್ಲಿ ಕೊರಿಂಥದ ಕ್ರೈಸ್ತರು ಕೇಳಿದರು (ಅ.ಕೃ. 18:11). ಶಿಲುಬೆಯ ಮೇಲಿನ ಆತನ ತ್ಯಾಗದ ಕಾರಣದಿಂದ, ಯೇಸುವು ಪಾಪದ ವಿಷದ ಹಲ್ಲನ್ನು ಕೀಳಿದನು ಮತ್ತು ಇದರ ಕೊಂಡಿಯನ್ನು ಕಿತ್ತು ಹಾಕಿದನು; ಆತನು ದೇವರ ಮಹಿಮಾಯುತ ವರದಿಂದ ಶಾಸ್ತ್ರವನ್ನು ತಳ್ಳಿಹಾಕಿದನು.

**ವಚನ 57.** ದೇವರ ಸಂಪೂರ್ಣವಾದ ಮಧ್ಯಸ್ಥಿಕೆಯ ಮೂಲಕ, ಪಾಪ ಮತ್ತು ಮರಣ ಹಾಗೂ ಶಾಸ್ತ್ರಗಳು ಕರ್ತನ ಬರುವುದಕ್ಕಿಂತಲೂ ಮೊದಲು ತಿಳಿಯದೇ ಇದ್ದ ಮಾರ್ಗಗಳು ಈಗ ಕಾಣುತ್ತಲಿವೆ. ದೇವರು ಕ್ರೈಸ್ತರಿಗೆ ವಿಜಯವನ್ನು ಕೊಟ್ಟಿದ್ದಾನೆ. ಈ ವಿಜಯವು ನಂಬಿಕೆಯಿಂದ, **ನಮ್ಮ ಕರ್ತನಾದ ಯೇಸೂ ಕ್ರಿಸ್ತನ ಮೂಲಕ ನಮಗೆ ಜಯವು ಬಂದಿದೆ** (ನೋಡಿರಿ 1 ಯೋಹಾನ 5:4). ಆತನ ಜೀವಿತದ ನಂತರ, ಅಗಸ್ಟೈನನು ನಂಬಿಕೆಯ ಮೂಲಕ ಎದುರಿಸಿದ ಶೋಧನೆಗಳನ್ನು ಬರೆದನು. ಕೊನೆಯಲ್ಲಿ, ಆತನು ಈ ಪರಿಚ್ಛೇದವನ್ನು 1 ಕೊರಿಂಥದಿಂದ ಉಲ್ಲೇಖಿಸಿದನು ಮತ್ತು ನಮ್ಮ ಪಾಪಗಳಲ್ಲಿ ಕೆಲಸಾರಿ "ನಮ್ಮ ಬಲದ ಮೂಲಕ ವಿಜಯವನ್ನು ಕಾಪಾಡಲು ನಿರೀಕ್ಷೆ ಅಥವಾ ಅದು ಕಾಪಾಡಲ್ಪಟ್ಟಾಗ ನಮ್ಮ ಸ್ವಂತ ಬಲದಿಂದ ಏರಿಸುವದು ಮತ್ತು ಆತನ ಮಹಿಮೆಗೆ ಅಲ್ಲ ಎಂದು ಹೇಳಿದ್ದಾನೆ."[42] ದೈವಜ್ಞಾನಿಗಳ ಅಂಶವು ಮೌಲ್ಯವುಳ್ಳದ್ದಾಗಿದೆ, ಹೀಗೆ ಬಲು

ದೂರದವರೆಗೆ ವಿಶ್ವಾಸಿಯು ಮಾನವೀಯ ಜವಾಬ್ದಾರಿಯನ್ನು ನಂಬಿಕೆಯ ವಿಧೇಯತೆಯಲ್ಲಿ ಮರೆಯಲಾರನು.

ಕ್ರಿಸ್ತನು ದೇಹೀಯ ಮರಣದಿಂದ ಪುನರುತ್ಥಾನವನ್ನು ಅನುಭವಿಸಿದ ಕಾರಣ ಕ್ರಿಸ್ತೀಯ ನಿರೀಕ್ಷೆಯು ಕಾಪಾಡಲ್ಪಟ್ಟಿದ್ದಾಗಿದೆ ಮತ್ತು ಅದರ ಫಲವಾಗಿ ಅಲ್ಲಿ ಸಹಜವಾದ ಪುನರುತ್ಥಾನವು ಇದೆ. ಯೇಸುವಿನ ಖಾಲಿ ಸಮಾಧಿಯಿಲ್ಲದೇ, ಶಿಲುಬೆಯ ವಿಜಯವು ಟೊಳ್ಳಾದದ್ದು ಆಗಿದೆ. ಅವರ ಎಂದಿಗೂ ದೇಹೀಯ ಪುನರುತ್ಥಾನದ ಪ್ರಥಮಫಲವಾದ ಆತನೊಡನೆ ಎಲ್ಲ ವಿಶ್ವಾಸಿಗಳು ತಿರುಗಿಕೊಳ್ಳುವದು ಇದು ಕೊರಿಂಥದವರಿಗೆ ಅವರ ಕ್ರಿಸ್ತೀಯ ನಂಬಿಕೆ ಮೂಲ ಮನವರಿಕೆಯ. ಮೇಲೆ ಇರುವದು ಯೋಚಿಸುವದು ಅಸಾಧ್ಯವಾದದ್ದು ಆಗಿದೆ. ನಿತ್ಯತ್ವದ ಜೀವದ ನಿರೀಕ್ಷೆಯ ಕಾರಣ ಈ ಜಗತ್ತು, ಎಲ್ಲ ಅನಿಶ್ಚಿತತೆ, ವ್ಯಸನ, ಮತ್ತು ನೋವುಗಳು ತಾಳಿಕೊಳ್ಳುವಂಥವು ಆಗಿದೆ.

## ಸಮಾರೋಪ (15:58)

**58ಆದುದರಿಂದ ಪ್ರೀಯ ಸಹೋದರರೇ, ಸ್ಥಿರಚಿತ್ತರಾಗಿಯೂ ನಿಶ್ಚಲರಾಗಿಯೂ ಇರ್ರಿ. ನೀವು ಕರ್ತನ ಸೇವೆಯಲ್ಲಿ ಪಡುವ ಪ್ರಯಾಸವು ನಿಷ್ಫಲವಾಗುವುದಿಲ್ಲವೆಂದು ತಿಳಿದು ಕರ್ತನ ಕೆಲಸವನ್ನು ಯಾವಾಗಲೂ ಅತ್ಯಾಸೆಯಿಂದ ಮಾಡುವವರಾಗಿರಿ.**

**ವಚನ 58.** ದೇಹೀಯ ಪುನರುತ್ಥಾನದ ಬಗೆಗಿನ ಬೋಧನೆಗಳನ್ನು ಪೌಲನು ಸಮಾರೋಪಿಸುತ್ತಾ ಜೀವಿತಕ್ಕೋಸ್ಕರದ ಇದರ ಸೂಚನೆಗಳತ್ತ ತಿರುಗುತ್ತಾನೆ. ಪುನರುತ್ಥಾನವು ಖಚಿತಪಡಿಸಿದ್ದ ಕಾರಣ, ಕ್ರಿಸ್ತನಲ್ಲಿ ನಂಭಿಗಸ್ತಿಕೆಯನ್ನು ಪುನರ್ ನವೀಕರಣ ಮಾಡುವತ್ತ ಪೌಲನು ತನ್ನ ಓದುಗರನ್ನು ಒತ್ತಾಯಿಸುತ್ತಾನೆ. ಹೊಸ ಒಡಂಬಡಿಕೆಯ ಮರಣ ಮತ್ತು ಮರಣಾನಂತರದ ಸಂಗತಿಗಳ ಸಿದ್ಧಾಂತವು, ಕರ್ತನ ಮರಳುವಿಕೆಯ ಪರಿಶೀಲನೆ, ನಂಬಿಗಸ್ತ ಕ್ರಿಸ್ತೀಯ ಜೀವಿತದ ಪ್ರೋತ್ಸಾಹ, ಎರಡೂ ಇದರಲ್ಲಿನ ನೈತಿಕ ಮತ್ತು ಇದರ ಪಶ್ಚಾತ್ತಾಪದ ಅನ್ವಯಗಳನ್ನು ಪ್ರೋತ್ಸಾಹಿಸುವತ್ತ ನಡೆಸುವುದಾಗಿದೆ. ವಿಧೇಯ ವಿಶ್ವಾಸಿಗಳು ಕೃಪೆಯಿಂದ ನಂಬಿಕೆಯ ಮೂಲಕ ರಕ್ಷಿಸಲ್ಪಟ್ಟಾಗ, ಯಾತ್ರಿಕರ ಸ್ಥಿತಿಯಲ್ಲಿ ಇರುವಂಥ ನಮ್ಮ ಒಳ್ಳೆಯ ಕಾರ್ಯಗಳ ಬೆಳಕಿನಲ್ಲಿ, ನಾವು ಯಾವಾಗಲೂ **ಕರ್ತನ ಕೆಲಸವನ್ನು ಯಾವಾಗಲೂ ಅತ್ಯಾಸೆಯಿಂದ ಮಾಡುವವರಾಗಿರಬೇಕು**. ನಾವು ಅತ್ಯಾಶೆಯಿಂದ ಕೆಲಸ ಮಾಡುವವರಾಗಿರಬೇಕು ಯಾಕೆಂದರೆ ನಾವು ಪಡುವ ಪ್ರಯಾಸವು ನಿಷ್ಫಲವಾಗುವುದಿಲ್ಲವೆಂದು ತಿಳಿದು. ನಮ್ಮಲ್ಲಿ ಪ್ರತಿಯೊಬ್ಬರೂ ಎದ್ದು ಆತ್ಮೀಕ ದೇಹವನ್ನು ಮತ್ತು **ಕರ್ತನ ಜೊತೆ ನಿತ್ಯತ್ವದಲ್ಲಿ** ಆಳುವದನ್ನೂ ಪ್ರತಿಪಾದಿಸುವವರೂ ನಾವು ಕಾರ್ಯಮಾಡಬೇಕು ಬಲ್ಲವರಾಗದ್ದೇವೆ.

ವಿಶ್ವಾಸಿಗಳು ಉನ್ನತವಾದ ನೈತಿಕ ಸಮತೋಲನದಲ್ಲಿ ಜೀವಿಸುತ್ತಾರೆ ಮತ್ತು ಕ್ರಿಸ್ತನಲ್ಲಿ ಫಲಪ್ರದವಾಗಿ ಕಾರ್ಯ ಮಾಡುತ್ತಾರೆ. ನಂಬಿಕೆಯ ಮೂಲಕ ಕೃಪೆಯಿಂದ ರಕ್ಷಣೆಯು ಉತ್ತಮ ಕಾರ್ಯಗಳ ಅಥವಾ ಸಮೃದ್ಧಿಯಾದ ಕಾರ್ಯಗಳಿಗೆ ತಡೆಯೊಡ್ಡದಿರುವದು ಆಗಿದೆ. ದೇವರು ಕೃಪಾಪೂರಿತನೂ ಆಗಿರುವುದರಿಂದ ದೇವರ ರಾಜ್ಯದಲ್ಲಿನ ನಂಬಿಗಸ್ತ ಕೆಲಸಗಾರರಾಗಿ ಇರುವದು ಹೆಚ್ಚಾಗಿ ಅವಷ್ಯವಾಗಿದ್ದು ಆಗಿವೆ

ಇದರಿಂದ ಇತರರರನ್ನು ಆತನ ಕೃಪೆಯಡಿಯಲ್ಲಿ ತರಬಹುದಾಗಿದೆ.

## ಅನ್ವಯಿಸುವಿಕೆ

### ಯಾವ ತರದ ದೇಹ?

ಶತಮಾನಗಳಿಂದ, ನಾಸ್ತಿಕರು ದೇಹೀಯ ಪುನರುತ್ಥಾನಕ್ಕೋಸ್ಕರ ಕ್ರೈಸ್ತರನ್ನು ಗೇಲಿ ಮಾಡುತ್ತಿದ್ದಾರೆ. ಅಣಕುದಾರರು ಘಟನಾವಳಿಗಳನ್ನು ಈ ರೀತಿಯಾಗಿ ಇರಿಸಿದ್ದಾರೆ:

> ಒಬ್ಬ ಮನುಷ್ಯನು ಸೇಬನ್ನು ತಿನ್ನುತ್ತಾನೆ. ಆತನ ದೇಹವು ಹಣ್ಣನ್ನು ಆನಂದಿಸಿತು, ಮತ್ತು ಇದರ ಸಣ್ಣಕಣ ಮತ್ತು ಪರಮಾಣುಗಳು ಆತನ ದೇಹದಲ್ಲಿ ಹರಡಲ್ಪಟ್ಟಿತು. ಬೇಗನೇ ಆತನು ಮರಣಿಸಿದನು ಮತ್ತು ಹೂಣಲ್ಪಟ್ಟನು. ಈ ಸಮಯದಲ್ಲಿ ಹೂಣಲ್ಪಟ್ಟ ಸ್ಥಳವು ಮರೆತುಹೋಯಿತು ಮತ್ತು ಕೆಲವರು ಆತನ ಕೊಳೆತ ಕಳೇ ಬರದ ಮೇಲೆ ನೇರವಾಗಿ ಸೇಬಿನ ಮರವನ್ನು ನೆಟ್ಟರು. ಬೇರುಗಳು ಬೂಮಿಯ ಆಳಕ್ಕೆ ಮುಟ್ಟಿದವು ಮತ್ತು ಮರವು ಸಾವಯವ ಅಂಶಗಳ ಮೂಲಕ ಫಲಕೊಟ್ಟಿತು. ಸತ್ತ ಮನುಷ್ಯನ ದೇಹದ ಸಣ್ಣಕಣ ಮತ್ತು ಪರಮಾಣುಗಳು ಹಣ್ಣನ್ನು ತಿನ್ನುವ ಇನ್ನೊಬ್ಬ ಮನುಷ್ಯನ ಮೂಲಕ ಹೊಸ ಸೇಬಿನ ರೂಪ ತಳೆದವು. ಇದೇ ರೀತಿಯ ಅಂಶಗಳು ಅನೇಕ ಸಮಯದಿಂದ ಇರುವುದಾಗಿದ್ದು ಆದ್ದರಿಂದ ಎರಡು ಭಿನ್ನ ದೇಹಗಳಿಂದ ಇರುವುದಾಗಿದೆ.

ಕಥೆಯ ಮೇಲಿನ ಬದಲಾವಣೆಯು ಅಂತ್ಯವಿಲ್ಲದ್ದು, ಆದರೆ ಅಂತಿಮ ಪ್ರಶ್ನೆಯು ಅದೇ ಅಗಿರುತ್ತದೆ; ಪುನರುತ್ತಾನದಲ್ಲಿ, ಯಾರ ದೇಹವು ಪರಮಾಣುವನ್ನು ಮತ್ತು ಯಾವ ದೇಹವು ಚಿಕ್ಕ ಕಣವನ್ನು ಒಂದಕ್ಕಿಂತ ಹೆಚ್ಚು ದೇಹದ ಭಾಗವವಾಗಿ ಇರಿಸಿಕೊಳ್ಳುತ್ತದೆ.

"ಸತ್ತವರು ಹೇಗೆ ಎಬ್ಬಿಸಲ್ಪಡುತ್ತಾರೆ? ಅವರು ಯಾವ ತರದ ದೇಹದಿಂದ ಬರುತ್ತಾರೆ?" ಎಂದು ಗ್ರೀಕರು ವಿರೋಧಿಸಿ ಪೌಲನಿಗೆ ಮಂಡಿಸದಂತಹ ಅದೇ ತರದವುಗಳನ್ನನು ಆಧುನಿಕ ಶಂಕಾಕರಾರು ಎಬ್ಬಿಸುವುದನ್ನು ಮುಂದುವರೆ ಸುವವರಾಗಿದ್ದಾರೆ (15:35). ಪೌಲನ ಉತ್ತರವು ಪ್ರಾಚೀನ ಜಗತ್ತಿಗೂ ಮತ್ತು ಆಧುನಿಕರಿಗೂ ಇಬ್ಬರಿಗೂ ಸರಿಯಾಗಿದೆ. ಆತನಿಗೆ ಕೇಳಿದ ಪ್ರಶ್ನೆಗಳು ಅಸಂಬದ್ದವಾದವುಗಳು. ಸದ್ದುಕಾಯರು ಯೇಸುವಿಗೆ ಪುನರುತ್ಥಾನದಲ್ಲಿ ಸಂಭವಿಸುವ ಸಂಗತಿಗಳನ್ನು ವಿವರಿಸುವ ಸವಾಲು ಹಾಕಿದಾಗ ಕರ್ತನು "ನೀವು ಶಾಸ್ತ್ರವನ್ನಾದರೂ ದೇವರಶಕ್ತಿಯನ್ನಾದರೂ ತಿಳಿಯದೇ ತಪ್ಪುವವರಾಗಿದ್ದಿರಿ" ಎಂದು ಇದೇ ರೀತಿಯ ಉತ್ತರವನ್ನು ಕೊಡುತ್ತಾನೆ (ಮತ್ತಾಯ 22:29).

ದೇವರು ವಿಭಿನ್ನವಾದ ರೀತಿಯ ದೇಹಗಳನ್ನು ಸೃಷ್ಟಿಸಿದ್ದಾನೆ; ಆತನು ವಿಭಿನ್ನ ವರ್ಗದ ಮಹಿಮೆ ಜೊತೆ ಸೃಷ್ಟಿಸಿದ್ದಾನೆ ಎಂದು ಪೌಲನು ಸ್ಪಷ್ಟಪಡಿಸುತ್ತಾನೆ (1 ಕೊರಿ 15:35–41): ಪುನರುತ್ಥಾನಿತ ದೇಹದ ರೀತಿಯ ಬಗ್ಗೆ ಅಪೊಸ್ತಲನು ಕೆಲ ವಿವರಗಳನ್ನು ಕೊಡುತ್ತಾನೆ, ಆದರೆ ಇದನ್ನು ಆತನು ಸ್ಪಷ್ಟವಾಗಿ ಹೇಳುತ್ತಾನೆ "ರಕ್ತ ಮತ್ತು ಮಾಂಸ ದೇವರ ರಾಜ್ಯಕ್ಕೆ ಬಾಧ್ಯವಾಗಲಾರದು" (15:50). ಬರುವ ದಿನಗಳಲ್ಲಿ ವಿಶ್ವಾಸಿಗಳ ದೇಹವು ನಿತ್ಯದಬಲದ ಜೀವಿತದೊಂದಿಗೆ ಒಂದಾಗುವುದರೊಂದಿಗೆ ಐಕ್ಯತೆಯು ಸಮಗ್ರವೂ ಮತ್ತು ಸಂಪೂರ್ಣವೂ ಆಗುತ್ತದೆ. ಲೌಕೀಕ ಜೀವನದ ವೃದ್ಧಿಗೆ ಬೇಕಾಗುವ

ಪರಮಾಣು ಮತ್ತು ಚಿಕ್ಕ ಕಣಗಳಿಗೆ ದೇವರು ಸೀಮಿತವಾದವನಲ್ಲ. *ದೇವಜನರ ಪರಂಪರೆಯು ದೇಹೀಯ ರೀತಿಯ ಜೀವಿತವಾಗಿದ್ದು ದೇವರು ಪರಲೋಕೀಯ ಅಸ್ಥಿತ್ವಯನ್ನು ಕೊಡುವವನಾಗಿದ್ದಾನೆ.* ಪರಲೋಕೀಯ ಜೀವಿತದಲ್ಲಿನ ಪ್ರಜ್ಞೆಯೊಂದಿಗೆ ಮತ್ತು ಕಾಣಿಸಿಕೊಳ್ಳುವಿಕೆಯಲ್ಲಿ ಕೂಡಾ ಈ ಜಗತ್ತಿನಲ್ಲಿ ಜೀವಿತದೊಂದಿಗೆ ಮುಂದುವರೆದಾಗ, ಪರಲೋಕೀಯ ದೇಹವು ಅದೇರೀತಿಯ ಕಾಲದ ಮಾಂಸ ಮತ್ತು ರಕ್ತಗಳಿಂದ ಮಾಡಲ್ಪಡುವುದಿಲ್ಲ ಎಂಬುದು ನಿಶ್ಚಿತವಾದುದು ಆಗಿದೆ.

## ಮರಣದ ನಂತರದ ಜೀವಿತ

ಪ್ರಾಚ್ಯಶಾಸ್ತ್ರಜ್ಞರು ಪ್ರಾಚೀನ ಜನರ ಅವರ ಹೂಣುವ ಪದ್ಧತಿಯನ್ನು ಪರೀಕ್ಷಿರಿಸುವ ಮೂಲಕ ಅನೇಕ ವಿಷಯಗಳನ್ನು ಕಲಿಯುತ್ತಾರೆ. ಕೆಲಸಮಯದ ಹಿಂದೆ ಪ್ರಾಚ್ಯಶಾಸ್ತ್ರವು (ಸಪ್ಟಂಬರ್/ಅಕ್ಟೋಬರ್ 1997) Scythiansಗೆ ಒಂದು ಲೇಖನವು ಸಮರ್ಪಿತವಾಗಿದ್ದು, ಅದು ಪ್ರಾಚೀನ ಜನರು ಉತ್ತರದ ಕಪ್ಪು ಸಮುದ್ರದ ಹತ್ತಿರ ಕ್ರಿ.ಪೂ.[43] ಮೂರನೆಯ. ಶತಮಾನದವರೆಗೂ ಜೀವಿಸಿದ ಜನರ ಕುರಿತಾದ ಲೇಖನವಾಗಿತ್ತು. ಮಅಲ್ಲಿ ಹತ್ವದ ಪಾಳೆಯಗಾರನ ಸಮಾಧಿಯ ಉತ್ಪನ್ನವಾಯಿತು. ಜೀವವು ಮರಳಿ ಬಂದಾಗ ಅವಶ್ಯವಿರುವ ಎಲ್ಲ ಸಂಗತಿಗಳಾದ ಆಭರಣಗಳ ಕೊರಡಿ, ಯುದ್ಧ ಸಾಮಗ್ರಿ, ಆಹಾರ ಮತ್ತು ಇತರ ಸಂಗತಿಗಳು ಆತನೊಡನೆ ಇಡಲ್ಪಟ್ಟಿದ್ದವು. ಆ ದೊಡ್ಡ ವ್ಯಕ್ತಿಯ ಮುಖ್ಯ ಸಲಹೆಗಾರನು ಮರಣಿದ್ದನು ಮತ್ತು ಆತನೊಡನೆ ಹೂಣಲ್ಪಟ್ಟನು. ಆತನ ಕುದುರೆಯು ಕೊಲ್ಲಪಟ್ಟಿತು ಅದೂ ಕೂಡ ಅದೇ ಮಣ್ಣಿನ ರಾಶಿಯಲ್ಲಿ ಹೂಣಲ್ಪಟ್ಟಿತು. ಆತನ ಸಮಾಧಿಯ ಹತ್ತಿರ ಮಹತ್ವದ ಸ್ತ್ರೀಯ ದೇಹವು ಬಹುಷಃ ಆತನ ಹೆಂಡತಿಯದು ಇನ್ನೊಂದು ಸಮಾಧಿಯು ಇರುವುದಾಗಿದೆ. ಅವಲೂ ಸಹ ತನ್ನೊಡನೆ ಜೀವಿತಕ್ಕೆ ಬೇಕಾದ ಉಪಕರಣಗಳನ್ನು ಹೊಂದಿದ್ದಳು. ಯೌವನಸ್ಥಳಾದ ಆಕೆಯ ದಾಸಿಯೂ ಕೂಡಾ ಅವಳ ಸಮಾಧಿಯಲ್ಲಿ ಸ್ಥಳವನ್ನು ಪಡದಿದ್ದಾಳೆ.

ಮರಣದ ನಂತರದ ಜೀವಿತವನ್ನು ನಂಬುವವರಲ್ಲಿ Scythiansರು ಮಾತ್ರವಾಗಿರಲಿಲ್ಲ. ಪ್ರಾಚೀನ ಜನರು ಮರಣಾ ನಂತರ ಜೀವಿತದ ಬಗ್ಗೆ ತಮ್ಮ ಎದುರು ನೋಡುವಿಕೆಯನ್ನು ಹೊಂದಿದ್ದರು. ಇಜಿಪ್ಟಿನ ಪಿರಾಮಿಡ್ ಮತ್ತು ಅರಸರುಗಳ ಕೊಳ್ಳದ ಸಾಕ್ಷಿಗಳು ಈ ಎಲ್ಲಾ ಪ್ರಯತ್ನಗಳು ಮರಣಾನಂತರ ಜೀವಿತದ ಕುರಿತಾದ ಸಾಕ್ಷಿಗಳು ಅಗಿವೆ. Scythians ಮತ್ತು ಇಜಿಪ್ಟಿಯರಂತೆ ಕ್ರೈಸ್ತರು ಇದಕ್ಕಿಂತ ಮೇಲಾದ್ದನ್ನು ಮುನ್ನೋಡುವವರಾಗಿದ್ದಾರೆ. ಕ್ರಿಸ್ತೀಯ ನಿರೀಕ್ಷೆಯು ಹೇಗೆ ಭಿನ್ನವಾಗಿದೆ? ಇತರ ಜನರಿಗಿಂತಲೂ ಇವರು ಉತ್ತಮವಾದ ಆಧಾರಗಳನ್ನು ಹೊಂದಿದ್ದಾರೆಯೇ? ಪೌಲನು 1 ಕೊರಿಂಥ 15ರಲ್ಲಿ ಪುನರುತ್ಥಾನದ ಬಗ್ಗೆ ಪೌಲನು ಬರೆದದ್ದಕಿಂತಲೂ ಹೆಚ್ಚಿನ ವಿವರವನ್ನು ಯಾವ ಲೇಖಕನೂ ಸತ್ಯವೇದದಲ್ಲಿ ಬರೆದಿಲ್ಲ.

ಪೌಲನ ಪ್ರಕಾರ, ಯೇಸುವಿನ ಕ್ರೂಜಸುವಿಕೆ ಮತ್ತು ಪುರುತ್ಥಾನದ ಸಂಧರ್ಭವನ್ನು ಬಿಟ್ಟು ಮರಣದ ನಂತರ ಯಾವುದೇ ರೀತಿಯ ಮಾತುಗಳು ಅಲ್ಲಿ ಇಲ್ಲ. “ಆದರೆ ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದೇ ಇದ್ದಾನೆ” ಎಂದು ಆತನು ಬರೆಯುತ್ತಾನೆ (15:20). ಸುವಾರ್ತೆಯ ಪ್ರಕಾರ ಆತನು ಘೋಶಿಸಿದ ಸಂದೇಶವು ದೇವವಾಕ್ಯವು ಮತ್ತು

ಇತಿಹಾಸವು ಕರ್ತನ ಮರಣದ, ಹೂಣುವಿಕೆ ಮತ್ತು ಪುನರುತ್ಥಾನವನ್ನು ಒಳಗೊಂಡಿವೆ (15:3, 4). ಈ ಮೂರು ಖಚಿತತೆಗಳು ಸುವಾರ್ತೆಯ ಮೂಲಭೂತವಾಗಿರುವಾಗ, ಪುನರುತ್ಥಾನವು ಮಾತ್ರ ಕೋರಿಂಥದವರಲ್ಲಿ ಗೊಂದಲದಲ್ಲಿ ಇತ್ತು. ಆ ಕಾರಣಕ್ಕಾಗಿ, ಪೌಲನು ಯೇಸುವಿನ ಕಾಣಿಸಿಕೊಳ್ಳುವಿಕೆಯನ್ನು, ಬರೆಯುವಾಗ ಇನ್ನೂ ಜೀವದಿಂದ ಇದ್ದ ಕೆಲವರ ಸಾಕ್ಷಿಯನ್ನು ವಿವರವಾಗಿ ಹೇಳುತ್ತಾನೆ (15:5-8). ಕೇಂದ್ರ ಅಂಶವೆಂದರೆ ಖಾಲಿಯಾದ ಸಮಾಧಿಯು ಮತ್ತು ಯೇಸುವಿನ ಕಾಣಿಸಿಕೊಳ್ಳುವಿಕೆಯು ಸಾಕ್ಷಿಯ ವಿಷಯವಾಗಿ ಹೊಸ ಒಡಂಬಡಿಕೆಯಲ್ಲಿ ಎಂದಿಗೂ ಅಳಿಸಿ ಹೋಗದಂಥದ್ದಾಗಿದೆ. ಇದು ಯೇಸುವಿನ ದೈವತ್ವವನ್ನು ಪ್ರತಿಪಾದಿಸುವವರಿಗೆ ಮೂಲ ಅಂಶವಾಗಿದೆ:

> "ಈ ಯೇಸುವನ್ನು ದೇವರು ಎಬ್ಬಿಸಿದನು, ಇದಕ್ಕೆ ನಾವೆಲ್ಲರೂ ಸಾಕ್ಷಿಗಳಾಗಿದ್ದೇವೆ" (ಅ.ಕೃ. 2:32).
>
> "ಆದರೆ ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನು; ಈ ವಿಷಯದಲ್ಲಿ ನಾವೇ ಸಾಕ್ಷಿಗಳು" (ಅ.ಕೃ. 3:15).
>
> ಆದರೆ ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನು; ಮತ್ತು ಆತನು ಗಲಿಲಾಯದಿಂದ ಯೆರೂಸಲೇಮಿಗೆ ತನ್ನ ಜೊತೆಯಲ್ಲಿ ಬಂದವರಿಗೆ ಅನೇಕ ದಿವಸಗಳ ಪರಿಯಂತರ ಕಾಣಿಸಿಕೊಂಡನು ಅವರು ಈಗ ಜನರ ಮುಂದೆ ಆತನಿಗೆ ಸಾಕ್ಷಿಯಾಗಿದ್ದಾರೆ (ಅ.ಕೃ. 13:30, 31).

ಪೌಲನ ಪತ್ರಗಳಲ್ಲಿನ ಒತ್ತಿಹೇಳುವಿಕೆಯಲ್ಲಿ ಯಾವುದೇ ಭಿನ್ನತೆಯ ಇಲ್ಲ: ಯೇಸುವನ್ನು ಮತ್ತು ಆತನನ್ನು ಮರಣದಿಂದ ಎಬ್ಬಿಸಿದ್ದನ್ನು ಪೌಲನು ಸಾರಿಹೇಳಿದಂಥ ವೇದಭಾಗ 1 ಕೊರಿಂಥ 15 ಮಾತ್ರವೇ ಅಲ್ಲ. ರೋಮಾ 1:4ರಲ್ಲಿ ಆತನು "[ಯೇಸುವು] ಪವಿತ್ರವಾದ ಆತ್ಮವುಳ್ಳವನಾಗಿದ್ದು ಸತ್ತಮೇಲೆ ಜೀವಿತನಾಗಿ ಎದ್ದು ಬಂದ ಮಹತ್ಕಾರ್ಯದಿಂದ ದೇವಕುಮಾರನೆಂದು ನಿರ್ಣಯಿಸಲ್ಪಟ್ಟವನೂ ಆಗಿದ್ದಾನೆ" ಎಂದು ಬರೆಯುತ್ತಾನೆ. ಸುವಾರ್ತೆಯ ಪ್ರಕಾರ ಲೂಕ ಮತ್ತು ಯೋಹಾನರೂ ಕೂಡ ಪುನರುತ್ಥಾನದ ಬಗೆಗ ಹೇಳಿಕ್ಕೆ ಸಾಕಷ್ಟು ಇತ್ತು. ವಾರದ ಮೊದಲನೆಯ ದಿನ ನಸುಕಿನಲ್ಲಿ ಸ್ತ್ರೀಯು ಸಮಾಧಿಯ ಬಳಿ ಹೋದಳು ಮತ್ತು ಅದು ಖಾಲಿಯಾಗಿದ್ದನ್ನು ಕಂಡಳು. ಇಬ್ಬರು ದೇವದೂತರು ಅಲ್ಲಿದ್ದರು, ಮತ್ತು ಅವರಲ್ಲಿ ಒಬ್ಬನು ಬದುಕಿರುವವನನ್ನು ಸತ್ತವರಲ್ಲಿ ಯಾಕೆ ಹುಡುಕುತ್ತಿ ಎಂದು ಕೇಳಿದನು ಎಂದು ಲೂಕನು ಬರೆಯುತ್ತಾನೆ (ಲೂಕ 24:1-5). ಅದೇ ದಿನ ಎಮ್ಮಾಹು ಊರಿಗೆ ಹೋಗುತ್ತಿರುವ ಇಬ್ಬರು ವ್ಯಕ್ತಿಗಳ ಬಗ್ಗೆ ಸುವಾರ್ತಿಕನು ಹೇಳುತ್ತಾ ಹೋಗುತ್ತಾನೆ. ಯೇಸುವು ಅವರೊಡನೆ ಸೇರಿಕೊಂಡನು, ಅವರೊಡನೆ ಸಂಭಾಷಿಸಿದನು ಮತ್ತು ನಂತರ ಅವರ ಮುಂದಿನಿಂದ ಮರೆಯಾದನು (ಲೂಕ 24:13-31). ಕರ್ತನು ತನ್ನ ಕೆಲ ಶಿಷ್ಯರಿಗೆ ಗಲಿಲಾಯದ ತೀರದಲ್ಲಿ ಕಾಣಿಸಿಕೊಂಡಿದ್ದ ಘಟನೆಯನ್ನು ಯೋಹಾನನು ವರ್ಣಿಸುತ್ತಾನೆ (ಯೋಹಾನ 21:1-14; NIV).

ಆ ಘಟನೆಯ ಯುದ್ದಕ್ಕೂ ಜೀವಿಸಿದ ಸಾಕ್ಷಿಗಳ ಮೂಲಕ ಮತ್ತು ಮುಂದಿನ ಪೀಳಿಗೆ ಇದನ್ನು ವಿವರಿಸುವುದು ಹಿಂದಿನ ಘಟನೆಯ ಬಗೆಗ ತಿಳಿಯುವಂಥ ಒಂದೇ

ಮಾರ್ಗವಾಗಿದೆ. ದಾಖಲೆಗಳ ವಿಶ್ವಾರ್ಹತೆಯು ಅಲ್ಲಿ ಯಾವತರದ ಜನರು ಸಾಕ್ಷಿಗಳಾಗಿದ್ದಾರೆ, ನಿಜಾಂಶಗಳ ಲಭ್ಯತೆ, ವದಂತಿಗಳಿಗೆ ವ್ಯತ್ಯಾಸವಾದ ನಿಜವಾಗಿಯೂ ಅವರು ಕಂಡದ್ದು, ಮತ್ತು ತಾವು ನೋಡಿದಂಥ ಅನುಭವಿಸಿದಂಥ ಅವರ ಒಳಗಿನ ಪ್ರೇರಣೆಗಳು ಎಂಬುದರ ಮೇಲೆ ಆತುಕೊಂಡಿದೆ. ಯಾವುದೇ ನಿರ್ಣಯದ ಮೂಲಕ, ಯೇಸುವು ಸತ್ತವರೊಳಗಿಂದ ಎದ್ದದ್ದು ನಂಬಿಕೆಗೆ ಅರ್ಹವಾದ ಪುಷ್ಟೀಕರಿಸಲ್ಪಟ್ಟ ಒಂದು ಪ್ರಮುಖವಾದ ಐತಿಹಾಸಿಕ ಘಟನೆಯಾಗಿದೆ.

---

**ಟಿಪ್ಪಣಿಗಳು**

[1]Homer *The Odyssey* 11. ಸಂಪೂರ್ಣವಾಗಿ 11 ಪುಸ್ತಕಗಳು ಮರ್ತಯ ಲೋಕವನ್ನು ಸಂಧಹಿಸಿದ್ದನ್ನು ವರ್ಣಿಸುವವು ಅಗಿವೆ. [2]Ben Witherington III, *ಕೊರಿಂಥದಲ್ಲಿ ಸಂಘರ್ಷ ಮತ್ತು ಸಮುದಾಯ: A Socio-Rhetorical Commentary on 1 and 2 Corinthians* (Grand Rapids, Mich.: Wm. B. Eerdmans Publishing Co., 1995), 299. [3]ಧರ್ಮೋಪದೇಶಕಾಂಡ 26:5-9 ಇಸ್ರಾಯೇಲಿನ ಸಿದ್ಧಾಂತಗಳ ಹೇಳಿಕೆಗೆ ಮೂಲವಾದದ್ದು ಎಂದು Gerhard von Rad ವಾದಿಸಿದನು. ಇದು ಇಸ್ರಾಯೇಲಿನ "Credo" ಎಂದು ಕರೆದಿದ್ದಾನೆ. (Gerhard von Rad, *Old Testament Theology*, vol. 1, *The Theology of Israel's Historical Traditions*, trans. D. M. G. Stalker [Louisville: Westminster John Knox Press, 2001], 121–22, 17.) [4]Such an approach is seen in Willi Marxen, "Study Two: The Geographical Outline," in *Mark the Evangelist: Studies on the Reaction History of the Gospel*, trans. James Boyce, Donald Juel, William Poehlmann, and Roy A. Harrisville (Nashville: Abingdon Press, 1969), 66–95. [5]Johannes Schneider, "ἔκτρωμα," in *Theological Dictionary of the New Testament*, ed. Gerhard Kittel, trans. and ed. Geoffrey W. Bromiley (Grand Rapids, Mich.: Wm. B. Eerdmans Publishing Co., 1964), 2:465. [6]F. F. Bruce, *Paul: Apostle of the Heart Set Free* (Grand Rapids, Mich.: Wm. B. Eerdmans Publishing Co., 1977), 463. [7]"ಫಿಲಿಪ್ಪಿಯ ಸುವಾರ್ತೆ (II, 3)," trans. Wesley W. Isenberg in *The Nag Hammadi Library*, James Robinson, dir. (New York: Harper & Row, 1977), 144 [8]"ನಾಸ್ತಿಕತೆ" ಯು ಅದು ಕ್ರಿಶ ಮೊದಲ ಶತಮಾನದ ಮಧ್ಯದ ನಂತರದಲ್ಲಿ ಕೆಲ ಸಭೆಗಳನ್ನು ಗಲಿಬಿಗೊಳಿಸುವ ಆದಿಕಾಲದ ವಿರೋಧಾಭಿಪ್ರಾಯವಾಗಿತ್ತು. ಇತರರು ಯೇಸುವಿನ ದೈವತ್ವ ಕೆಲ ನಾಸ್ತಿಕರು ಆತನ ನಿಜಮಾನವತ್ವವನ್ನು ನಿರಾಕರಿಸುವವರಾಗಿದ್ದರು. ನಂಬಿಕೆಯ ಈ ಮಿಶ್ರಣವು ಜೀವಿತದ ಸ್ವಭೋಗಕ್ಕಾಗಿ ಸ್ವನಿರಾಕಣೆ (ದೇಹವನ್ನು ಇಲ್ಲದಂತೆ ಮಾಡುವದು) ಆಗಿದೆ. ನಾಸ್ತಿಕ ಪಂಥವು ಒಂದು ವಿಚಾರವನ್ನು ಸಾಮಾನ್ಯವಾಗಿ ಹೊಂದಿದೆ: ಅವರು ಪ್ರತಿಪಾದಿಸುವ ರಹಸ್ಯವಾದ ಜ್ಞಾನದ (ನಾಸ್ತಿಕತೆ) ಮೂಲಕ ವಾಗ್ದಾನಿತ ರಕ್ಷಣೆಯು ಎಲ್ಲವೂ ಮೂಲತಃವಾಗಿ ಅವರಿಗೆ ಮಾತ್ರ ಪ್ರಕಟವಾದುದು. [9]J. Gresham Machen, *The Origin of Paul's Religion* (Grand Rapids, Mich.: Wm. B. Eerdmans Publishing Co., 1947), 275–76. [10]William F. Orr and James Arthur Walther, *1 Corinthians*, The Anchor Bible (Garden City, N.Y.: Doubleday & Company, 1976), 325.

[11]George Eldon Ladd, *A Theology of the New Testament* (Grand Rapids, Mich.: Wm. B. Eerdmans Publishing Co., 1974), 316. [12]Brevard S. Childs, *Biblical Theology of the Old and New Testaments: Theological Reflection on the Christian Bible* (Minneapolis: Fortress Press, 1992), 580. [13]Everett Ferguson, *Backgrounds of Early Christianity* (Grand Rapids, Mich.: Wm. B. Eerdmans Publishing Co., 1987), 195. [14]Ronald H. Nash, *Christianity and the Hellenistic World* (Grand Rapids, Mich.: Zondervan Publishing House, 1984), 70. [15]Alexander Balmain Bruce, *Apologetics*, International Theological Library (New York: Charles Scribner's Sons, 1892), 246. [16]Ibid. [17]Ladd, 326. [18]Ibid. [19]Augustine *City of God*

13.14. [20]Ibid.

[21]ಅಗುಸ್ಟೀನನು (ಕ್ರಿ.ಸ್ತ. 354-430) ಪ್ರಾಚೀನ ಕ್ರತಗೆಯ (ಆಧುನಿಕ ತುನಿಸ್) ಹತ್ತಿರದಲ್ಲಿಯ ಟಾಗಸ್ಟೆಯಲ್ಲಿ ಜನಿಸಿದನು. [22]David E. Garland, *1 Corinthians*, Baker Exegetical Commentary on the New Testament (Grand Rapids, Mich.: Baker Academic, 2003), 711. [23]Herman Ridderbos, *Paul: An Outline of His Theology*, trans. John Richard DeWitt (Grand Rapids, Mich.: Wm. B. Eerdmans Publishing Co., 1975), 25. [24]Richard DeMaris ರಕೊರಿಂಥದಲ್ಲಿನಪರೀಕ್ಷಿಸಲ್ಪಟ್ಟ ಧಾರ್ಮಿಕ ದೃಷ್ಟಿಕೋನವು ಸತ್ತವರಿಗೋಸ್ಕರ ದೀಕ್ಷಾಸ್ನಾನ ಮಾಡಿಸಿಕೊಳ್ಳುವ ಕ್ರೈಸ್ತರಿಗೆ ಪ್ರೇರೇಪಿಸಿರಬಹುದು. (Richard DeMaris, "Corinthians, Religion and Baptism for the Dead [1 Cor. 15:29]: Insights from Archaeology and Anthropology," *Journal of Biblical Literature* 114 [Winter 1995]: 661–82.) [25]Garland, 719. [26]ಪ್ರಾಚೀನ ಉದಾಹರಣೆಯ ಬಳಿಕೆಗಾಗಿ ಈ ಅಲಂಕಾರಿಕ ವಿವರಣೆಯನ್ನು Abraham Malherbeರಲ್ಲಿ ಕೊಟ್ಟಿದೆ, "The Beasts at Ephesus," *Journal of Biblical Literature* 87 (March 1968): 71–80. [27]The hedonist ರು ಮನದ ಆನಂದಕ್ಕಾಗಿ ಜೀವಿಸುವವರೂ ಮತ್ತು ಲೋಭಿಗಳೂ. [28]Walter Bauer, *A Greek-English Lexicon of the New Testament and Other Early Christian Literature*, 3rd ed., rev. and ed. Frederick William Danker (Chicago: University of Chicago Press, 2000), 1090. [29]Ibid. [30]Garland, 678.

[31]Wayne Grudem, *Systematic Theology: An Introduction to Biblical Doctrine* (Grand Rapids, Mich.: Zondervan Publishing House, 1994), 613. [32]Richard E. Oster, Jr., *1 Corinthians*, The College Press NIV Commentary (Joplin, Mo.: College Press Publishing Co., 1995), 398. [33]Augustine *City of God* 13.17. [34]Garland, 735. [35]Oster, 402. [36]Ridderbos, 76, n. 110. [37]John McRay, *Paul: His Life and Teaching* (Grand Rapids, Mich.: Baker Academic, 2003), 419. [38]R. E. Winsett, "Jesus Is Coming Soon," *Songs of Faith and Praise*, comp. and ed. Alton H. Howard (West Monroe, La.: Howard Publishing Co., 1994). [39]James D. G. Dunn, *The Theology of Paul the Apostle* (Grand Rapids, Mich.: Wm. B. Eerdmans Publishing Co., 1998), 78. [40]Joachim Jeremias, "ರಕ್ತ ಮತ್ತು ಮಾಂಸ ದೇವರ ರಾಜ್ಯಕ್ಕೆ ಬಾಧ್ಯವಾಗಲಾರದು" *New Testament Studies* 2 (1955–56): 151–59.

[41]"ಜೆರಮೀಯನು ಪೌಲನ ವಿಚಾರಸರಣಿಗಳನ್ನು ಅಪಾರ್ಥಗೊಳಿಸಿದ್ದಾನೆ" ಎಂದು Garland ಒತ್ತಿ ಹೇಳಿದ್ದಾರೆ. ಪೌಲನು ಕೇವಲ "ಮಾನವನ ದೈಹಿಕ ಇರುವಿಕೆಯ ಸ್ಥಿತಿಗೆ" "synonymous parallelism" ಬಳಸುವುದಾಗಿದ್ದು ಪೌಲನು ಕೇವಲ ಈ ವಿಚಾರವನ್ನು ಪುನಾರಾವರ್ತಿಸುತ್ತಿದ್ದಾನೆ (Garland, 741). [42]Augustine *City of God* 22.23. [43]Jan Chochorowski and Sergei Skoryi, "Prince of the Great Kurgan," *Archaeology* 50 (September/October 1997): 32–39.